Editor: NITYANANDASWAMI Publisher: U. BASAVARAJA
RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE


ಸಂಪುಟ–18 | ಸಂಚಿಕೆ–11 | ಮಾರ್ಚ್ 11–17, 2024 | ಪುಟ 16 | ರೂ.10/–
Volume-18 | Issue-11 | March 11-17, 2024 | Pages:16 | Price: 10/-




## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ವಿಶೇಷ ಲೇಖನಗಳು



# ಮಹಿಳೆ: ಸಮಾನತೆಗಾಗಿ ನಿಲ್ಲದ ಆಗ್ರಹ




## 'ಭಾರತ್ ರೈಸ್' ನಲ್ಲಿ ಮುಚ್ಚಿಟ್ಟ ಅಜೆಂಡಾಗಳು!



## ಇದು ಮಹಲುಗಳನ್ನು ಕಟ್ಟುವ ಶ್ರಮಜೀವಿಗಳ ಬೆವರಿನ ಕಥೆ





# ಗಂಡು-ಹೆಣ್ಣು ಯಾರೂ ಯಾರನ್ನೂ ಸೋಲಿಸಬೇಕಿಲ್ಲ

**ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಹೆಜ್ಜೆ ಹೆಜ್ಜೆಗೂ ಲಿಂಗ ತಾರತಮ್ಯ, ಪಕ್ಷಪಾತ. ಅನ್ಯಾಯಗಳು. ಅತ್ಯಾಚಾರ, ಮಾನಭಂಗ, ದೌರ್ಜನ್ಯಗಳದ್ದು ಮತ್ತೊಂದು ಮುಖ. ಈ ಲಿಂಗ ಅಸಮಾನತೆಯ ಸ್ವರೂಪವೇನು? ಮೂಲ ಕಾರಣಗಳೇನು? ಪರಿಹಾರವೇನು? ಕೆಲವು ಸರಳ ಉದಾಹರಣೆಗಳ ಮೂಲಕ ಚರ್ಚಿಸುವ ಪ್ರಯತ್ನ ಇದು.**

**ಆರ್. ರಾಮಕೃಷ್ಣ**

'ನನ್ನ ನೀನು ಗೆಲ್ಲಲಾರೆ..'.!! ಅದೊಂದು ಹಳೇ ಸಿನಿಮಾ. ಗಂಡು ಹೆಚ್ಚೋ, ಹೆಣ್ಣು ಹೆಚ್ಚೋ ಎಂಬ ಸ್ಪರ್ಧೆ ಸಿನಿಮಾದಲ್ಲಿ. 'ನನ್ನ ನೀನು ಗೆಲ್ಲಲಾರೆ...' ಎಂಬ ಹಾಡಿನೊಂದಿಗೆ ಸ್ಪರ್ಧೆಯು ನಡೆಯುತ್ತಿದೆ. ಕೊನೆಗೆ ಗಂಡು ತಾನು ತೊಟ್ಟಿರುವ ಅಂಗಿಯನ್ನು ತಗೆದು ಅರೆ ಬೆತ್ತಲೆಯಾಗಿ ನಿಂತು, ಹೆಣ್ಣು ಸಹ ಹೀಗೆ ಮಾಡಬೇಕೆಂದು ಸವಾಲು ಹಾಕುತ್ತಾನೆ. ಆದರೆ ಹೆಣ್ಣು ಗಂಡಿನಂತೆ ಬಹಿರಂಗ ವೇದಿಕೆಯಲ್ಲಿ ತನ್ನ ಉಡುಪನ್ನು ತೆಗೆಯಲಾಗದೇ ಸೋಲು ಒಪ್ಪಿಕೊಳ್ಳುತ್ತಾಳೆ.!!

ಡಾ. ರಾಜಕುಮಾರ್ ಅವರು ಸಿನಿಮಾಗಳಲ್ಲಿ ಹೆಣ್ಣನ್ನು ಕೀಳಾಗಿ ತೋರಿಸುವ, ಕೀಳಾಗಿ ನಿಂದಿಸುವ ಪ್ರವೃತ್ತಿಗೆ ತಕ್ಕಮಟ್ಟಿಗೆ ವಿರುದ್ಧ ಇದ್ದವರು. ಅಂತಹ ಮಹಾನಟರ ಸಿನಿಮಾದಲ್ಲಿಯೂ ಇಂತಹ ಪುರುಷ ಅಹಂಕಾರವನ್ನು ಮೆರೆಸುವ ಕತೆ ಹೇಗೋ ಅವಕಾಶ ಪಡೆದುಕೊಂಡಿತು.

**ಓದಿನಲ್ಲಿ ಮುಂದೆ ಸಾಕ್ಷರತೆಯಲ್ಲಿ ಹಿಂದೆ!!**

ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಬಹುತೇಕ ಯಾವುದೇ ಅಂತಹ ಪ್ರಮುಖ ಪರೀಕ್ಷಾ ಫಲಿತಾಂಶಗಳು ಪ್ರಕಟವಾದಾಗ ವಿದ್ಯಾರ್ಥಿನಿಯರು ಫಲಿತಾಂಶಗಳಲ್ಲಿ ಮುಂದಿರುತ್ತಾರೆ.

ಎಷ್ಟೋ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗೆ ಸಿಗುವಷ್ಟು ಓದಲು ಪ್ರೋತ್ಸಾಹ, ಬಿಡುವು ಸಿಗುವುದಿಲ್ಲ. ಮನೆಯಲ್ಲಿ ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು ಮುಂತಾದ ನಾನಾ ಕೆಲಸಗಳನ್ನು ಮಾಡಲೇ ಬೇಕಾಗುತ್ತದೆ. ಆದರೆ ಗಂಡು ಮಕ್ಕಳಿಗೆ ಈ ಕೆಲಸಗಳಿಂದ ಹೆಚ್ಚಿನಂಶ ವಿನಾಯತಿ ಇರುತ್ತದೆ. ಗಂಡು ಮಕ್ಕಳು ಓದಬಹುದು. ತಮ್ಮಿಷ್ಟದ ಚಟುವಟಿಕೆಗಳಲ್ಲಿ ತೊಡಗಬಹುದು. ಇಷ್ಟಾದರೂ ಕಲಿಕೆಯಲ್ಲಿ ಮುಂದೆ ಇರುವ ಹೆಣ್ಣು ಮಕ್ಕಳು ಸಾಕ್ಷರತೆಯ ಪ್ರಮಾಣದಲ್ಲಿ ಹಿಂದೆ ಇದ್ದಾರೆ. 2011 ರ ಜನಗಣತಿಯ ಪ್ರಕಾರ ಪುರುಷರ ಸಾಕ್ಷರತೆ ಶೇ. 82.14 ಆದರೆ, ಮಹಿಳಾ ಸಾಕ್ಷರತೆ 65.46 ಮಾತ್ರ.

**ಕಾಲೇಜಲ್ಲ ಮದುವೆ...**

ಅದೊಂದು ಕೆಳ ಮಧ್ಯಮ ವರ್ಗದ ಕುಟುಂಬ. ಮನೆಯಲ್ಲಿನ ಇಬ್ಬರು ಗಂಡು ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಇಲ್ಲ. ಕನಿಷ್ಟ ಎಸ್.ಎಸ್.ಎಲ್.ಸಿ. ಪಾಸ್ ಮಾಡಿಕೊಳ್ಳಿ, ಮತ್ತೆ ಪರೀಕ್ಷೆ ಕಟ್ಟಿ, ಪ್ರಯತ್ನ ಬಿಡಬೇಡಿ ಎಂದು ಅಪ್ಪ ಅಮ್ಮ ಗಂಡು ಮಕ್ಕಳನ್ನು ಒತ್ತಾಯಿಸುತ್ತಾರೆ. ಅದೇ ಮನೆಯ ಇಬ್ಬರು ಹೆಣ್ಣು ಮಕ್ಕಳು ಚೆನ್ನಾಗಿ ಓದಿದರು. ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತಮ ಸಾಧನೆಯನ್ನೂ ಮಾಡಿದರು. ಕಾಲೇಜು ಸೇರಬೇಕೆಂಬ ಆಸೆ ಇತ್ತು. ಆದರೆ ಆ ಮನೆಯಲ್ಲಿ ಹೆಣ್ಣು ಮಕ್ಕಳು ಕಾಲೇಜು ಸೇರಲು ಒಪ್ಪಿಗೆ ಸಿಗಲೇ ಇಲ್ಲ. ಆದಷ್ಟೂ ಬೇಗ ಹೆಣ್ಣು ಮಕ್ಕಳ ಮದುವೆ ಮಾಡಿ ಕಳಿಸಲಾಯಿತು.

ಹೆಣ್ಣು ಮಕ್ಕಳು ಎಂದರೆ ಮಡಿಲಿನಲ್ಲಿ ಕಟ್ಟಿಕೊಂಡ ಕೆಂಡ ಎಂಬುದು ಹಲವು ಪೋಷಕರ ಭಾವನೆ. ಹೇಗಾದರೂ ಮಾಡಿ ಆದಷ್ಟೂ ಬೇಗ ಒಂದು ಮದುವೆ ಅಂತ ಮಾಡಿ ಸಾಗಹಾಕಬೇಕು ಎಂಬ ಧೋರಣೆ ಪೋಷಕರಲ್ಲಿ. ಸುತ್ತಮುತ್ತಲ ಕಾಮುಕ ಶಕ್ತಿಗಳಿಂದ ಹೆಣ್ಣು ಮಕ್ಕಳನ್ನು ಕಾಪಾಡಿಕೊಳ್ಳುವುದೊಂದು ಸವಾಲು ಸಹ ಪೋಷಕರಿಗೆ.

**ಪೊರಕೆ ಮುಟ್ಟಬಾರದು! ಚಿತ್ರಾನ್ನ ಮಾಡಲೂ ಬರದು...!!**

ಮನೆಯಲ್ಲಿ ಸಾಮಾನ್ಯವಾಗಿ ಅಡುಗೆ ಮನೆ ಕೆಲಸಗಳು ಹೆಣ್ಣಿನ ಜವಾಬ್ದಾರಿ. ಮಹಿಳೆ ಹೊರಗೆ ಹೋಗಿ ದುಡಿದು ಬಂದರೂ ಮನೆಯ ಕೆಲಸಗಳು ಹೆಣ್ಣಿನ ಹೆಗಲಿಗೇ. ಗಂಡು ಪೊರಕೆ ಮುಟ್ಟಬಾರದು ಎಂಬ ನಂಬಿಕೆಯೊಂದು ಜನರಲ್ಲಿದೆ. ಮನೆ ಕೆಲಸಗಳೆಲ್ಲಾ ಹೆಣ್ಣಿನದೇ ಎಂಬುದು ಅದರ ಸಂದೇಶ. ನಮ್ಮ ಸಮಾಜದ ಶೇ.80-85 ರಷ್ಟು ಗಂಡಸರಿಗೆ ಒಂದೆರಡು ಈರುಳ್ಳಿ, ಹಸಿರು ಮೆಣಸಿನಕಾಯಿ ಕತ್ತರಿಸಿ ಹಾಕಿ ಚಿತ್ರಾನ್ನ ಕೂಡ ಮಾಡಿಕೊಳ್ಳಲು ಬರುವುದಿಲ್ಲ. ಅದಕ್ಕೂ ಮಹಿಳೆಯರ ಮೇಲೆ ಅವಲಂಬನೆ. ಬಹಳಷ್ಟು ಸಾರಿ ಮಹಿಳೆಯರೂ ಇದಕ್ಕೆ ಪೂರಕವಾಗಿ ನಡೆದುಕೊಳ್ಳುತ್ತಾರೆ. ಇಲ್ಲೊಂದು ವಿಶೇಷವಿದೆ. ಅದನ್ನು ಗಮನಿಸಬೇಕು.

**ದುಡ್ಡು ಬರುವುದಿದ್ದರೆ ಗಂಡಸರು**

ಮದುವೆ, ನಾಮಕರಣ ಮುಂತಾದ ನಾನಾ ಸಮಾರಂಭಗಳಿಗೆ ವೃತ್ತಿಪರ ಅಡುಗೆಯವರನ್ನು ಕರೆಸಿದರೆ, ಸಾಮಾನ್ಯವಾಗಿ ಅಲ್ಲಿ ಅಡುಗೆ ಮಾಡಲು ಬರುವವರು ಬಹುತೇಕ ಗಂಡಸರು. ಅಂದರೆ ಒಂದು ಕೌಶಲ್ಯವು ವೃತ್ತಿಯಾದಾಗ, ಅದರಲ್ಲಿ ಹಣ ಸಂಪಾದನೆ ಇದೆ ಎಂದಾಗ ಅಲ್ಲಿ ಗಂಡಸರು ಹಿಡಿತ, ಏಕಸ್ವಾಮ್ಯ ಸಾಧಿಸುತ್ತಾರೆ ಎಂದಲ್ಲವೇ ಇದರ ಅರ್ಥ.??

**ಅತಿಥಿ ಮಹಿಳೆಯರೇ ಮನೆಯವರ ಉಪಚಾರಕ್ಕೆ ನಿಂತಾಗ..**

ಯಾವುದೇ ಮನೆಗೆ ಅತಿಥಿಗಳು ಬಂದಾಗ ಮನೆಯಲ್ಲಿರುವ ಮಹಿಳೆಯರಿಗೆ ಅತಿಥಿಗಳನ್ನು ಉಪಚರಿಸುವ ಜವಾಬ್ದಾರಿ ಹೆಚ್ಚೇ ಬೀಳುತ್ತದೆ. ಇಲ್ಲೊಂದು ವಿಶೇಷವಿದೆ. ಅದನ್ನೂ ಗಮನಿಸಬೇಕು. ಬಂದ ಅತಿಥಿಗಳಲ್ಲಿ ಮಹಿಳೆಯರಿದ್ದರೆ ಎಷ್ಟೋ ಸಾರಿ ಆ ಅತಿಥಿ ಮಹಿಳೆಯರು, ಮನೆಯ ಮಹಿಳೆಯರೂ ಸೇರಿ ಅತಿಥಿ ಪುರುಷರು ಮತ್ತು ಮನೆಯ ಪುರುಷರ ಉಪಚಾರಕ್ಕೆ ನಿಲ್ಲುವ ಪ್ರಸಂಗಗಳು ನಮ್ಮಲ್ಲಿ ಅಪರೂಪವೇನಲ್ಲ.

**ಬಸ್ಸುಗಳಲ್ಲೇ ಸೀಟು ಬಿಡುವುದಿಲ್ಲ.. ಇನ್ನು...**

ನಗರಗಳ ಬಸ್ಸುಗಳಲ್ಲಿ ಮುಂದಿನ ನಾಲ್ಕು ಸೀಟುಗಳನ್ನು ಮಹಿಳೆಯರಿಗೆ ಮೀಸಲಿಟ್ಟಿರುವ 'ಲಿಂಗ ತಾರತಮ್ಯ'ದ ವಿರುದ್ಧ 'ಸಮಾನತೆ'ಗಾಗಿ ದೊಡ್ಡ ದೊಡ್ಡ ಭಾಷಣ ಬಿಗಿಯುವ ಗಂಡಸರಿಗೇನು ನಮ್ಮಲ್ಲಿ ಕಡಿಮೆ ಇಲ್ಲ. ಉಳಿದ ಸೀಟುಗಳೂ ಖಾಲಿ ಇದ್ದರೂ ಬೇಕೆಂದೇ ಮಹಿಳೆಯರ ಸೀಟುಗಳಲ್ಲಿ ಹೋಗಿ ಕೂರುವವರಿದ್ದಾರೆ. ಕೇಳಿದರೂ ಮಹಿಳೆಯರಿಗೆ ಸೀಟು ಬಿಟ್ಟುಕೊಡದೇ 'ಗಂಡಸುತನ'ದ ವೀರಾವೇಶ ಮೆರೆಯುವವರೂ, ಮಹಿಳೆಯರ ಸೀಟಿನಲ್ಲಿ ಕೂತದ್ದಲ್ಲದೇ ತಾವು ಇಳಿಯುವಾಗ ಹಿಂದೆ ಇದ್ದ ಪುರುಷರನ್ನು ಕರೆದು ಕೂರಿಸಿ ಹೋಗುವ ಗಂಡಸರೂ ಇದ್ದಾರೆ.

ಎಷ್ಟೋ ಮನೆಗಳಲ್ಲಿ ದುಡಿಯುವ ಮಹಿಳೆಯರು ಬೆಳಿಗ್ಗೆ 4 ಗಂಟೆಗೋ 5 ಗಂಟೆಗೋ ಎದ್ದು ಅಡುಗೆ ಕೆಲಸ, ಮನೆ ಕೆಲಸ, ಮಕ್ಕಳನ್ನು ಶಾಲೆಗೆ ಸಿದ್ದ ಮಾಡುವುದು, ಮನೆಯ ಗಂಡಸರ ಸೇವೆ, ಹಿರಿಯರನ್ನು ಉಪಚರಿಸುವುದು ಮುಂತಾದವುಗಳನ್ನು ಮುಗಿಸಿ ಬಂದಿರುತ್ತಾರೆ. ಬೆಳಗಿನ ತಿಂಡಿ ತಿನ್ನಲೂ ಆಗಿರುವುದಿಲ್ಲ. ಮಹಿಳಾ ಸೀಟಿನಲ್ಲಿ ಕೂತು ತಾವು ತಂದಿರುವ ಡಬ್ಬಿಯಲ್ಲಿ ತಿಂಡಿ ತಿನ್ನುತ್ತಾರೆ. ಗಂಡಸರಲ್ಲಿ ಎಷ್ಟೋ ಜನ ಬೆಳಿಗಿನ ವಾಕಿಂಗ್, ಇಲ್ಲಾ ಬ್ಯಾಡ್ಮಿಂಟನ್ ಆಟ ಮುಗಿಸಿ, ಪತ್ರಿಕೆಯ ಓದಿ, ಸ್ನಾನ ಮುಗಿಸಿ, ಮನೆಯ ಮಹಿಳೆಯರು ಮಾಡಿಟ್ಟ ತಿಂಡಿ ತಿಂದು ಮುಗಿಸಿ ಬಂದಿರಬಹುದು.

ಇಂತಹ ಸಮಾಜದಲ್ಲಿ ಪಾರ್ಲಿಮೆಂಟು ಹಾಗೂ ವಿಧಾನ ಸಭೆಗಳಲ್ಲಿ ಒಂದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿ ಇಡುವುದಕ್ಕೆ ನೂರೆಂಟು ಅಡೆತಡೆಗಳು ಬರುವುದು ಸಹಜವೇ ಆಗಿದೆ. ಸಾಮಾನ್ಯವಾಗಿ ಪುರುಷರು ಮಹಿಳೆಯರೊಂದಿಗೆ ಅಧಿಕಾರವನ್ನು ಹಂಚಿಕೊಳ್ಳಲು ಬಯಸುವುದಿಲ್ಲ. ಸಾಮಾಜಿಕ ವ್ಯವಸ್ಥೆಯ ಮೇಲಿನ ತಮ್ಮ ಹಿಡಿತವನ್ನು ಸಡಲಿಸುವ ಯಾವ ಕ್ರಮವನ್ನೂ ಪುರುಷ ಪ್ರಧಾನ ಸಮಾಜ ಸುಲಭವಾಗಿ ಒಪ್ಪುವುದಿಲ್ಲ.

**'ಮಾಂಗಲ್ಯ', 'ಕಾಲುಂಗುರ', 'ಕೈಬಳೆ'**

ಆಕೆ ಒಬ್ಬ ಜನಪ್ರಿಯ ಸಿನಿಮಾ ನಟಿ. 'ಮಾಂಗಲ್ಯ', 'ಕಾಲುಂಗುರ', 'ಕೈಬಳೆ', 'ಕುಂಕುಮ', 'ಮುತ್ತೈದೆ', 'ತವರು' ಮುಂತಾದ ಹೆಸರುಗಳಲ್ಲಿ ಮಹಿಳೆಯರ ಕಣ್ಣೀರ ಕೋಡಿ ಹರಿಸುವಂತಹ ಹತ್ತಾರು 'ಭಾವನಾತ್ಮಕ' ಚಿತ್ರಗಳಲ್ಲಿ ನಟಿಸಿ ಸಾಕಷ್ಟು ಹೆಸರು ಮಾಡಿದವರು. ಒಂದು ಘಟ್ಟದಲ್ಲಿ ಆಕೆ ತಮ್ಮ ವೈಯುಕ್ತಿಕ ಜೀವನದಲ್ಲಿ ಗಂಡನಿಗೆ ವಿಚ್ಛೇದನ ನೀಡುವ ತೀರ್ಮಾನ ಮಾಡಿದರು. ಮತ್ತೊಬ್ಬ ಪುರುಷನನ್ನು ಮದುವೆಯಾಗುವ ತೀರ್ಮಾನವನ್ನೂ ಘೋಷಿಸಿದರು. ಅದು ಅವರ ಖಾಸಗಿ ವಿಚಾರ. ಓಹೋ ಅಘಾತ !! ಸಿನಿಮಾಗಳಲ್ಲಿ ಸಿನಿಮಾದ ಪಾತ್ರವಾಗಿ ಪತಿನಿಷ್ಠೆ, ಪಾತಿವ್ರತ್ಯ ಮುಂತಾದ ಸಾಂಪ್ರದಾಯಿಕ ಮೌಲ್ಯಗಳನ್ನು ಈಕೆ ಪ್ರತಿಪಾದಿಸಿರುವುದನ್ನು ನೋಡಿ, ಅಕೆಯ ವೈಯುಕ್ತಿಕ ನಿಲುವು ಸಹ ಅದೇ ಎಂದು ನಂಬಿಕೊಂಡ ದೊಡ್ಡ ಸಂಖ್ಯೆಯ ಮಹಿಳೆಯರು ಬೆಚ್ಚಿಬಿದ್ದರು. ಎಂತಹ ಮುಗ್ಧತೆ !! ಇಂತಹ ಮುಗ್ಧತೆಯೇ ಪುರುಷ ಪ್ರಧಾನ ಸಮಾಜದ ಮಹಿಳಾ ವಿರೋಧಿ ನೀತಿಗಳು, ಮೌಲ್ಯಗಳು ಗಟ್ಟಿಗೊಳ್ಳಲು ಕಾರಣವಾಗಿದೆ.

**ದುಡಿಮೆಯೋ ದುಡಿಮೆ, 'ಗಳಿಸಿದ್ದು' ಮಾತ್ರ ಕಡಿಮೆ**

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಒಮ್ಮೆ ನಾನು ನನ್ನ ಮನೆಯ ಸುತ್ತಮುತ್ತಲ ಮನೆಗಳಲ್ಲಿ ಮಹಿಳೆಯರು ದುಡಿಯುತ್ತಿದ್ದಾರೋ ಇಲ್ಲವೋ ಎಂದು ಹೀಗೆ ಒಮ್ಮೆ ಯೋಚಿಸಿದೆ. ಒಂದು ಮನೆಯಲ್ಲಿ ಮಹಿಳೆ ತರಕಾರಿ ಅಂಗಡಿ ನಡೆಸುತ್ತಾರೆ. ಸಂಜೆ ಬಜ್ಜಿ-ಬೋಂಡ ಕೂಡ ಮಾರಾಟ ಮಾಡುತ್ತಾರೆ. ಮತ್ತೊಂದು ಮನೆಯ ಮಹಿಳೆ ಕಾಲೇಜೊಂದರಲ್ಲಿ ಆಯಾ. ಅವರ ಮಗಳಿಗೆ ಗಾರ್ಮೆಂಟೊಂದರಲ್ಲಿ ಕೆಲಸ. ಮತ್ತೊಬ್ಬರಿಗೆ ಮನೆಗೆ ಅಂಟಿಕೊಂಡೇ ಇರುವ ದಿನಸಿ ಅಂಗಡಿಯ ಪ್ರಧಾನ ಜವಾಬ್ದಾರಿ. ಅಂದರೆ ಮನೆಯನ್ನೂ ನೋಡಿಕೊಂಡು ಅಂಗಡಿಯನ್ನು ಸಂಬಾಳಿಸುವ ಮಹಿಳೆ ಈಕೆ. ಮತ್ತೊಬ್ಬ ಮಹಿಳೆ ಶಿಕ್ಷಕಿ. ಇನ್ನೊಬ್ಬರು ಕೆ.ಇ.ಬಿ. ಯಲ್ಲಿ ದುಡಿದು ನಿವೃತ್ತರಾಗಿದ್ದಾರೆ. ಅವರ ನಿವೃತ್ತಿ ವೇತನ ಕುಟುಂಬದ ಒಂದು ಪ್ರಮುಖ ಆದಾಯ. ಆ ಮಹಿಳೆ ಕಾಲೇಜೊಂದರಲ್ಲಿ ಕ್ಲರ್ಕ್. ಈ ಮಹಿಳೆ ಕೂಲಿ ಕೆಲಸ ಮಾಡುವರು. ಒಬ್ಬರು ಪುಟ್ಟ ಟೀ ಅಂಗಡಿ ನಡೆಸುತ್ತಾರೆ. ಮತ್ತೊಬ್ಬರು ಗಂಡನೊಂದಿಗೆ ಸೇರಿ ಮನೆಯ ಬಳಿಯೇ ಹೋಟೆಲ್ ನಡೆಸುತ್ತಾರೆ. ಒಬ್ಬಿಬ್ಬರು ಮಾತ್ರ ಗೃಹಿಣಿಯರು.(ಗೃಹಿಣಿಯರಿಗೆ ಮನೆಯಲ್ಲಿನ ಕೆಲಸಗಳೇನು ಕಮ್ಮಿ ಇಲ್ಲವಲ್ಲ.!!) ಅರೆ ಸುಮ್ಮನೆ ಕುಳಿತವರು ಯಾರೂ ಇಲ್ಲ. !! ಬಹುತೇಕ ಎಲ್ಲ ಮನೆಗಳಲ್ಲೂ ಮಹಿಳೆಯರು ದುಡಿಯುತ್ತಿದ್ದಾರೆ. ಮನೆಯ ಆಧಾರವಾಗಿದ್ದಾರೆ. ಎಷ್ಟೋ ಮನೆಗಳಲ್ಲಿ ಈ ಮಹಿಳೆಯರು ಮನೆಯ ಆದಾಯದ ಏಕೈಕ ಆಧಾರವಾಗಿದ್ದಾರೆ. ಅಥವಾ ಪ್ರಮುಖ ಆದಾಯದ ಮೂಲವಾಗಿದ್ದಾರೆ. ನಮ್ಮ ಬಡಾವಣೆ ಒಂದು ಉದಾಹರಣೆಯಷ್ಟೆ. ಎಲ್ಲ ಕಡೆ ಬಹುತೇಕ ಹೀಗೇ. ಎಷ್ಟೋ ಕುಟುಂಬಗಳಲ್ಲಿ ಗಂಡಸರು ದುಡಿದರೂ ಕುಡಿತ, ದುಂದು ವೆಚ್ಚದ ವ್ಯವಹಾರಗಳಲ್ಲಿ ತೊಡಗಿ ಮನೆಗೆ ಹಚ್ಚಿಗೆ ಏನೂ ಕೊಡುವುದಿಲ್ಲ. ಹಳ್ಳಿಗಾಡು

ಪುಟ 6 ಕ್ಕೆ

ಸಂಪಾದಕೀಯ

# ವಿರೋಧ ಪಕ್ಷದ ವಿರೋಧ ರಚನಾತ್ಮಕವಾಗಿರಲಿ

ಸಂಸದೀಯ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳ ಪಾತ್ರ ಬಹಳ ಮಹತ್ವದ್ದು. ಆಡಳಿತ ಪಕ್ಷದ ನೀತಿ–ಧೋರಣೆ, ಕಾರ್ಯಕ್ರಮಗಳ ವಿಷಯದಲ್ಲಿ ಜನಪರವಾಗಿ ನಿಂತು ಯೋಚಿಸಿ, ಅವುಗಳಲ್ಲಿ ದೋಷ, ಕೊರತೆ, ಜನವಿರೋಧಿ ಅಂಶಗಳಿದ್ದಲ್ಲಿ ಅವುಗಳನ್ನು ಬಯಲಿಗೆಳೆದು ಜನಜಾಗೃತಿ ಮೂಡಿಸುವುದು, ಹೋರಾಟ ನಡೆಸುವುದು ಯಾವುದೇ ವಿರೋಧ ಪಕ್ಷದ ಆದ್ಯ ಕರ್ತವ್ಯ.

ರಾಜ್ಯದಲ್ಲಿ ಸುಮಾರು ನಾಲ್ಕು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಬಿಜೆಪಿಯನ್ನು ಕಳೆದ 2023 ರ ವಿಧಾನ ಸಭಾ ಚುನಾವಣೆಯಲ್ಲಿ ನಿರ್ಣಾಯಕವಾಗಿ ಸೋಲಿಸಿದ ಜನರು ಬಿಜೆಪಿ ಪಕ್ಷಕ್ಕೆ ವಿರೋಧ ಪಕ್ಷವಾಗಿ ಕೆಲಸ ಮಾಡುವ ಹೊಣೆಗಾರಿಕೆ ನೀಡಿದ್ದಾರೆ. ವಿರೋಧ ಪಕ್ಷವಾಗಿ ಕೆಲಸ ಮಾಡುವುದು ಎಂದರೆ ಆಳುವ ಸರಕಾರವು ಜಾರಿಗೆ ತರುವ ಎಲ್ಲ ನೀತಿಗಳನ್ನು ಕಾರ್ಯಕ್ರಮಗಳನ್ನು ವಿರೋಧ ಮಾಡುತ್ತಲೇ ಇರುವುದು ಎಂದಲ್ಲ. ವಿರೋಧ ಎಂಬುದು ಅರ್ಥಪೂರ್ಣವಾಗಿರಬೇಕು. ವಿರೋಧವು ರಚನಾತ್ಮಕವಾಗಿರಬೇಕು. ಆದರೆ ದ್ವೇಷಪೂರಿತವಾದ ಜನವಿಭಜಕ ಕಾರ್ಯಕ್ರಮ, ದಿವಾಳಿಖೋರ ನೀತಿಗಳು, ದುರಾಡಳಿತ ಮತ್ತು ಭ್ರಷ್ಟಾಚಾರದಿಂದ ಅಧಿಕಾರವನ್ನು ಕಳೆದುಕೊಂಡ ಬಿಜೆಪಿಯು ಜನಾದೇಶದಿಂದ ಯಾವ ಪಾಠವನ್ನು ಕಲಿಯದೇ ವಿರೋಧಕ್ಕಾಗಿ ವಿರೋಧ ಎಂಬಂತೆ ವರ್ತಿಸುತ್ತಿರುವುದು ಅದರ ನಡವಳಿಕೆಗಳಿಂದ ಸ್ಪಷ್ಟವಾಗಿದೆ.

ಸೋಲು, ಅಧಿಕಾರಹೀನತೆಯಿಂದ ಕಂಗೆಟ್ಟಿರುವ ಬಿಜೆಪಿಯು ಎಲ್ಲ ವಿಷಯಗಳನ್ನು ಮತ್ತೆ ಅದೇ ತನ್ನ ಹಳೆಯ ದ್ವೇಷಪೂರಿತ ವಿಭಜಕ ಕೋಮುವಾದಿ ಅಜೆಂಡಾಗಳಿಗೆ ತಳುಕು ಹಾಕಲು ಪ್ರಯತ್ನಿಸುತ್ತಾ ಜನದ್ರೋಹ ಬಗೆಯುತ್ತಿದೆ. ಇತ್ತೀಚಿನ ರಾಜ್ಯಸಭಾ ಚುನಾವಣೆಗಳ ಫಲಿತಾಂಶದ ನಂತರದ ಬಿಜೆಪಿಯ ವರ್ತನೆಯೂ ಅದಕ್ಕಿಂತ ಭಿನ್ನವಾಗೇನೂ ಇಲ್ಲ.

ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯ ಫಲಿತಾಂಶವು ಪ್ರಕಟವಾದಾಗಿನ ಸಂತೋಷಾಚರಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ವಿಜೇತ ಅಭ್ಯರ್ಥಿ ನಾಸಿರ್ ಹುಸೇನ್ ಬೆಂಬಲಿಗರು 'ಪಾಕಿಸ್ತಾನ್ ಜಿಂದಾಬಾದ್' ಎಂಬ ಘೋಷಣೆ ಕೂಗಿದ್ದಾರೆ ಎಂಬ ವಿವಾದ ಸ್ಫೋಟಗೊಂಡಿತು. ಒಂದು ಕಡೆಯಿಂದ ಘೋಷಣೆ ಕೂಗಿರುವುದು 'ನಾಸಿರ್ ಸಾಬ್ ಜಿಂದಾಬಾದ್' ನಾಸೀರ್ ಖಾನ್ ಜಿಂದಾಬಾದ್'' ಎಂದು, 'ಪಾಕಿಸ್ತಾನ್ ಜಿಂದಾಬಾದ್' ಎಂದಲ್ಲ ಎಂಬ ಸ್ಪಷ್ಟನೆಗಳು ಬಂದವು. ಸರಕಾರ ಈ ಕುರಿತು ಪೋಲಿಸ್ ಇಲಾಖೆಯ ಎಫ್.ಎಸ್.ಎಲ್. ತನಿಖಾ ವರದಿಗೆ ಅದೇಶಿಸಿತು. ಅಧಿಕೃತ ವರದಿಯಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿರುವುದು ನಿಜವೆಂದು ಈ ವರದಿ ಆಧಾರದಲ್ಲಿ ಮೂವರು ಆರೋಪಿಗಳನ್ನು ಬಂಧಿಸಿರುವುದಾಗಿ ಹಾಗೂ ತನಿಖೆಯನ್ನು ಮುಂದುವರಿಸಿರುವುದಾಗಿ ಸರಕಾರದ ಗೃಹಮಂತ್ರಿ ತಿಳಿಸಿದ್ದಾರೆ.

ಸಂಭ್ರಮಾಚರಣೆಯ ವೇಳೆ 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿರುವವರು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಎಂದು ಹೇಳಲಾಗುತ್ತಿದೆ. ಇದರ ಸತ್ಯಾಸತ್ಯತೆಯ ಕುರಿತು ಮತ್ತಷ್ಟು ಆಳವಾಗಿ ತನಿಖೆ ನಡೆಯಬೇಕು ಎಂಬ ಆಗ್ರಹವಿದೆ. ಪಕ್ಷ, ಸಂಘಟನೆ ಯಾವುದೇ ಇರಲಿ ಈ ವಿಷಯದಲ್ಲಿ ಮತ್ತಷ್ಟು ತನಿಖೆ, ಕಾನೂನುಬದ್ಧ ಕ್ರಮ ಏನು ಜರುಗಬೇಕೋ ಅದು ಸಾಧ್ಯವಾದಷ್ಟೂ ಬೇಗನೆ ಜರುಗಬೇಕಿದೆ, ಒಟ್ಟು ಸತ್ಯಾಂಶ ಹೊರಬರಬೇಕಿದೆ.

ಇಲ್ಲಿ ಕೆಲವು ಬಹಳ ಸೂಕ್ಷ್ಮವಾದ ಗಂಭೀರವಾದ ವಿಷಯಗಳಿವೆ. ಹಲವು ಪ್ರಶ್ನೆಗಳನ್ನು ಎತ್ತಲಾಗಿದೆ. ಅದನ್ನು ಗಮನಿಸಬೇಕು. 'ಪಾಕಿಸ್ತಾನ್ ಜಿಂದಾಬಾದ್' ಎಂಬ ಘೋಷಣೆ ಕೂಗಿದವರ ಹಿಂದೆ ಯಾರಿದ್ದಾರೆ. ಅವರ ಉದ್ದೇಶವೇನು? ದೇಶವಿರೋಧಿ ಭಯೋತ್ಪಾದಕ ಸಂಘಟನೆಗಳು– ಶಕ್ತಿಗಳು ಈ ಕೃತ್ಯದ ಹಿಂದಿದ್ದಾರೆಯೇ? ಈ ಎಲ್ಲವುಗಳ ಬಗೆಗೆ ಸರಿಯಾದ ತನಿಖೆಯಾಗಬೇಕು.

ಇದು ಲೋಕ ಸಭಾ ಚುನಾವಣೆಗಳು ಹತ್ತಿರವಾಗುತ್ತಿರುವ ಸಂದರ್ಭ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾದವರು 'ಪಾಕಿಸ್ತಾನ್ ಜಿಂದಾಬಾದ್' ಎಂದು ವಿಧಾನ ಸೌಧದೊಳಗೆ ಘೋಷಣೆ ಕೂಗಿದರೆ ಅದರಿಂದ ಕಾಂಗ್ರೆಸ್ ಪಕ್ಷಕ್ಕೆ ಹಾನಿ ಮತ್ತು ವೈಯುಕ್ತಿಕವಾಗಿ ಈ ಘೋಷಣೆ ಕೂಗಿದವರಿಗೆ ಸಂಕಷ್ಟ ಖಚಿತ. ಘೋಷಣೆಯ ಸಂಭವನೀಯ ಪರಿಣಾಮವು ಸೂರ್ಯನ ಬೆಳಕಿನಷ್ಟು ಸ್ಪಷ್ಟ ಇರುವಾಗಲೂ ಕಾಂಗ್ರೆಸ್ ಕಾರ್ಯಕರ್ತರು 'ಪಾಕಿಸ್ತಾನ್ ಜಿಂದಾಬಾದ್' ಎಂದು ಘೋಷಣೆ ಕೂಗುತ್ತಾರೆಂದಾದರೆ ಅದರ ಕಾರಣಗಳೇನಿರಬಹುದು? ಇದರ ಹಿಂದೆ ಏನು ಕುತಂತ್ರಗಳಿರಬಹುದು, ಯಾರೆಲ್ಲಾ ಈ ಕುತಂತ್ರದಲ್ಲಿ ಭಾಗಿ ಆಗಿರಬಹುದು ಈ ಎಲ್ಲ ದೃಷ್ಟಿಕೋನಗಳಿಂದಲೂ ತನಿಖೆಯಾಗಬೇಕು.

ಹಿಂದೆ ಸಿಂಧಗಿಯಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸಿದ ಪ್ರಸಂಗವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಪ್ರಕರಣದಲ್ಲಿ ಪಾಕಿಸ್ತಾನದ ಧ್ವಜವನ್ನು ಹಾರಿಸಿದವರು ಕೇಸರಿ ಬಳಗದವರು, ಸಂಘ ಪರಿವಾರಕ್ಕೆ ಸೇರಿದವರು. ಆದರೆ ಅವರೇ ಮುಸಲ್ಮಾನರ ಮೇಲೆ ಆರೋಪ ಹೊರಿಸಿ, ಗದ್ದಲ ನಡೆಸಿದ್ದರು. ಆದರೆ ದಕ್ಷ ಪೋಲಿಸ್ ಅಧಿಕಾರಿಗಳ ಸಮರ್ಥ ವಿಚಾರಣೆಯಿಂದ ಕುತಂತ್ರ ಬಯಲಿಗೆ ಬಂತು.

ಒಂದು ಜವಾಬ್ದಾರಿಯುತ ವಿರೋಧ ಪಕ್ಷವು ಅದು ಯಾವುದೇ ಪ್ರಕರಣವಿರಲಿ ಅದರ ಎಲ್ಲ ಆಯಾಮಗಳಿಂದಲೂ ಯೋಚಿಸಬೇಕು. ಆದರೆ ಈ ವಿಷಯದಲ್ಲಿ ಬಿಜೆಪಿ ಪಕ್ಷವು ತನಿಖೆಗೆ ಮುಂಚೆಯೇ ತೀರ್ಪುಗಳನ್ನು ಘೋಷಿಸುತ್ತಿದೆ.


ಬೆಂಗಳೂರಿನ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣದಲ್ಲಿಯೂ ತನಿಖೆ ಪ್ರಗತಿಯಲ್ಲಿರುವಾಗಲೇ ತೀರ್ಪುಗಳನ್ನು ಘೋಷಿಸಿದೆ. ಈ ಸ್ಫೋಟ ಯಾಕೆ ನಡೆಯಿತು? ಬಹು ಕೋಟಿ ಆದಾಯ, ವಿಸ್ತರಿಸುತ್ತಿರುವ ಉದ್ಯಮದೊಳಗಿನ ಅನಾರೋಗ್ಯಕರ ಸ್ಪರ್ದೆ ಕಾರಣವೇ? ದೇಶ ಚುನಾವಣೆ ನಿರೀಕ್ಷೆಯಲ್ಲಿರುವಾಗ ಬೆಂಗಳೂರಿನ ಹೋಟೆಲ್ ನಲ್ಲಿ ಸ್ಫೋಟ ಸಂಭವಿಸಿದ್ದರ ಉದ್ದೇಶ ಏನಿರಬಹುದು? ಯಾಕಿರಬಹುದು? ಇಂತಹ ಸಹಜ ಪ್ರಶ್ನೆಗಳಿವೆ. ಇಲ್ಲಿ ಸಾವುಗಳು ಸಂಭವಿಸಿಲ್ಲ ಎನ್ನುವುದು ಸಮಾಧಾನ ತರುವ ವಿಷಯವಾದರೂ ಈ ಬಾಂಬ್ ಸ್ಫೋಟ ಪ್ರಕರಣದಲ್ಲಿ ಹಲವರು ಗಂಭೀರವಾಗಿ ಗಾಯಗೊಂಡಿರುವುದು ಅತ್ಯಂತ ವಿಷಾದನೀಯ ಸಂಗತಿ. ಆದರೆ ಈ ಪ್ರಕರಣದಲ್ಲಿ ಇನ್ನೂ ಹೆಚ್ಚು ಅನಾಹುತಗಳಾಗಿದ್ದಲ್ಲಿ ಆಡಳಿತ ಪಕ್ಷವನ್ನು ಇನ್ನೂ ಚೆನ್ನಾಗಿ ತರಾಟೆಗೆ ತೆಗೆದುಕೊಳ್ಳಬಹುದಿತ್ತು ಎಂದು ಬಿಜೆಪಿ ಯೋಚಿಸುತ್ತಿರುವಂತಿದೆ ಅದರ ನಡವಳಿಕೆ. ಇಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇಡೀ ಮುಸ್ಲಿಮ್ ಸಮುದಾಯವನ್ನು ದೂಷಿಸುವ 'ಸಿದ್ಧ ಸೂತ್ರ'ದ ಕೆಲಸವನ್ನೂ ಬಿಜೆಪಿ ಮಾಡುತ್ತಿದೆ. ಸಮಾಜ ಘಾತುಕ ಶಕ್ತಿಗಳು, ಉಗ್ರಗಾಮಿ ಸಂಘಟನೆಗಳು ನಡೆಸುತ್ತಿರುವ ದುಷ್ಕೃತ್ಯಗಳನ್ನು ಸರಕಾರ ಮುಚ್ಚಿಹಾಕುವ ಪ್ರಯತ್ನ ನಡೆಸುತ್ತಿದೆ ಎಂದು, ದೇಶ ವಿದ್ರೋಹಿ ಶಕ್ತಿಗಳನ್ನು ಸರಕಾರ ರಕ್ಷಿಸುತ್ತಿದೆ ಎಂದೂ ಆತುರಾತುರವಾಗಿ ಬಿಜೆಪಿ ಆರೋಪಿಸುತ್ತಿದೆ. ತನಿಖೆ ಇನ್ನೂ ಪ್ರಾಥಮಿಕ ಹಂತದಲ್ಲಿರುವಾಗಲೇ ಅಪರಾಧಿಗಳನ್ನು ನಿಖರವಾಗಿ ಗುರುತಿಸುವುದಾದರೂ ಹೇಗೆ? ದುರ್ಘಟನೆ ನಡೆದ ಕೂಡಲೇ ಹೇಳಿಕೆ ನೀಡುವ ವಿರೋಧ ಪಕ್ಷದಲ್ಲಿ ಅಂತಹ ಮಾಹಿತಿಗಳು ಇದ್ದಲ್ಲಿ ತನಿಖಾ ಏಜನ್ಸಿಗಳಿಗೆ ನೀಡಬಹುದಲ್ಲವೇ? ಬದಲಾಗಿ ಆ ಪಕ್ಷದ ನಾಯಕರು ಗಾಳಿಯಲ್ಲಿ ಆರೋಪದ 'ಗುಂಡು' ಹೊಡೆಯುತ್ತಾ ತಿರುಗುವುದೇಕೆ? ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಪಕ್ಷದ ನಾಯಕರ ಇಂತಹ ವರ್ತನೆಗಳು ಸಾರ್ವಜನಿಕರ ಮೇಲೆ ಎಂತಹ ತೀವ್ರ ಪರಿಣಾಮ ಬೀರಬಹುದು ಎಂದು, ಪ್ರಕರಣದ ಗಂಭೀರತೆಯನ್ನೂ

ಅರಿಯದಷ್ಟು ಅಪ್ರಬುದ್ದರೇ? ಇವರ ಆರೋಪಗಳು ತನಿಖಾ ಸಂಸ್ಥೆಗಳ ಮೇಲೆ ಎಂತಹ ಪರಿಣಾಮ ಬೀರಬಹುದು, ಅಡ್ಡ ಹಾದಿ ಹಿಡಿಸಬಹುದು, ಅದರ ನೈತಿಕ ಶಕ್ತಿ ಕುಗ್ಗಿಸಬಹುದು ಎಂಬ ಕನಿಷ್ಟ ಪ್ರಜ್ಞೆಯಾದರೂ ಬೇಡವೇ?

ವಾಸ್ತವವಾಗಿ, ಕರ್ನಾಟಕದಲ್ಲಿ ಕಳೆದ ಬಿಜೆಪಿ ಸರಕಾರದ ಅವಧಿಯಲ್ಲೂ ಹಲವು ಬಾಂಬ್ ಸ್ಫೋಟ ಪ್ರಕರಣಗಳು ನಡೆದಿದ್ದವು ಎಂಬುದನ್ನು ಬಿಜೆಪಿ ಮರೆಮಾಚುತ್ತಿದೆ. ಹಿಂದೆ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬ 'ಪಾಕಿಸ್ತಾನ ಜಿಂದಾಬಾದ್' ಘೋಷಣೆ ಕೂಗಿದ್ದರ ಬಗೆಗೂ ಅದು ಆಕಸ್ಮಿಕ ಎಂದು ಸಮರ್ಥಿಸಿಕೊಳ್ಳುತ್ತಿದೆ.

ಒಟ್ಟಾರೆಯಾಗಿ, ಇದು ಜವಾಬ್ದಾರಿಯುತ ವಿರೋಧ ಪಕ್ಷವೊಂದು ನಡೆದು ಕೊಳ್ಳಬೇಕಾದ ರೀತಿಯಲ್ಲ. ದುಷ್ಕೃತ್ಯಗಳ ಬಗೆಗೆ ಸರಿಯಾದ ತನಿಖೆ ನಡೆಯಲಿ ಎಂದು ಆಗ್ರಹಿಸಲು ಬಿಜೆಪಿಗೆ ಹಕ್ಕಿದೆ. ಅದಕ್ಕಾಗಿ ಆಗ್ರಹಿಸಲಿ. ಆದರೆ ವಿಚಾರಣೆ ನಡೆಯುತ್ತಿರುವ ಹಂತದಲ್ಲಿಯೇ ತೀರ್ಪುಗಳನ್ನು ನೀಡುವುದು, ಒಂದು ನಿರ್ದಿಷ್ಟ ಸಮುದಾಯವನ್ನು ಸದಾಕಾಲ ದೇಶದ್ರೋಹಿಗಳು ಎಂಬಂತೆ ಬಿಂಬಿಸುವುದು ಯಾವ ರೀತಿಯಿಂದಲೂ ಸಮರ್ಥನೀಯವಾದುದಲ್ಲ. ಭಾರತದ ಪ್ರಜೆಗಳನ್ನೇ ವಿಭಜಿಸಿ ದ್ವೇಷದ ಕಿಚ್ಚು ಹಚ್ಚುವ ರಾಜಕೀಯ ದುರ್ಲಾಭದ ಪ್ರಯತ್ನಗಳು ಸರಿಯಲ್ಲ. ಬಿಜೆಪಿ ಪಕ್ಷವು ಜವಾಬ್ದಾರಿಯಿಂದ ವರ್ತಿಸಬೇಕು.

ಭಯೋತ್ಪಾದನೆಯ ಮೂಲ ಬೇರುಗಳನ್ನು ನಾಶ ಮಾಡಲು ಆಡಳಿತ ಪಕ್ಷ, ವಿರೋಧ ಪಕ್ಷಗಳೆಲ್ಲವೂ, ಜನತೆಯೂ ಸೇರಿ ಶ್ರಮಿಸುವ ತುರ್ತಿದೆ. ಇದನ್ನು ಹೊರತು ಪಡಿಸಿ ಉಳಿದೆಲ್ಲವನ್ನು ಬಾಯಿ ಮಾತಿನಲ್ಲೇ ಮಾಡಬಹುದೆಂದು ಭ್ರಮೆ ಹುಟ್ಟಿಸುವುದು ಅತಗಯಂತ ಹೊಣೆಗೇಡಿತನದ ನಡೆಯಾಗಿದೆ.



ಕೃಪೆ: ಪಿ. ಮಹಮ್ಮದ್







# ಇದು ಮಹಲುಗಳನ್ನು ಕಟ್ಟುವ ಶ್ರಮಜೀವಿಗಳೇ ನಿರ್ಮಿಸಿಕೊಂಡ 'ಬೆವರಿನ ಕಥೆ'

**ಸುರೇಶ್ ಕಲ್ಲಾಗರ**

ಕುಂದಾಪುರ ಕಟ್ಟಡ ನಿರ್ಮಾಣ ಕಾರ್ಮಿಕರ ಸ್ವಂತ ಕಚೇರಿ ಮಾರ್ಚ 10 ರಂದು ಉದ್ಘಾಟನೆ.

ಜಗತ್ತಿನಲ್ಲಿ ಅನಾದಿ ಕಾಲದಿಂದಲೂ ಮಂದಿರ, ಮಸೀದಿ, ಇಗರ್ಜಿ, ಅರಮನೆಗಳು ಹಾಗೂ ಬಹುಮಹಡಿಯ ಭವ್ಯವಾದ ವೈವಿಧ್ಯಮಯ ಕಟ್ಟಡಗಳನ್ನು ಮಳೆ ಗಾಳಿ ಬಿಸಲುಗಳಿಗೆ ಮೈಯೊಡ್ಡಿ ಜೀವದ ಹಂಗು ತೊರೆದು ಜಗತ್ತಿಗೆ ಅಂದ ನಿರ್ಮಿಸಿದವರು ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರು.

ನಾಗರಿಕತೆ ಬೆಳವಣಿಗೆಯೊಂದಿಗೆ ಮಾನವ ಪ್ರಕ್ರತಿಯೊಂದಿಗೆ ಸೆಣಸುತ್ತಲೇ ಒಂದಿಷ್ಟು ರಕ್ಷಣೆ ನೆಮ್ಮದಿಗಾಗಿ ನಿರ್ಮಾಣ ಕೆಲಸಕ್ಕೆ ಮುಂದಾದ ಅದರ ಭಾಗವಾಗಿಯೇ ಬೆಳೆದು ಬಂದ ಶ್ರಮಜೀವಿಗಳು ಪರರ ನೆಮ್ಮದಿ ಹಾಗೂ ಸುಖಕ್ಕಾಗಿ ದುಡಿದರೆ ವಿನಃ ತಮ್ಮಗಳ ಕುಟುಂಬಗಳ ರಕ್ಷಣೆಗೆ ಎಂದೂ ಹೆಚ್ಚಾಗಿ ಚಿಂತಿಸಿಲ್ಲ. ರಟ್ಟೆಗಳನ್ನು ಬಿಟ್ಟರೆ ಆಸ್ತಿಯೇ ಇಲ್ಲದ ನಿರ್ಮಾಣ ಕಾರ್ಮಿಕರಿಗೆ ಜೀವ ಭದ್ರತೆ ಮತ್ತು ಸಾಮಾಜಿಕ ಭದ್ರತೆ ಎಂಬುವುದು ಸಾವಿರಾರು ವರ್ಷಗಳ ಕಾಲ ಮರೀಚಿಕೆಯೇ ಆಗಿತ್ತು.

ಸದಾ ಬಡತನ ಅನಕ್ಷರತೆಯಲ್ಲಿ ಬಳಲುತ್ತಾ ಬದುಕುತ್ತಿದ್ದ ಈ ಶ್ರಮಜೀವಿಗಳು ಎಂಬತ್ತು ಹಾಗೂ ತೊಂಬತ್ತರ ದಶಕಗಳಲ್ಲಿ ಸಂಘಟಿರಾಗ ತೊಡಗಿದ ಪರಿಣಾಮ ಪ್ರಭುತ್ವ ಇವರ ಕಡೆ ಗಮನಿಸಲು ಸಾಧ್ಯವಾಯಿತು. ತೊಂಬತ್ತರ ದಶಕದಲ್ಲಿ ಶ್ರಮಜೀವಿಗಳ ಪರವಾಗಿ ಚಿಂತಿಸುವ ಮತ್ತು ಕೆಲಸ ಮಾಡುವ ಕಮ್ಯೂನಿಸ್ಟ್ ಪಕ್ಷದ ಸಂಸದರು ನಮ್ಮ ದೇಶದ ಪಾರ್ಲಿಮೆಂಟಿನೊಳಗೆ ಗಣನೀಯ ಪ್ರಮಾಣದಲ್ಲಿ ಗೆದ್ದು ಬಂದಿದ್ದರಿಂದ 1996 ರಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಬೆಂಬಲದಿಂದ ಅಧಿಕಾರಕ್ಕೆ ಬಂದ ಸಂಯುಕ್ತ ರಂಗ ಸರ್ಕಾರ 1996 ಕಲ್ಯಾಣ ಮಂಡಳಿ ಮತ್ತು 1996 ಸೆಸ್ ಕಾನೂನು ಜಾರಿಗೊಳಿಸಿತು ಅದು ರಾಜ್ಯದಲ್ಲಿ ಜಾರಿಗೊಂಡಿದ್ದು 2006 ರಲ್ಲಿ ಅದು ಕಾರ್ಮಿಕರು ಕೇಂದ್ರ ಕಾನೂನು ಜಾರಿಗೆ ವಿವಿಧ ಸ್ವರೂಪದ ಹೋರಾಟದ ನಡೆಸಿದ ಬಳಿಕವೇ.

ಕರ್ನಾಟಕ ರಾಜ್ಯದಲ್ಲಿ ಸಿಐಟಿಯು ಹಲವು ವರ್ಷಗಳ ನಿರಂತರ ಪ್ರಯತ್ನಗಳನ್ನು ನಡೆಸಿ ಅಸಂಘಟಿತ ಕಟ್ಟಡ ಕಾರ್ಮಿಕರನ್ನು ಸಂಘಟಿಸಲಾಯಿತು. ಬಹುಶಃ ಮೊಟ್ಟ ಮೊದಲ ಬಾರಿಗೆ ಕಟ್ಟಡ ಕಾರ್ಮಿಕರನ್ನು ಸಂಘಟಿಸಿದ ಹೆಗ್ಗಳಿಕೆ ಸಿಐಟಿಯುಗೆ ಸಲ್ಲುತ್ತದೆ. ಅದರಂತೆ ಉಡುಪಿ ಜಿಲ್ಲೆಯಲ್ಲಿ ಆರಂಭ ದಿನಗಳಲ್ಲಿ ನಿರ್ಮಾಣ ಕಾರ್ಮಿಕರನ್ನು ಹಿರಿಯ ಸಂಗಾತಿಗಳಾದ ದೋಗು ಸುವರ್ಣ, ವಿಶ್ವನಾಥ ರೈ, ದಾಸ ಭಂಡಾರಿ ಮೊದಲಾದವರು ಮುತುವರ್ಜಿ ವಹಿಸಿ ಸಂಘಟಿಸಿದರು ಕಾರ್ಮಿಕರ ನೇತೃತ್ವದಲ್ಲಿ ಕಲ್ಯಾಣ ಮಂಡಳಿಗಾಗಿ ಹಲವು ಹೋರಾಟಗಳನ್ನು ನಡೆಸಿದರು.

ಉಡುಪಿ ಜಿಲ್ಲೆಯ ಕಟ್ಟಡ ಕಾರ್ಮಿಕರು ಕರ್ನಾಟಕದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಕಾನೂನು ಜಾರಿಗೆ ಮುನ್ನವೇ 2001 ರಲ್ಲಿ ಸಂಘವನ್ನು ನೋಂದಣಿ ಮಾಡಲಾಗಿರುವುದು ಅದಕ್ಕಿಂತ ಮುಂಚಿತವಾಗಿಯೇ ಹೋರಾಟ ನಡೆಸುತ್ತಾ ಬಂದಿದೆ ಎಂಬುವುದು ಗಮನಾರ್ಹ.

ಕುಂದಾಪುರದಲ್ಲಿ ತಾಲೂಕು ಮಟ್ಟದಲ್ಲಿ ಹಲವು ಸಮಾವೇಶಗಳ ಅನಂತರ 2007 ಅಗಸ್ಟ್ ತಿಂಗಳಲ್ಲಿ ನಡೆದ ನೂರಾರು ಕಟ್ಟಡ ಕಾರ್ಮಿಕರ ಸಮಾವೇಶದಲ್ಲಿ ಅಧಿಕೃತವಾಗಿ ಸಂಘಕ್ಕೆ ಚಾಲನೆ ದೊರಕಿತು.

2007 ರಲ್ಲಿ ಆರಂಭಗೊಂಡ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘವನ್ನು ಅಂದಿನ ನಾಯಕತ್ವ ಸಿಐಟಿಯು ನೇತೃತ್ವದಲ್ಲಿ 1996 ಕಟ್ಟಡ ಕಾರ್ಮಿಕರ ಕಾನೂನು ವ್ಯಾಪಕವಾಗಿ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ನಡೆಸಿ ಸಂಘಟನೆ ವಿಸ್ತರಿಸಿತು. ಗ್ರಾಮೀಣ ಭಾಗದ ಸಾವಿರಾರು ಮಂದಿ ಸಂಘದ ಸದಸ್ಯರಾದರು. ಗ್ರಾಮ ಗ್ರಾಮಗಳಲ್ಲಿ ಸಭೆಗಳನ್ನು ನಡೆಸಿ ಗ್ರಾಮ ಘಟಕಗಳನ್ನು ರಚಿಸಲಾಯಿತು.

**ಸಾವಿರಾರು ಕಾರ್ಮಿಕರಿಗೆ ಕಲ್ಯಾಣ ಮಂಡಳಿ ಸೌಲಭ್ಯಗಳ ವಿತರಣೆ**

ಅತ್ಯಂತ ಕಷ್ಟದಲ್ಲಿ ಜೀವಿಸುತ್ತಿರುವ ಪ್ರತಿಯೊಬ್ಬ ಕಟ್ಟಡ ನಿರ್ಮಾಣ ಕಾರ್ಮಿಕ ಹಾಗೂ ಕಾರ್ಮಿಕಳನ್ನು ನಮ್ಮ ಸಂಘಟನಾ ವ್ಯಾಪ್ತಿಯೊಳಗೆ ತಂದು ಅವರಿಗೆ ಕಲ್ಯಾಣ ಮಂಡಳಿಯಿಂದ ದೊರಕುತ್ತಿರುವ ಸೌಲಭ್ಯಗಳನ್ನು ದೊರೆಕಿಸಿ ಕೊಡುವುದರ ಜತೆಗೆ ಅವರ ಕುಟುಂಬ ಅವರ ಮಕ್ಕಳ ಶಿಕ್ಷಣ ಆರೋಗ್ಯ ಮೊದಲಾದವುಗಳ ಕುರಿತು ಜಾಗೃತಿಗೊಳಿಸುವುದು ಮತ್ತು ಸರ್ಕಾರಗಳ ನೀತಿಗಳು ದುಡಿಯುವ ಜನರಿಗೆ ವಿರುದ್ದವಾಗಿ ಇರುವಾಗ ಅವುಗಳ ವಿರುದ್ಧ ಕಾರ್ಮಿಕರನ್ನು ಚಳವಳಿಗಳಿಗೆ ಇಳಿಸುವುದು ಸಿಐಟಿಯು ಮೊದಲಿನಿಂದಲೂ ರೂಢಿಗತ ಮಾಡಿಕೊಂಡ ಕಾರ್ಯಕ್ರಮವಾಗಿದೆ. ಆದರೆ ಕಾರ್ಮಿಕರನ್ನು ಇಂದಿನವರೆಗೂ ಸೌಲಭ್ಯಗಳ ಆಧಾರದ ಮೇಲೆಯೇ ಸಂಘಟನೆಯನ್ನು ಕಟ್ಟಲಾಗಿದೆ ಎಂಬುವುದು ನಮ್ಮಲ್ಲಿರುವ ದೌರ್ಬಲ್ಯವೂ ಹೌದು. ಆದರೆ ಕುಂದಾಪುರದ ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಸಂಘದ ಘಟಕಗಳು ನಿರಂತರ ತಿಂಗಳಿಗೊಮ್ಮೆ ಶಿಸ್ತು ಬದ್ಧವಾಗಿ ಸಭೆಗಳನ್ನು ನಡೆಸುತ್ತಿವೆ ಸಭೆಗಳಲ್ಲಿ ನಿರಂತರ ಪ್ರಜ್ಞೆ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಆದರೂ ಸೌಲಭ್ಯಗಳಿದ್ದರೆ ಮಾತ್ರ ಸಂಘದ ಸದಸ್ಯರಾಗುತ್ತೇವೆ ಎಂಬ ಮನಸ್ಥಿತಿಯಿಂದ ಹೊರತರಲು ಸಾಧ್ಯವಾಗಿಲ್ಲ ಈಗಾಗಲೇ ಸಂಘವು ಕಳೆದ 17 ವರ್ಷಗಳಿಂದ ರೂ.11,70,59,196.00 (ಹನ್ನೊಂದು ಕೋಟಿ, ಎಪ್ಪತ್ತು ಲಕ್ಷದ ಐವತ್ತೊಂಬತ್ತು ಸಾವಿರದ ನೂರಾ ತೊಂಬತ್ತಾರು) ರೂಪಾಯಿಗಳನ್ನು ನಮ್ಮ ಸಂಘದ ಸದಸ್ಯರಿಗೆ ಅಫಘಾತ, ಮದುವೆ, ಶೈಕ್ಷಣಿಕ ಧನಸಹಾಯ, ಅಂತಿಮ ಸಂಸ್ಕಾರ, ಹೆರಿಗೆ ಭತ್ಯೆ, ವೈದ್ಯಕೀಯ ಧನಸಹಾಯಗಳ ಮೂಲಕ ದೊರಕಿಸಿ ಕೊಡಲು ಸಾಧ್ಯವಾಗಿಸಿರುವುದು ಹೆಮ್ಮೆಯ ವಿಷಯವಾಗಿದೆ ಮಾತ್ರವಲ್ಲ ಭವಿಷ್ಯದಲ್ಲಿ ಸ್ವಂತ ಕಟ್ಟಡದಲ್ಲಿ ಕಟ್ಟಡ ಕಾರ್ಮಿಕರ ಸಹಕಾರಿ ಸಂಘ ಆರಂಭಿಸಿ ಅವರ ಕುಟುಂಬಗಳಿಗೆ ಸಾಲ, ಠೇವಣಿಗಳ ಮೂಲಕ ಅವರ ಆರ್ಥಿಕತೆಗೆ ನೆರವಾಗಲು ಕೊಠಡಿ ಮೀಸಲಿರಿಸಲಾಗಿದೆ.

**ಸಂಘಕ್ಕೆ ಸ್ವಂತ ಕಚೇರಿ ಕನಸು**


2009 ರಲ್ಲಿ ಸಂಘಕ್ಕೆ ಸ್ವಂತ ಕಚೇರಿಯ ಹೊಂದುವ ಮಾತುಗಳು ಆರಂಭಗೊಂಡು ಸಂಘದ ಸಭೆಗಳಲ್ಲಿ ಚರ್ಚೆಗೆ ಬಂದು 2012 ರಲ್ಲಿ ಯಕ್ಷಗಾನ ಪ್ರದರ್ಶಿಸಿ ಸಂಘದ ಕಟ್ಟಡಕ್ಕೆ ಪ್ರತ್ಯೇಕ ನಿಧಿ ಸ್ಥಾಪಿಸಿ ಉಳಿತಾಯ ಮಾಡುತ್ತಾ ನಂತರದ ವರ್ಷಗಳಿಂದ ಪ್ರತಿ ವರ್ಷ ಪ್ರತಿಯೊಬ್ಬ ಸಂಘದ ಸದಸ್ಯ ರೂ 100/- ರಂತೆ ಕಟ್ಟಡ ನಿಧಿ ಸದಸ್ಯತ್ವ ಜೊತೆಯಲ್ಲಿ ನೀಡಬೇಕು ಎಂದು ಮಹಾಸಭೆಯಲ್ಲಿ ತೀರ್ಮಾನ ಕೈಗೊಂಡು ಸಂಗ್ರಹ ಮಾಡಿತು.

**ಸಂಘಕ್ಕೆ ಭೂಮಿ ಕ್ರಯ**

2018 ರಲ್ಲಿ ಕುಂದಾಪುರ ಪೇಟೆಯ ಸಾರ್ವಜನಿಕ ಆಸ್ಪತ್ರೆ ಹಿಂಭಾಗದಲ್ಲಿ 10 ಸೆಂಟ್ಸ್ ಭೂಮಿಯನ್ನು ಸಂಘವು ಕ್ರಯ ಮಾಡಿತು. ಅದರ ನಂತರ ಕಟ್ಟಡ ರಚನೆಗೆ ಅಂದಾಜು ಮಾಡಿ ಏರಿಯ 9114.935 ಚದರ ಅಡಿಯ ರೂ.1,20,01,324.50 (ಒಂದು ಕೋಟಿ ಇಪ್ಪತ್ತು ಲಕ್ಷದ ಒಂದು ಸಾವಿರದ, ಮುನ್ನೂರು ಇಪ್ಪತ್ತು ನಾಲ್ಕು) ಕೋಟಿ ವೆಚ್ಚದಲ್ಲಿ ಮೂರು ಅಂತಸ್ತಿನ ಕಟ್ಟಡ ನಿರ್ಮಿಸಲು ಸಂಘ ಮುಂದಾಗಿದೆ ಅದರ ಮೊದಲ ಅಂತಸ್ತು ಈಗ ಪೂರ್ಣಗೊಂಡಿದೆ.

**ಸ್ವಂತ ಕಚೇರಿಗೆ ಕಾರ್ಮಿಕರೇ ಬೆವರು ಹರಿಸಿ ಕಟ್ಟಿದ ಬಗೆ**

ಮೊದಲ ಮಹಡಿ ಕಾಮಗಾರಿಗೆ ಗಾರೆ ಮೇಸ್ತ್ರಿಗಳು, ಗಾರೆ ಹೆಲ್ಪರ್, ಕಾರ್ಪೆಂಟರ್, ಸೆಂಟ್ರಿಂಗ್, ಪೈಂಟರ್ ಗಳು ಸೇರಿದಂತೆ ಸಂಘದ 300ಕ್ಕೂ ಅಧಿಕ ಮಂದಿ ಗಂಡಸರು ಸದಸ್ಯರು ಹಾಗೂ 100 ಕ್ಕೂ ಅಧಿಕ ಮಹಿಳಾ ಕಾರ್ಮಿಕರು ಸ್ವಂತ ಕಚೇರಿಗೆ ತಮ್ಮ ಬೆವರನ್ನು ಹರಿಸಿ ಪ್ರತಿ ಭಾನುವಾರವೂ ಶ್ರಮದಾನ ಮಾಡಿದ್ದಾರೆ. ಇವರೆಲ್ಲರೂ ತಮ್ಮ ಸ್ವತಃ ದುಡಿಮೆಯ ಒಂದು ಪಾಲನ್ನು ಆರ್ಥಿಕ ಸಹಾಯವಾಗಿ ➚





ನೀಡಿಯೂ ಶ್ರಮದಾನ ಮಾಡಿರುವುದು ಅವರಿಗೆ ಸಂಘದ ಮೇಲಿರುವ ವಿಶ್ವಾಸ ತೋರಿಸುತ್ತದೆ.

ಮಾತ್ರವಲ್ಲ ಸಂಘದ ಕಚೇರಿ ನಿರ್ಮಾಣಕ್ಕೆ ಆರ್ಥಿಕ ಅಡಚಣೆ ಆದಾಗ ಪ್ರತಿಯೊಬ್ಬ ಸದಸ್ಯರೂ ರೂ 1000/– ವಿಶೇಷ ಕಟ್ಟಡ ನಿಧಿ ಸಂಗ್ರಹಿಸಲು ಕರೆ ನೀಡಿತ್ತು. ಬಹುತೇಕ ಮಂದಿ ನೀಡಿದರು ಕೆಲವು ಘಟಕಗಳು ತಮ್ಮ ಊರಿನಲ್ಲಿರುವ ಕೆಲವು ಮಹನೀಯರನ್ನು ಸಂಪರ್ಕಿಸಿ ಆರ್ಥಿಕ ಸಹಾಯ ಸಂಗ್ರಹಿಸಿದರು.

**ವಿಶೇಷ ಕೊಡುಗೆಗಳು**

ಕೆಲವು ಕಟ್ಟಡ ಕಾರ್ಮಿಕರು ಕಿಟಕಿ, ಬಾಗಿಲು, ಪ್ಯಾನುಗಳು, ಸಿಮೆಂಟ್ ಮೊದಲಾದವುಗಳನ್ನು ನಗದುಗಳ ಕೊಡುಗೆಗಳ ನಡುವೆಯೂ ನೀಡಿ ಮಾದರಿಯಾಗಿದ್ದಾರೆ.

ಮೊದಲ ಅಂತಸ್ತು ಕಾಮಗಾರಿ ಮುಗಿಯುವ ಕೊನೆಯ ಘಳಿಗೆಯಲ್ಲಿ ರೂ.100/–ಕೂಪನ್ ಮುದ್ರಿಸಿ ಸಾರ್ವಜನಿಕರು ಹಾಗೂ ಸದಸ್ಯರ ಮಧ್ಯೆ ರಾಜ್ಯದಾದ್ಯಂತ ವಿತರಿಸಿ ಹಣ ಸಂಗ್ರಹಿಸುವ ಯೋಜನೆ ರೂಪಿಸಲಾಗಿತ್ತು.

ಸಂಘದ ಸಾವಿರಾರು ಮಂದಿ ಈ ಪ್ರಕ್ರಿಯೆಗಳಲ್ಲಿ ಪಾಲ್ಗೊಂಡಿರುವುದು ಸಂಘದ ಮಟ್ಟಿಗೆ ಐತಿಹಾಸಿಕವಾಗಿದೆ.

ಈಗ ಆರಂಭಿಸಲಾಗುತ್ತಿರುವ ಪ್ರಥಮ ಮಹಡಿಯಲ್ಲಿ ಕಚೇರಿ ಹಾಗೂ ಅತಿಥಿಗಳ ವಿಶ್ರಾಂತಿಗೆ ಎರಡು ಕೋಣೆಗಳು, ಅಡುಗೆ ಮನೆ ಹಾಗೂ ಇನ್ನೊಂದು ಭಾಗದಲ್ಲಿ ಗ್ರಂಥಾಲಯ ಹಾಗೂ ಪುಸ್ತಕ ಮಳಿಗೆ ಇರುತ್ತದೆ.

ಎರಡನೇ ಮಹಡಿಯಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸಭೆಗಳಿಗೆ ಮೀಟಿಂಗ್ ಹಾಲ್ ನಿರ್ಮಾಣ ಮಾಡಲು ಅಂದಾಜಿಸಲಾಗಿದೆ.

**ಭವಿಷ್ಯದ ಸವಾಲುಗಳು**

ನಿರಂತರವಾಗಿ ಕಟ್ಟಡ ಕಾರ್ಮಿಕರ ಮೇಲೆ ನಡೆಯುತ್ತಿರುವ ಶೋಷಣೆಗಳ ವಿರುದ್ಧ ಧ್ವನಿ ಎತ್ತಬೇಕಾಗಿದೆ. ಕೆಲವು ಬಹುಮಹಡಿ ಕಟ್ಟಡದಲ್ಲಿ ಕೆಲಸ ನಿರತ ಕಾರ್ಮಿಕ ಬಿದ್ದು ಅಪಘಾತಗಳಾದರೆ ಅವನಿಗೆ ಅಥವ ಅವನ/ಳ ಕುಟುಂಬಗಳಿಗೆ ಪರಿಹಾರ,ಗುತ್ತಿಗೆದಾರರು ವೇತನ ಕೊಡಲು ನಿರಾಕರಿಸಿದಾಗ ಸಂಘದ ಮಧ್ಯೆ ಪ್ರವೇಶಗಳು, ಕೆಲಸ ಮಾಡುವ ಕಾರ್ಮಿಕರ ಜೀವಹಾನಿ ತಡೆಯಲು ರಕ್ಷಣೆಗೆ ಅಗತ್ಯ ಕ್ರಮಗಳನ್ನು ನೀಡಲು, ಮಹಿಳಾ ಕಾರ್ಮಿಕರಿಗೆ ಕೆಲಸದ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಲೈಂಗಿಕ ಕಿರುಕುಳ ವಿರುದ್ಧ ನಾವು ಸಂಘಟನೆಯಾಗಿ ಮುಂದಾಗಬೇಕಾಗಿದೆ.

ಮೇಲ್ಕಂಡ ಎಲ್ಲಾ ಆಶಯಗಳನ್ನು ಹೊತ್ತ ಕುಂದಾಪುರ ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ನೂತನ ಕಚೇರಿ ಬೆವರು ಮಾರ್ಚ್ 10 ಬೆಳಿಗ್ಗೆ 10 ಗಂಟೆಗೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಹಾಗೂ ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯ ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ಕಾಮ್ರೇಡ್ ಮಹಾಂತೇಶ್ ಉದ್ಘಾಟಿಸಲಿದ್ದಾರೆ.

ಕಟ್ಟಡ ಕಾರ್ಮಿಕರ ಸಂಘಟನೆ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಬಾಲಕೃಷ್ಣ ಶೆಟ್ಟಿ, ಕಾರ್ಮಿಕ ಅಧಿಕಾರಿ ಕುಮಾರ್ ಬಿ.ಆರ್. ಮೊದಲಾದವರು ಅತಿಥಿಗಳಾಗಿ ಆಗಮಿಸಿ ಈ ಕ್ಷಣಕ್ಕೆ ಸಾಕ್ಷಿಯಾಗಲಿದ್ದಾರೆ.

ಬೆವರು ದುಡಿಮೆಗಾರರನ್ನೂ ಒಗ್ಗೂಡಿಸಿ ಜಿಲ್ಲೆಯ ಚಳುವಳಿಗೆ ಶಕ್ತಿ ಕೇಂದ್ರವಾಗಲಿ ಎಂಬುದು ನಮ್ಮೆಲ್ಲರ ಅಂತಿಮ ಆಶಯವಾಗಿದೆ.

# ಕಾಮ್ರೇಡ್ ಕೃಷ್ಣ ಶೆಟ್ಟಿಗಾರ್ ನಿಧನ: ಚಳವಳಿಯ ಒಂದು ಕೊಂಡಿ ಕಳಚಿತು



ಕರಾವಳಿ ಕರ್ನಾಟಕದ ಕಮ್ಯೂನಿಸ್ಟ್ ಚಳವಳಿಯ ಚರಿತ್ರೆಯಲ್ಲಿ ನಮಗೆಲ್ಲರಿಗೆ ತಿಳಿದಿರುವಂತೆ, ಕೇರಳದಿಂದ ಪಕ್ಷದ ಸಂಗಾತಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ಮಂಗಳೂರು ಮತ್ತು ಸುತ್ತಮುತ್ತ ಸಂಚರಿಸಿ ಕಮ್ಯೂನಿಸ್ಟ್ ಚಳವಳಿಯನ್ನು ಬೆಳೆಸಲು ಪ್ರಯತ್ನಿಸಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಅಥವಾ ಅಪವಾದ ಎನ್ನಬಹುದಾದ ಪ್ರಕ್ರಿಯೆ ಅಂದರೆ, ಮಂಗಳೂರಿನಿಂದ ಕೇರಳದ ಮಂಜೇಶ್ವರ ಭಾಗಕ್ಕೆ ಹೋಗಿ ಅಲ್ಲಿ ನೆಲೆನಿಂತು ಪಕ್ಷ ಮತ್ತು ಸಾಮೂಹಿಕ ಸಂಘಟನೆಯಲ್ಲಿ ಸಕ್ರಿಯವಾಗಿ ಸದ್ದಿಲ್ಲದೆ, ಯಾವುದೇ ಪ್ರಚಾರ, ಸ್ಥಾನಮಾನ ಬಯಸದೆ, ಸರಿಸುಮಾರು ನಾಲ್ಕೂವರೆ ದಶಕಗಳ ಕಾಲ ದುಡಿಯುತ್ತಿದ್ದ ಎಲೆಮರೆಯ ಕಾಯಿಯಂತೆ ಇದ್ದ ಕಾಮ್ರೇಡ್ ಕೃಷ್ಣ ಶೆಟ್ಟಿಗಾರ್‌ರವರು (78 ವರ್ಷ) ಮಾರ್ಚ್ 03, 2024 ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ತೀವ್ರ ಹೃದಯಾಘಾತಕ್ಕೆ ಒಳಗಾಗಿ ನಮ್ಮನ್ನು ಅಗಲಿದ್ದಾರೆ. ತನ್ಮೂಲಕ ಎರಡು ಗಡಿ ಭಾಗದ ಚಳವಳಿಗಳ ಸಂಪರ್ಕ ಸೇತು ಅಥವಾ ಮಂಗಳೂರು ಮತ್ತು ಮಂಜೇಶ್ವರದ ಮಧ್ಯದ ಚಳವಳಿಯ ಸಕ್ರಿಯ ಕೊಂಡಿ ಕಳಚಿತು. ಕೃಷ್ಣ ಶೆಟ್ಟಿಗಾರ್‌ರವರು ಪತ್ನಿ ಓರ್ವ ಮಗ ಮತ್ತು ಓರ್ವ ಮಗಳನ್ನು ಅಗಲಿದರು.

ಕಾಮ್ರೇಡ್ ಕೃಷ್ಣ ಶೆಟ್ಟಿಗಾರ್‌ರವರು 1980ರ ನಂತರ ಮಂಗಳೂರನ್ನು ತೊರೆದು ಮಂಜೇಶ್ವರದ ಹೊಸಂಗಡಿಯಲ್ಲಿ 'ನವೀನ್ ಸ್ಟೋರ್ಸ್' ಎಂಬ ಚಿಕ್ಕ ಪತ್ರಿಕೆಯ ಅಂಗಡಿಯನ್ನು ತೆರೆದು ಜೀವನೋಪಾಯದ ದಾರಿಯನ್ನು ಕಂಡುಕೊಂಡರೂ ಅವರು ಪಕ್ಕಾ ವ್ಯಾಪಾರಿಯಾಗಿರದೆ, ತನ್ನ ಅಂಗಡಿಯನ್ನು ಪಕ್ಷದ ಸಾಹಿತ್ಯ, ಮುಖಪತ್ರಿಕೆ, ಕರಪತ್ರ ಮತ್ತು ಕಾರ್ಯಕರ್ತರ ಸಂಪರ್ಕವನ್ನು ಕಲ್ಪಿಸಿಕೊಡುವ ಮಾಹಿತಿಯ ಕೇಂದ್ರವನ್ನಾಗಿಸಿ ವ್ಯಾಪಾರದೊಂದಿಗೆ ಪಕ್ಷದ ತತ್ವ, ಸಿದ್ಧಾಂತ, ಕಾರ್ಯಕ್ರಮದ ಪ್ರಚಾರ ಕೇಂದ್ರವನ್ನಾಗಿ ಮಾಡಿರುವ ಅಪರೂಪದ ಸಂಗಾತಿ. ಪಕ್ಷದ ಸದಸ್ಯರಾಗಿದ್ದ ಅವರು ಪಂಚಾಯತ್ ಚುನಾವಣೆ, ಸಹಕಾರಿ ರಂಗದ ಚುನಾವಣೆಯಿಂದ ಪ್ರಾರಂಭಿಸಿ ಎಲ್ಲಾ ಚುನಾವಣೆಗಳಲ್ಲೂ ಮತದಾರರ ಪಟ್ಟಿಯನ್ನು ಕೈಯಲ್ಲಿ ಹಿಡಿದುಕೊಂಡು, ರಾತ್ರಿ ಹಗಲು ಎನ್ನದೆ ಪ್ರತಿ ಮನೆಗೂ ತೆರಳಿ ಮತದಾರರನ್ನು ಒಲಿಸಿಕೊಳ್ಳಲು ಶತಪ್ರಯತ್ನ ಮಾಡುತ್ತಿದ್ದ ಸಂಗಾತಿ. ಕಳೆದ ಎರಡು ವರ್ಷಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆಯಲ್ಲೂ ಅಂದರೆ, ತನ್ನ 76ನೇ ವಯಸ್ಸಿನಲ್ಲಿಯೂ ಆರೋಗ್ಯದ ಸಮಸ್ಯೆಯನ್ನು ಲೆಕ್ಕಿಸದೆ ಚುನಾವಣಾ ಪ್ರಚಾರ ನಡೆಸಿರುವುದು ಪಕ್ಷದ ಮೇಲಿದ್ದ ಅವರ ಬದ್ಧತೆಗೆ ಸಂಬಂಧಿಸಿ ಅವರಲ್ಲಿ ಹುದುಗಿರುವ ಹಲವು ನಿದರ್ಶನಗಳಲ್ಲಿ ಒಂದು. ಅವರ ಪತ್ರಿಕಾ ವ್ಯವಹಾರದ ಆದಾಯದ ಬಹುಮುಖ್ಯ ಭಾಗವನ್ನು ನಮ್ಮ ಚಳವಳಿಗೆ ಸಹಾಯ ನೀಡುವಲ್ಲಿಯೂ ಆದರ್ಶವನ್ನು ಮೆರೆದ ಸಂಗಾತಿಯಾಗಿದ್ದಾರೆ. ಮಂಗಳೂರಿನ ಚಳವಳಿಯನ್ನು ಯಾವುದೇ ಸೈದ್ಧಾಂತಿಕ ಅಥವಾ ಸಂಘಟನಾತ್ಮಕ ಭಿನ್ನಾಭಿಪ್ರಾಯ ಇಲ್ಲದೆ, ಕೇವಲ ಬದುಕಿನ ಆಸರೆಯ ಕಾರಣಕ್ಕೆ ಮಂಜೇಶ್ವರಕ್ಕೆ ಹೋದರೂ ಅವರ ಹೃದಯ ಮಂಗಳೂರಿನ ಚಳವಳಿಗಾಗಿ ತುಡಿಯುತ್ತಿತ್ತು. ಎಲ್ಲಾ ಸಮ್ಮೇಳನ, ಸಮಾವೇಶ, ಚುನಾವಣೆಗಳಿಗೆ ದೊಡ್ಡ ಸಹಾಯ ಸಹಕಾರವನ್ನು ಮುಖತ: ಬಂದು ನೀಡುತ್ತಿದ್ದರು ಮಾತ್ರವಲ್ಲದೆ, ಸ್ವತಃ ಭಾಗವಹಿಸಿ ನಮ್ಮ ಬೆನ್ನಿಗೆ ಕೈಹಾಕಿ ಪ್ರೋತ್ಸಾಹಿಸುತ್ತಿದ್ದ ಪರಿಯೇ ಒಂದು ಸ್ಫೂರ್ತಿ. ಈ ರೀತಿಯ ಅವರ ವಿಶಾಲ ಮನೋಭಾವ ಮರಣವನ್ನಪ್ಪುವ ನಾಲ್ಕು ದಿನಗಳ ಮೊದಲು ಮುಕ್ತಾಯಗೊಂಡ ಡಿ.ವೈ.ಎಫ್.ಐ.ನ 12ನೇ ರಾಜ್ಯ ಸಮ್ಮೇಳನಕ್ಕೂ ದೊರೆಯಿತು. ಸಮ್ಮೇಳನದ ಉದ್ಘಾಟನೆಯ ಸಮಾರಂಭದಲ್ಲಿ ಭಾಗವಹಿಸಲು ಡ್ರೆಸ್ ಹಾಕಿ ಹೊರಟ್ಟಿದ್ದರೂ ಏಕಾಏಕಿ ಪತ್ನಿಯವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಭಾಗವಹಿಸಲು ಸಾಧ್ಯವಾಗದಿರುವುದನ್ನು ಅಂದೇ ಫೋನ್ ಮುಖಾಂತರ ನನ್ನಲ್ಲಿ ತಿಳಿಸಿ, ಏನಾದರೂ ಮಾಡಿ ಬಹಿರಂಗ ಸಭೆಗೆ ಬಂದೇ ಬರುವುದಾಗಿ ಮತ್ತು ಅಂದು ಸಮ್ಮೇಳನಕ್ಕೆ ಆರ್ಥಿಕ ಸಹಾಯ ನೀಡುವುದಾಗಿ ಹೇಳಿದರು. ಸ್ವತಃ ಆರೋಗ್ಯದ ಸಮಸ್ಯೆ ಇದ್ದರೂ ಅದನ್ನು ಲೆಕ್ಕಿಸದೆ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಭಾಗವಹಿಸಿದರು. ಮಾತ್ರವಲ್ಲದೆ ತನ್ನ ಪಾಲಿನ ಆರ್ಥಿಕ ಸಹಾಯವನ್ನೂ ನೀಡಿದರು. ಕಳೆದ ನಾಲ್ಕು ದಶಕಗಳಿಂದ ನೇರ ಸಂಪರ್ಕ ಇದ್ದ ಕಾಮ್ರೇಡ್ ಕೃಷ್ಣ ಶೆಟ್ಟಿಗಾರ್‌ರವರು ಹೇಳುತ್ತಿದ್ದುದ್ದು "ನನ್ನ ಪಕ್ಷ, ನಾನು ಹಣ ನೀಡುತ್ತೇನೆ. ನನ್ನ ಪಕ್ಷಕ್ಕೆ ಕೊನೆಯ ಉಸಿರು ಇರುವ ತನಕವೂ ದುಡಿಯುತ್ತೇನೆ" ಎಂಬುದು ಅವರ ಎಂದೂ ಬತ್ತದ ಅಚಲ ಘೋಷವಾಕ್ಯವಾಗಿತ್ತು. ಇವರು ತಮ್ಮ ಪತ್ರಿಕೆಯ ಅಂಗಡಿಯಲ್ಲಿ ಕರ್ನಾಟಕ ರಾಜ್ಯದ ನಮ್ಮ ಪಕ್ಷದ ಮುಖಪತ್ರಿಕೆಗಳಾದ ಈ ಮೊದಲಿನ ಐಕ್ಯರಂಗ, ಜನಶಕ್ತಿ ಮತ್ತು ಪೀಪಲ್ಸ್ ಡೆಮಾಕ್ರಸಿ ಅಂದಿನಿಂದ ಇಂದಿನವರೆವಿಗೂ ಮಂಗಳೂರಿನಿಂದ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದರು.

**ಮಂಗಳೂರಿನಲ್ಲಿ ಅಚ್ಚಳಿಯದ ಚಳವಳಿಯ ಹೆಗ್ಗುರುತು**

ಹಾಗೆ ಹೇಳುವುದಾದರೆ ಸೈದ್ಧಾಂತಿಕ ಹೋರಾಟವನ್ನು ಪ್ರಾರಂಭದಿಂದಲೇ ನಡೆಸಿದ ಸಂಗಾತಿ ಕೃಷ್ಣ ಶೆಟ್ಟಿಗಾರ್‌ರವರಾಗಿದ್ದಾರೆ. ಅದೂ ಸ್ವತಃ ತಮ್ಮ ಕುಟುಂಬದಲ್ಲೇ ಆಗಿತ್ತು. ಇವರ ತಂದೆಗೆ 4 ಜನ ಸಹೋದರರು ಮತ್ತು ಓರ್ವ ಸಹೋದರಿ ಇದ್ದರು. ಇವರ ಹಿರಿಯ ಸಹೋದರ, ದಿವಂಗತ ನಾಗೇಶ್ ಕುಮಾರ್‌ರವರ ತಂದೆ ಲಕ್ಶ್ಮಣ್ ಶೆಟ್ಟಿಗಾರ್ ಬದುಕಿನ ಉದ್ದಕ್ಕೂ ಸಿಪಿಐ ಪಕ್ಷದ ಪ್ರಬಲ ಬೆಂಬಲಿಗರಾಗಿದ್ದರು. ಲಕ್ಷ್ಮಣ್ ಶೆಟ್ಟಿಗಾರ್‌ರವರ ಹಿರಿಯ ಮಗ ದಿವಂಗತ ನಾಗೇಶ್ ಕುಮಾರ್‌ರವರನ್ನು ಎಸ್.ಎಫ್.ಐ. ತೆಕ್ಕೆಗೆ ತರುವಲ್ಲಿ ಕೃಷ್ಣ ಶೆಟ್ಟಿಗಾರ್, ಅವರ ಅಣ್ಣಂದಿರಾದ ಚಂದ್ರಹಾಸ್ ಕೊಡಿಯಾಲ್‌ಬೈಲ್ ಮತ್ತು ವಾಮನ ಶೆಟ್ಟಿಗಾರ್‌ರವರ ಅವಿರತ ಪ್ರಯತ್ನ ಫಲ ಕೊಟ್ಟಿತ್ತು. ಮುಂದೆ ಡಿವೈಎಫ್ಐನ ಪ್ರಥಮ ಜಿಲ್ಲಾ ಕಾರ್ಯದರ್ಶಿಯಾಗಿ, ವಿಮಾ ನೌಕರರ ಮುಂದಾಳು ಆಗಿ, ಮಂಗಳೂರು ಸಮುದಾಯದ ಕಾರ್ಯದರ್ಶಿಯಾಗಿ, ಒಟ್ಟಾರೆಯಾಗಿ ಸಿಪಿಐ(ಎಂ) ಪಕ್ಷದ ತೆಕ್ಕೆಗೆ ತರುವಲ್ಲಿ ಯಶಸ್ವಿಯಾದುದು ಅವರ ಕುಟುಂಬ ಸಹೋದರರ ಮಧ್ಯೆ ಅವಿಶ್ವಾಸಕ್ಕೂ ಕಾರಣವಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಅವರ ಕುಟುಂಬ ಕೇವಲ ಕಮ್ಯೂನಿಸ್ಟ್ ವಿಚಾರಧಾರೆಯ ಕುಟುಂಬ ಮಾತ್ರವೇ ಆಗಿರದೆ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕರ್ತವ್ಯಗಳನ್ನು ನಿರ್ವಹಿಸಿದ ಕುಟುಂಬವಾಗಿ ಪಕ್ಷದ ಸಾಮೂಹಿಕ ಸಂಘಟನೆಗಳ ವಿಸ್ತರಣೆ ಮತ್ತು ಉದಾರವಾಗಿ ಆರ್ಥಿಕ ಸಂಪನ್ಮೂಲ ನೀಡುವ ಮೂಲಕ ಸಕ್ರಿಯ ಪಾತ್ರ ನಿರ್ವಹಿಸಿದ ಕುಟುಂಬವಾಗಿದೆ.

ಕಾಮ್ರೇಡ್ ಕೃಷ್ಣ ಶೆಟ್ಟಿಗಾರ್ ತುರ್ತು ಪರಿಸ್ಥಿತಿಯ ನಂತರ ಮಂಗಳೂರಿನಲ್ಲಿ ಸಮುದಾಯ ಸಂಘಟನೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿದರು. ಅದರ ಆರ್ಥಿಕ ಸಂಪನ್ಮೂಲ ಕ್ರೋಢೀಕರಣದ ಮತ್ತು ಪ್ರಚಾರದ ಕೇಂದ್ರಬಿಂದು ಆಗಿದ್ದರು. ಕೇರಳದ ಡಾ.ವಾರಿಯರ್ ಮತ್ತು ಡಾ.ದುರ್ಗಾ ಪ್ರಸಾದ್ (ವಿರಾಜಪೇಟೆ)ರವರಿಗೆ ಎಸ್.ಎಫ್.ಐ. ಸಂಘಟನೆ ಕಟ್ಟಿ ಬೆಳೆಸಲು ಸಾಥ್ ನೀಡಿದರು. ತನ್ನ ದುಡಿಮೆಯ ಆದಾಯವನ್ನು ಸಂಘಟನೆಗಾಗಿ ವಿನಿಯೋಗಿಸುತ್ತಿದ್ದುದ್ದಲ್ಲದೆ, ಕೆಲಸದ ಅವಧಿ ಮುಗಿದ ನಂತರ ಸಂಘಟನೆಗಾಗಿ ಸಮಯವನ್ನು ವಿನಿಯೋಗಿಸುತ್ತಿದ್ದರು. ಇವರ ಅಣ್ಣ ಚಂದ್ರಹಾಸ್ ಕೊಡಿಯಾಲ್‌ಬೈಲ್‌ರವರ ಸ್ವಂತ ಟೈಲರಿಂಗ್ ಅಂಗಡಿ ನಗರದ ಕೇಂದ್ರಬಿಂದು ಹಂಪನಕಟ್ಟೆಯ ಬಳಿ ಇತ್ತು. ಅದೇ ರೀತಿ ಕೃಷ್ಣ ಶೆಟ್ಟಿಗಾರ್ ದುಡಿಯುತ್ತಿದ್ದ ಅಯುರ್ವೇದಿಕ್ ಅಂಗಡಿ ಅದರ ಪಕ್ಕದಲ್ಲೇ ಇತ್ತು. ಈ ಅನುಕೂಲಕರ ಸನ್ನಿವೇಶ ಸಂಘಟನಾ ಚಟುವಟಿಕೆಗೆ ಪೂರಕವಾಯಿತು. ಯುವಕರು, ವಿದ್ಯಾರ್ಥಿಗಳು ಕಲಾವಿದರ ಸಂಪರ್ಕಕ್ಕೆ ಇದು ಅನುಕೂಲವಾಯಿತು. ಪಕ್ಷದ ಪತ್ರಿಕೆಗಳಾದ ಐಕ್ಯರಂಗ, ಪೀಪಲ್ಸ್ ಡೆಮಾಕ್ರಸಿ ಇವುಗಳನ್ನು ಮಂಗಳೂರು ಹೃದಯ ಭಾಗದಲ್ಲಿ ಕೃಷ್ಣ ಶೆಟ್ಟಿಗಾರ್ ವಿತರಿಸುತ್ತಿದ್ದರು. ಪಕ್ಷದ ಕಿರು ಹೊತ್ತಗೆಗಳನ್ನೂ ಮಾರುತ್ತಿದ್ದರು.

ಅವರ ಮೃತ ದೇಹವನ್ನು ಹೊಸಂಗಡಿಯ ಪಕ್ಷದ ಕಚೇರಿ ಎ.ಕೆ.ಜಿ. ಮಂದಿರಕ್ಕೆ ತರಲಾಯಿತು. ಅಲ್ಲಿ ಅವರಿಗೆ ಪಕ್ಷದ ಮಂಜೇಶ್ವರ ಬ್ಲಾಕ್‌ನ ನಾಯಕರುಗಳಾದ ಕುಂಞ ರಾಮನ್, ಜಯಾನಂದ ಕೆ.ಆರ್, ಮತ್ತು ಇತರರು ಹಾಗೂ ಎಡರಂಗದ ಇತರೆ ನಾಯಕರುಗಳು, ಸಾರ್ವಜನಿಕರು ಶ್ರದ್ಧಾಂಜಲಿ ಅರ್ಪಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಿಂದ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಮುನೀರ್ ಕಾಟಿಪಳ್ಳ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಸುಕುಮಾರ್, ಡಾ.ಕೃಷ್ಣಪ್ಪ ಕೊಂಚಾಡಿ, ಜಿಲ್ಲಾ ಸಮಿತಿ ಸದಸ್ಯರಾದ ಕೃಷ್ಣಪ್ಪ ಸಾಲಿಯಾನ್, ಯೋಗೀಶ್ ಜಪ್ಪಿನಮೊಗರು, ಜಯಂತ್ ನಾಯಕ್, ಸಮುದಾಯ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಕಾರ್ಯದರ್ಶಿ ಮನೋಜ್ ವಾಮಂಜೂರು ಮತ್ತು ರಾಜ್ಯ ಸಮಿತಿಯ ಮಾಜೀ ಉಪಾಧ್ಯಕ್ಷರಾದ ವಾಸುದೇವ ಉಚ್ಚಿಲ್, ಡಿವೈಎಫ್ಐನ ನಾಯಕರಾದ ನಿತೀನ್ ಬಂಗೇರ ಕೊಪ್ಪಲಕಾಡು ಹಾಗೂ ಸಿಐಟಿಯು, ಸಮುದಾಯ, ದಲಿತ ಹಕ್ಕುಗಳ ಸಮಿತಿ ಮತ್ತು ಆದಿವಾಸಿ ಹಕ್ಕುಗಳ ಸಮಿತಿಯ ಪರವಾಗಿ ಹಲವರು ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು. ಅಂತ್ಯ ಸಂಸ್ಕಾರದಲ್ಲಿ ಸಾವಿರಾರು ಜನ ಭಾಗವಹಿಸಿದರು.

***–ಡಾ.ಕೃಷ್ಣಪ್ಪ ಕೊಂಚಾಡಿ***

# ಗಂಡು-ಹೆಣ್ಣು ಯಾರೂ ಯಾರನ್ನೂ....

ಪುಟ 2 ರಿಂದ

ಪ್ರದೇಶವಾದರೆ ಇನ್ನಷ್ಟು ಹೆಚ್ಚು ದುಡಿಮೆಗಾರ ಮಹಿಳೆಯರು ಸಿಗುತ್ತಾರೆ ಅಷ್ಟೆ.

**ಕೊಟ್ಟ ಹೆಣ್ಣು ಕುಲಕ್ಕೆ ಹೊರಗು-ಯಾಕೆ?**

ಮನೆಯ ಒಳಗೂ, ಹೊರಗೂ, ಹೊಲ-ಗದ್ದೆ, ಕಾರ್ಖಾನೆ, ಕಚೇರಿಗಳಲ್ಲಿ ಎಲ್ಲ ಕಡೆಗಳಲ್ಲಿ ಮಹಿಳೆ ದುಡಿದರೂ ಆಕೆಯ ಸಂಪಾದನೆಯ ಮೇಲೆ ಆಕೆಗೆ ಹೆಚ್ಚಿನ ಸಾರಿ ಅಧಿಕಾರವಿಲ್ಲ. ಆಸ್ತಿಯೂ ಅಷ್ಟೆ. ಸಾಂಪ್ರದಾಯಿಕ ಸಮಾಜದಲ್ಲಿ ಹೊಲ, ಗದ್ದೆ, ಮನೆ, ಅಂಗಡಿ ಮುಂತಾದ ಆಸ್ತಿ-ಪಾಸ್ತಿ, ಸಂಪತ್ತುಗಳೆಲ್ಲವೂ ಸಾಮಾನ್ಯವಾಗಿ ತಂದೆ ಅಥವಾ ಕುಟುಂಬದ 'ಯಜಮಾನ'ನ ಹೆಸರಿನಲ್ಲಿ ಇರುತ್ತವೆ. ನಂತರದ ಪೀಳಿಗೆಯ 'ಯಜಮಾನರು'ಗಳಾದ ಗಂಡು ಮಕ್ಕಳಿಗೆ ವರ್ಗಾವಣೆ ಆಗುತ್ತವೆ. ಹೆಣ್ಣು ಮಕ್ಕಳು ಮದುವೆಯಾಗಿ ಬೇರೆ ಮನೆಗೆ ಹೋಗುವವರು. ಏನೇ ಆದರೂ ಅವಳು ಮರಳಿ ಬರುವಂತಿಲ್ಲ. ಗಂಡನನ್ನು ಕಳೆದುಕೊಂಡೋ, ಗಂಡನಿಂದ ದೂರವಾಗೋ ಮರಳಿ ತವರಿಗೆ ಬಂದರೆ ಆಸ್ತಿಯಲ್ಲಿ ಪಾಲು ಕೇಳಬಹುದಲ್ಲ. ಅದಕ್ಕೆ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು'.

**ಗಂಡ ಅಲ್ಲದೇ ಇನ್ಯಾರಮ್ಮ ಹೊಡಿಬೇಕು!!**

ಹೆಂಡತಿಯನ್ನು ಹೊಡೆಯುವುದು ಗಂಡನ ಆಜನ್ಮಸಿದ್ಧ, ನ್ಯಾಯಬದ್ಧ, ಧರ್ಮಬದ್ಧ ಹಕ್ಕು ಎಂದು ಭಾವಿಸಿರುವ ಬಹುದೊಡ್ಡ ಸಂಖ್ಯೆಯ ಗಂಡು ಜೀವಗಳಿವೆ. ಯಾರಾದರೂ ಕೇಳಿದರೆ ನನ್ನ ಹೆಂಡತಿ, ನಾನು ಹೊಡಿತೀನಿ, ನೀನ್ಯಾರು ಕೇಳೊದಕ್ಕೆ ಎನ್ನುತ್ತಾರೆ. ಗಂಡ ಹೊಡೆದ ಎಂದು ಪೋಲೀಸ್ ಠಾಣೆಗೆ ದೂರು ಕೊಡಲು ಹೋದರೆ 'ಗಂಡ ಅಲ್ಲದೇ ಇನ್ಯಾರಮ್ಮ ಹೊಡೀಬೇಕು, ಹೋಗಮ್ಮ ಸುಮ್ನೇ..' ಎಂದು ಪೋಲೀಸರೇ ಮಹಿಳೆಗೆ 'ಬೈದು ಬುದ್ಧಿ ಹೇಳಿ' ಕಳಿಸಿರುವ ಪ್ರಸಂಗಗಳಿವೆ. ಹೈಸ್ಕೂಲು ಓದುವ ಗಂಡು ಹುಡುಗ, ಕಾಲೇಜು ಓದುವ ತನ್ನ ಅಕ್ಕನ ಮೇಲೆ ಅಧಿಕಾರ ಚಲಾಯಿಸುವ ಪ್ರಸಂಗಗಳು ಇವೆ. ಹಾಗೆಯೇ 'ರಕ್ಷಣೆ' ಕೊಡುವ ಪ್ರಸಂಗಗಳೂ ಇವೆ ಎನ್ನಿ.

**ಊಟ ಬಡಿಸು ಬಾ**

ಅವತ್ತು ಆ ತಾಯಿ ಮನೆಯಲ್ಲಿ ಅಡುಗೆ ಎಲ್ಲ ಮಾಡಿಟ್ಟು ಕೆಲಸದ ನಿಮಿತ್ತ ನೆರೆಯ ಸಂಬಂಧಿಕರ ಮನೆಗೆ ಬಂದಿದ್ದಳು. ಮಗ ಒಬ್ಬ ಹೈಸ್ಕೂಲು ಓದುತ್ತಿದ್ದ ಹುಡುಗ. ಶನಿವಾರ ಮಧ್ಯಾಹ್ನ ಶಾಲೆಯಿಂದ ಬಂದವನು ಅಮ್ಮ ಮನೆಯಲ್ಲಿಲ್ಲದ್ದು ನೋಡಿದ. ಎರಡು ಫರ್ಲಾಂಗ್ ದೂರದ ಸಂಬಂಧಿಕರ ಮನೆಗೆ ನಡೆದುಕೊಂಡು ಬಂದ. ಅಮ್ಮನಿಗೆ ಜೋರು ಮಾಡಿದ. 'ಊಟ ಬಡಿಸು ಬಾ' ಅಂತ ಅವನ ಆಗ್ರಹ. 'ಅಡುಗೆ ಎಲ್ಲ ಮಾಡಿಟ್ಟು ಈಗ ತಾನೇ ಬಂದಿದ್ದೀನಿ. ಬಡಿಸಿಕೊಂಡು ತಿನ್ನಪ್ಪ' ಅಂತ ಅಮ್ಮನ ವಿನಂತಿ. ಉಹುಂ ಮಗ ಒಪ್ಪಲಿಲ್ಲ. ಮಗನೇ ಗೆದ್ದ.

**ಯಾಕೆ ಹೀಗೆ? ಏನು ದಾರಿ?**

ನಮ್ಮ ಸಮಾಜದಲ್ಲಿ ಮಹಿಳೆಗೆ ಯಾಕೆ ಎಲ್ಲೆಡೆ ತಾರತಮ್ಯ, ವಂಚನೆ, ಅನ್ಯಾಯ, ದೌರ್ಜನ್ಯ ಎಂಬ ಮೂಲ ಕಾರಣಗಳನ್ನು ನಾವು ಕಂಡುಕೊಳ್ಳಬೇಕಿದೆ. ಸಾವಿರಾರು ವರ್ಷಗಳ ಹಿಂದೆ ಆದಿಮ ಸಮಾಜದಲ್ಲಿ ಗುಂಪುಗಳಾಗಿ ಬದುಕುತ್ತಿದ್ದ ಮನುಷ್ಯರ ತಂಡಕ್ಕೆ ಮಹಿಳೆಯೇ ಮುಖ್ಯಸ್ಥಳಾಗಿದ್ದಳು ಎನ್ನುತ್ತಾರೆ ವಿದ್ವಾಂಸರು. ಆಗೆಲ್ಲಾ ಮಕ್ಕಳ ತಂದೆ ಯಾರು ಎಂಬುದೇ ಗೊತ್ತಿಲ್ಲದ ಪರಿಸ್ಥಿತಿ. ತಾಯಿ ಯಾರೆಂಬುದು ಎಲ್ಲರಿಗೂ ಗೊತ್ತಾಗುತ್ತಿತ್ತಲ್ಲ. ಹಾಗಾಗಿ ತಾಯಿಯೇ ಗುಂಪಿನ ಗುರುತು. ಆಕೆಯದೇ ಹಿರಿತನ. ಹಾಗೆಯೇ ಕೃಷಿಯನ್ನು ಕಂಡು ಹಿಡಿದದ್ದು ಸಹ ಮಹಿಳೆ ಎಂಬುದು ವಿಷಯ ತಜ್ಞರ ಅಭಿಪ್ರಾಯ. ಆದರೆ ಸಮಾಜದಲ್ಲಿ ಆಸ್ತಿ, ಖಾಸಗಿ ಆಸ್ತಿ ಎಂಬುದು ಉದಯಿಸಿದಂತೆ ಕುಟುಂಬ, ನನ್ನ ಆಸ್ತಿ, ನನ್ನ ಮಗು ಎಂಬುವೆಲ್ಲಾ ಕಲ್ಪನೆಗಳು ಬೆಳೆದು ಬಂದವು ಎನ್ನುತ್ತವೆ ಅಧ್ಯಯನಗಳು. ಖಾಸಗಿ ಆಸ್ತಿಯ ಬೆಳವಣಿಗೆಯ ಜೊತೆ ಜೊತೆ ಮಹಿಳೆಯರ ಪ್ರಾಧಾನ್ಯತೆ ಕಡಿಮೆಯಾಯಿತು ಎಂಬುದು ಇದರ ಅರ್ಥ.

ಆಸ್ತಿ-ಪಾಸ್ತಿ ಹಣಕಾಸು ಸಂಬಂಧಗಳು ನಮ್ಮ ಸಾಮಾಜಿಕ ವ್ಯವಸ್ಥೆ-ಸಂಸ್ಕೃತಿ ಮುಂತಾದವುಗಳನ್ನು ಗಾಢವಾಗಿ ಪ್ರಭಾವಿಸುತ್ತವೆ ಎಂಬುದು ಸತ್ಯ. ಸಾಂಪ್ರದಾಯಿಕ ಸಮಾಜದಲ್ಲಿ ಸಾಮಾನ್ಯವಾಗಿ ಕುಟುಂಬದ ಆಸ್ತಿಯು ತಂದೆಯಿಂದ ಮಗನಿಗೆ, ಅಥವಾ ಗಂಡು ಮಕ್ಕಳಿಗೆ ವರ್ಗಾವಣೆಯಾಗುತ್ತದೆಯಲ್ಲವೇ? ಖಾಸಗಿ ಆಸ್ತಿ-ಸಂಪತ್ತಿನ ಮೇಲೆ ಹಿಡಿತ ಸಾಧಿಸಿದವರು ಸಮಾಜದ ಮೇಲೂ ಹಿಡಿತ ಸಾಧಿಸಿದರು. ಪ್ರಭಾವ ಬೀರಿದರು. ಇಲ್ಲಿ ಹೆಣ್ಣು ಮಕ್ಕಳಿಗೆ ಆಸ್ತಿಯಲ್ಲಿ ಪಾಲಿಲ್ಲ. ಆಸ್ತಿವಂತ ಪ್ರತಿಷ್ಠಿತ ಉದ್ಯೋಗದ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಅತ್ಯಾಚಾರಗಳ ಬಗೆಗೆ ಕನಿಷ್ಠ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾದರೂ ಆಗುತ್ತದೆ. ಆದರೆ ಎಷ್ಟೋ ಬಡ-ದಲಿತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಅತ್ಯಾಚಾರಗಳು ಮಾಧ್ಯಮಗಳಲ್ಲಿ ಸುದ್ದಿಯೂ ಆಗುವುದಿಲ್ಲ.

ಗಂಡು ಹೆಣ್ಣಿನ ನಡುವಿನ ಆರ್ಥಿಕ-ಸಾಮಾಜಿಕ ಅಸಮಾನತೆ ವಿಷಮಿಸಿರುವ ಸಮಾಜದಲ್ಲಿ ವರದಕ್ಷಿಣೆ ಸಮಸ್ಯೆಯು ಒಂದು ದೊಡ್ಡ ಪಿಡುಗಾಗಿ ಬೆಳೆದು ನಿಂತಿದೆ. ಆಸ್ತಿವಂತ ಕುಟುಂಬಗಳಲ್ಲಿನ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಸಮಾನ ಪಾಲು ಕೊಡುವುದು ವರದಕ್ಷಿಣೆ ಪಿಡುಗಿಗೆ ಒಂದು ಪರಿಹಾರವಾಗಬಹುದು.

**ಚರಿತ್ರೆಯ ಹಾದಿ**

ಈಗಿನ ನಮ್ಮ ಸಮಾಜದ ಪರಿಸ್ಥಿತಿಗೂ ನೂರಿನ್ನೂರು ಅಥವಾ ಐದುನೂರು-ಸಾವಿರ ವರ್ಷಗಳ ಹಿಂದಿನ ಸಮಾಜಕ್ಕೂ ಅಗಾಧವಾದ ವ್ಯತ್ಯಾಸಗಳಿವೆ. ಗಂಡ ಹೆಂಡತಿ ತಮಗೆ ಒಂದೋ ಎರಡೋ ಮಕ್ಕಳು ಸಾಕು ಎಂದು ಕುಟುಂಬ ಯೋಜನೆಯನ್ನು ಪಾಲಿಸುವ ಅನುಕೂಲ ಒದಗಿ ಬಂದಿದ್ದು ತೀರಾ ಇತ್ತೀಚೆಗೆ, ಇಪ್ಪತ್ತನೇ ಶತಮಾನದಲ್ಲಿ. ಅದಕ್ಕೆ ಮುಂಚೆ ಮಕ್ಕಳ ಸಂಖ್ಯೆಯ ನಿಯಂತ್ರಣಕ್ಕೆ ಪರಿಣಾಮಕಾರಿಯಾದ ವಿಧಾನವೇ ಇರಲಿಲ್ಲ. ಹೀಗಾಗಿ ಒಬ್ಬ ಮಹಿಳೆ ತನ್ನ ಜೀವನದಲ್ಲಿ ಎಂಟೋ, ಹತ್ತೋ, ಹನ್ನೆರಡೋ 'ದೇವರು ಕೊಟ್ಟಷ್ಟು' ಮಕ್ಕಳನ್ನು ಹೆರಬೇಕಾಗುತ್ತಿತ್ತು. 15-16 ಮಕ್ಕಳನ್ನು ಹೆತ್ತ ಮಹಿಳೆಯರೂ ಉಂಟು. ಅಂದರೆ ಮಹಿಳೆ ತನ್ನ ಯೌವ್ವನ ಅವಧಿಯಲ್ಲಿ ಬಹುದೊಡ್ಡ ಭಾಗವನ್ನು ಬಾಣಂತಿ, ಬಸುರಿಯಂತಹ ಅವಸ್ಥೆಯಲ್ಲಿಯೇ ಕಳೆಯುತ್ತಿದ್ದಳು. ಇನ್ನು ಕುಟುಂಬವನ್ನು ನೋಡಿಕೊಳ್ಳುವುದಲ್ಲದೇ, ಎಂಟು-ಹತ್ತು-ಹನ್ನೆರಡು ಮಕ್ಕಳನ್ನು ಸಾಕಿ ಸಲುಹಿ ಬೆಳೆಸುವುದು ಕಡಿಮೆ ಕೆಲಸವೇನಾಗಿರಲಿಲ್ಲ. ಇಂತಹ ಪರಿಸ್ಥಿತಿಯನ್ನು ತನ್ನ ಸ್ವಾರ್ಥ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದ ಎಷ್ಟೋ ಪುರುಷರು ಎರಡು, ಮೂರು, ನಾಲ್ಕು ಮದುವೆಗಳಾಗಿ ಅದನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಇಂತಹ ಹಲವು ಕಾರಣಗಳಿಗಾಗಿಯೂ ಮಹಿಳೆಯರ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ಈಗಲೂ ಇಂತಹ ಪರಿಸ್ಥಿತಿ ಪೂರ್ತಿ ನಿವಾರಣೆ ಆಗಿಲ್ಲ.ಬಾಲ್ಯ ವಿವಾಹವಾಗಿ, ಮನೆ-ಮಕ್ಕಳು-ಸಂಸಾರವೆಂಬ ಹೊಣೆಗಾರಿಕೆಗಳ ನೊಗಕ್ಕೆ ಕೊರಳೊಡ್ಡುತ್ತಿದ್ದ ಪರಿಸ್ಥಿತಿಯಲ್ಲಿ 'ಮಹಿಳಾ ಸ್ವಾತಂತ್ರ್ಯ' ಎಂಬುದಕ್ಕೆ ಹಾಗೂ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಸಾಧನೆ ಎಂಬುದಕ್ಕೆ ಅವಕಾಶಗಳು ಬಹಳ ಕಡಿಮೆ ಇದ್ದವು. ಇಷ್ಟಾದರೂ ಅಲ್ಲಲ್ಲಿ ಸಾಕಷ್ಟು ಮಹಿಳೆಯರು ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದನ್ನು ನೋಡಬಹುದು. ಈಗಂತೂ ಮಹಿಳೆಯರು ಅಡ್ಡಗೋಡೆಗಳನ್ನೊಡೆದು ಎಲ್ಲ ಕ್ಷೇತ್ರಗಳಲ್ಲೂ ಪುರುಷರಿಗೆ ಸಮನಾದ, ಪುರುಷರನ್ನೂ ಮೀರಿಸುವ ಸಾಧನೆಗಳನ್ನು ಮಾಡುತ್ತಿದ್ದಾರೆ.

**ಮಹಿಳೆ-ಪುರುಷ ನಿಜಕ್ಕೂ ಸಮಾನರೇ?**

ಇಲ್ಲಿ ಒಂದು ಮೂಲಭೂತ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡು ಉತ್ತರವನ್ನು ಕಂಡುಕೊಳ್ಳಬೇಕು. ಮಹಿಳೆ ಮತ್ತು ಪುರುಷರು ನಿಜಕ್ಕೂ ಸಮಾನರೇ, ಗಂಡು-ಹೆಣ್ಣು ಈ ಇಬ್ಬರನ್ನು ಸಮಾನರು ಎಂದು ಎಲ್ಲ ಸಂದರ್ಭದಲ್ಲೂ ಒಂದೇ ತಕ್ಕಡಿಯಲ್ಲಿಟ್ಟು ತೂಗಬಹುದೇ?





ಮಹಿಳೆ ಮತ್ತು ಪುರುಷ ಇಬ್ಬರನ್ನು ಸಮಾಜ ಸಮಾನವಾಗಿ ಪರಿಗಣಿಸಬೇಕು. ಆದರೆ ಈ ಮಾತನ್ನು ಪದಶಃ, ಅಕ್ಷರಶಃ ಅರ್ಥದಲ್ಲಿ ತೆಗೆದುಕೊಳ್ಳಬಾರದು. ಏಕೆಂದರೆ ಮಹಿಳೆ ಮತ್ತು ಪುರುಷರ ಸಾಮರ್ಥ್ಯಗಳು ಭಿನ್ನ ಭಿನ್ನ. ಇಬ್ಬರೂ ತಮ್ಮದೇ ಆದ ವಿಶಿಷ್ಟ ಅನನ್ಯತೆಗಳನ್ನು ಹೊಂದಿರುವವರು. ಮಹಿಳೆಯ ಅಸ್ಮಿತೆ ಪುರುಷಗಿಂತ ಬಹಳ ಭಿನ್ನ. ಈ ಮಾತುಗಳನ್ನು ಒಂದಷ್ಟು ನಿರ್ದಿಷ್ಟ ಉದಾಹರಣೆಗಳ ಮೂಲಕ ನೋಡಬಹುದು.

'ನನ್ನ ನೀನು ಗೆಲ್ಲಲಾರೆ' ಎಂಬ ಸ್ಪರ್ಧೆಯಲ್ಲಿ ಗಂಡಿನಂತೆ ತನ್ನ ಮೇಲುಡುಗೆಯನ್ನು ಕಳಚಿ ಎಸೆಯಲಾರದ ಹೆಣ್ಣು ಸೋತಳು ಎಂದು ತೋರಿಸಲಾಗಿದೆ. ಅದೇ ಹೆಣ್ಣು ಗಂಡಿಗೆ ಒಂದು ಮಗುವನ್ನು ಹೆತ್ತುಕೊಡು ಎಂದು ಹೆಣ್ಣು ಸವಾಲು ಹಾಕಿದರೆ ಗಂಡು ಒಂದು ಮಗುವನ್ನು ಹೆತ್ತು ಕೊಡಲಾರ. ಸೋಲು ಖಚಿತ.


ಪ್ರಕೃತಿಯು ಮಹಿಳೆಗೆ ಸಂತತಿಯನ್ನು ಮುಂದುವರಿಸುವ ವಿಷಯದಲ್ಲಿ ಗಂಡಿಗಿಂತಲೂ ಹೆಚ್ಚು ಜವಾಬ್ದಾರಿ-ಹೊಣೆಗಾರಿಕೆಗಳನ್ನು ಹಂಚಿಕೆ ಮಾಡಿದೆ. ಅಂದರೆ ಗರ್ಭಧರಿಸಿ ಮಕ್ಕಳನ್ನು ಹೊರುವುದು, ಹೆರುವುದು, ಎದೆಹಾಲು ಕುಡಿಸಿ ಬೆಳೆಸುವುದು ಮುಂತಾದ ಜೈವಿಕ ಜವಾಬ್ದಾರಿ ಹೆಣ್ಣಿಗಿದೆ. ಈ ಜವಾಬ್ದಾರಿ ಗಂಡಿಗಿಲ್ಲ. ಇಂತಹ ಸಂತಾನಾಭಿವೃದ್ಧಿಯ ಕಾರಣದಿಂದಲೇ ಮಹಿಳೆಯ ದೇಹ ಗಂಡಿಗಿಂತ ತೀರಾ ಭಿನ್ನ, ಹೀಗಾಗಿ ಹೆಣ್ಣಿಗೆ ಮುಟ್ಟು, ಹೊಟ್ಟೆನೋವು, ಹೆರಿಗೆ ನೋವು, ರಕ್ತಹೀನತೆ, ಬಾಣಂತನದ ಹಂತದಲ್ಲಿ ನಿಶ್ಶಕ್ತಿ ಎಲ್ಲವೂ ಕಾಡುತ್ತವೆ. ಹೆಣ್ಣಿಗೆ ಗಂಡಿಗಿಂತಲೂ ಸೋಂಕು ಖಾಯಿಲೆಗಳ ಸಾಧ್ಯತೆಗಳು ಜಾಸ್ತಿ. ಇವೆಲ್ಲವನ್ನೂ ಸಮಾಜ ಆಳವಾದ ಮಾನವೀಯವಾದ ದೃಷ್ಟಿಯಿಂದ ನೋಡಬೇಕು. ಹೆಣ್ಣು ಅಬಲೆ, ಪರಾವಲಂಬಿ, ಅಸಹಾಯಕಳು ಎಂದೆಲ್ಲಾ ಹೀಗಳೆಯದೇ, ತಾಯ್ತನ, ಹೆಣ್ತನಗಳನ್ನು ಗೌರವಿಸಿ ಗರಿಷ್ಠಮಟ್ಟದಲ್ಲಿ ಮಹಿಳೆಯರ ನೆರವಿಗೆ ನಿಲ್ಲಬೇಕು.

ಸಾಮಾನ್ಯವಾಗಿ ಪ್ರಾಕೃತಿಕವಾಗಿಯೇ ಹೆಣ್ಣಿನ ಎತ್ತರ ಗಂಡಿಗಿಂತ ಕಡಿಮೆ. ದೈಹಿಕ ಶಕ್ತಿ-ಸಾಮರ್ಥ್ಯವೂ ಹೋಲಿಕೆಯಲ್ಲಿ ಸ್ವಲ್ಪ ಕಡಿಮೆ. ಸದ್ಯಕ್ಕೆ ಈ ಜೈವಿಕ ವಾಸ್ತವವನ್ನು ಎಲ್ಲರೂ ಅದು ಇದ್ದಂತೆ ಒಪ್ಪಿಕೊಳ್ಳಬೇಕು. ಇದಕ್ಕಾಗಿ ಹೆಣ್ಣು ತಲೆ ತಗ್ಗಿಸುವುದು, ಗಂಡು ಗರ್ವದಿಂದ ಗರ್ಜಿಸುವುದು ಅಗತ್ಯವಿಲ್ಲ.

ಕುಟುಂಬವೇ ಇರಲಿ, ಸಮಾಜವೇ ಇರಲಿ ಗಂಡು-ಹೆಣ್ಣು ಪರಸ್ಪರ ಗೌರವ, ಪ್ರೀತಿ, ಸಹಕಾರ ಸಮಾನತೆಯ ಭಾವದಿಂದ ಬದುಕಿದರೆ ಕುಟುಂಬಕ್ಕೂ ಸಮಾಜಕ್ಕೂ ಕ್ಷೇಮ. ಗಂಡು-ಹೆಣ್ಣುಗಳಲ್ಲಿ ಯಾರೂ ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ. ಇಬ್ಬರೂ ವಿಶಿಷ್ಟ, ಇಬ್ಬರೂ ಅನನ್ಯ ಎಂಬ ಭಾವನೆಯಲ್ಲಿ ಜವಾಬ್ದಾರಿಗಳನ್ನು ಹಂಚಿಕೊಳ್ಳಬೇಕು.

ಈ ಒಟ್ಟು ಹಿನ್ನೆಲೆಯಲ್ಲಿ ಹೆಣ್ಣನ್ನು ಗೌರವಿಸುವುದನ್ನು ಸಮಾಜವು ಗಂಡು ಮಕ್ಕಳಿಗೆ ಸಣ್ಣ ವಯಸ್ಸಿನಿಂದಲೇ ರೂಢಿಸಬೇಕು. ಹೆಣ್ಣು ಭೋಗದ ವಸ್ತುವಲ್ಲ. ಮಾರಾಟದ ಸರಕಲ್ಲ. ಪ್ರದರ್ಶನದ ಬೊಂಬೆಯಲ್ಲ. ಹೆಣ್ಣು ಎಂದರೆ ವ್ಯಕ್ತಿತ್ವ. ಹೆಣ್ಣು ಮಕ್ಕಳು ಸೇರಿದಂತೆ ಎಲ್ಲ ಮಕ್ಕಳಿಗೂ ಉತ್ತಮ ಶಿಕ್ಷಣ, ಉತ್ತಮ ಕ್ರೀಡಾ-ಸಾಂಸ್ಕೃತಿಕ ಅವಕಾಶಗಳು, ಉತ್ತಮ ಉದ್ಯೋಗ-ಉತ್ತಮ ಬದುಕಿನ ಅವಕಾಶಗಳು ಸಿಗುವುದನ್ನು ಖಾತ್ರಿ ಪಡಿಸಬೇಕು. ಅತ್ಯಾಚಾರ, ಮಾನಭಂಗಗಳನ್ನು ನಡೆಸುವ ದೌರ್ಜನ್ಯಕೋರ ಶಕ್ತಿಗಳ ವಿರುದ್ಧ ಕಠಿಣ ಕ್ರಮಗಳನ್ನು ವಹಿಸಬೇಕು. ಜಾಗೃತ ಮಹಿಳೆ, ಸ್ವಾವಲಂಬಿ ಮಹಿಳೆ ಉತ್ತಮ ಸಮಾಜದ ಪ್ರಗತಿ ಪ್ರಧಾನ ಆಧಾರ ಆಗುತ್ತಾಳೆ ಎಂದು ➔

**ಚುನಾವಣಾ ಬಾಂಡ್ ವ್ಯವಹಾರಗಳ ವಿವರಗಳನ್ನು ಸಲ್ಲಿಸಲು ಜೂನ್ ೩೦ರ ವರೆಗೆ ಕಾಲಾವಕಾಶ ಕೋರಿ ಎಸ್‌ಬಿಐ ಜೂನ್ 4 ರಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಸರ್ವೋನ್ನತ ನ್ಯಾಯಾಲಯ ನೀಡಿದ 21 ದಿನದ ಗಡುವಿನ ಬದಲಿಗೆ ಆ ಕೆಲಸವನ್ನು ಮುಗಿಸಲು ಬ್ಯಾಂಕ್ ಇನ್ನೂ 116 ದಿನಗಳನ್ನು ಹೆಚ್ಚುವರಿಯಾಗಿ ಕೋರಿದೆ ಎಂಬುದು ಇದರ ಅರ್ಥವಾಗಿದೆ. ಅದರ ಪರಿಣಾಮ ಏನೆಂದರೆ, ಲೋಕಸಭೆ ಚುನಾವಣೆಗಳು ಮುಗಿದು ಹೊಸ ಸರಕಾರ ರಚನೆಯಾದ ನಂತರವಷ್ಟೇ ಸಾರ್ವಜನಿಕರಿಗೆ ಬಾಂಡ್ ವಿವರಗಳು ಸಿಗಲಿವೆ.**




# ಚುನಾವಣಾ ಬಾಂಡ್: ರಿಸರ್ವ್ ಬ್ಯಾಂಕ್‌ನ ಹಾಸ್ಯಾಸ್ಪದ ನಿಲುವು

**ಪ್ರಕಾಶ್ ಕಾರತ್**

ಚುನಾವಣಾ ಬಾಂಡ್ ಯೋಜನೆ ಅಸಾಂವಿಧಾನಿಕ ಮಾತ್ರವಲ್ಲದೆ ಏಕಪಕ್ಷೀಯವಾಗಿದೆ ಎಂದು ಹೇಳಿ ಸರ್ವೋಚ್ಚ ನ್ಯಾಯಾಲಯ ಅದನ್ನು ಅಸಿಂಧುಗೊಳಿಸಿದೆ. ನರೇಂದ್ರ ಮೋದಿ ಸರಕಾರಕ್ಕೆ ಸುಪ್ರೀಂ ಕೋರ್ಟ್‌ನ ಈ ತೀರ್ಪು ಅಪಥ್ಯವಾಗಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಚುನಾವಣಾ ಬಾಂಡ್ ಯೋಜನೆಯು ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸಲು ರೂಪಿಸಲಾಗಿತ್ತು ಎನ್ನುವುದನ್ನು ಗಮನಿಸಿದಾಗ ಮೋದಿ ಸರಕಾರ ಅಪ್‌ಸೆಟ್ ಆಗಿರುವುದು ಎದ್ದು ಕಾಣುತ್ತದೆ. ಬಾಂಡ್ ಯೋಜನೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದವರಲ್ಲಿ ಸಿಪಿಐ(ಎಂ) ಕೂಡ ಸೇರಿತ್ತು. ಎಲ್ಲ ಅರ್ಜಿಗಳ ವಿಚಾರಣೆ ನಡೆಸಿ ಫೆಬ್ರವರಿಯಲ್ಲಿ ಕೋರ್ಟ್ ಮಹತ್ವದ ತೀರ್ಪು ನೀಡಿತ್ತು.

ಈ ತೀರ್ಪಿನ ಅನುಷ್ಠಾನದ ಮಹತ್ವವನ್ನು ತಗ್ಗಿಸಲು ಸರಕಾರವು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಮೂಲಕ ಕ್ರಮಕ್ಕೆ ಮುಂದಾಗಿದೆ.

2019ರ ಏಪ್ರಿಲ್‌ನಿಂದೀಚೆಗೆ ಖರೀದಿಸಲಾಗಿರುವ ಚುನಾವಣಾ ಬಾಂಡ್‌ಗಳ ಎಲ್ಲಾ ವಿವರಗಳನ್ನು ಬಹಿರಂಗ ಪಡಿಸುವಂತೆ ಸುಪ್ರೀಂ ಕೋರ್ಟ್ ಫೆಬ್ರವರಿಯ ತನ್ನ ತೀರ್ಪಿನಲ್ಲಿ ನಿರ್ದೇಶಿಸಿತ್ತು. ಖರೀದಿಯ ದಿನಾಂಕ, ಖರೀದಿದಾರರ ಹೆಸರು ಮತ್ತು ಬಾಂಡ್‌ನ ಮುಖಬೆಲೆ ಮೊದಲಾದವು ಕೋರ್ಟ್ ಬಯಸಿದ ವಿವರದಲ್ಲಿ ಸೇರಿವೆ.

ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಮಾರ್ಚ್ 6 ರೊಳಗೆ ಭಾರತೀಯ ಚುನಾವಣಾ ಆಯೋಗಕ್ಕೆ ಸಲ್ಲಿಸುವಂತೆ ಚುನಾವಣಾ ಬಾಂಡ್ ವ್ಯವಹಾರಗಳಿಗೆ ಏಕೈಕ ಸಂಸ್ಥೆಯಾದ ಎಸ್‌ಬಿಐಗೆ ಕೋರ್ಟ್ ಸೂಚಿಸಿತ್ತು. ವಿವರಗಳನ್ನು ಆಯೋಗ ಮಾರ್ಚ್ 13ರೊಳಗೆ ಸಾರ್ವಜನಿಕಗೊಳಿಸಬೇಕೆಂದು ಹೇಳಿತ್ತು.

ಚುನಾವಣಾ ಬಾಂಡ್ ವ್ಯವಹಾರಗಳ ವಿವರಗಳನ್ನು ಸಲ್ಲಿಸಲು ಜೂನ್ 30ರ ವರೆಗೆ ಕಾಲಾವಕಾಶ ಕೋರಿ ಎಸ್‌ಬಿಐ ಜೂನ್ 4ರಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಸರ್ವೋನ್ನತ ನ್ಯಾಯಾಲಯ ನೀಡಿದ 21 ದಿನದ ಗಡುವಿನ ಬದಲಿಗೆ ಆ ಕೆಲಸವನ್ನು ಮುಗಿಸಲು ಬ್ಯಾಂಕ್ ಇನ್ನೂ 116 ದಿನಗಳನ್ನು ಹೆಚ್ಚುವರಿಯಾಗಿ ಕೋರಿದೆ ಎಂಬುದು ಇದರ ಅರ್ಥವಾಗಿದೆ. ಅದರ ಪರಿಣಾಮ ಏನೆಂದರೆ, ಲೋಕಸಭೆ ಚುನಾವಣೆಗಳು ಮುಗಿದು ಹೊಸ ಸರಕಾರ ರಚನೆಯಾದ ನಂತರವಷ್ಟೇ ಸಾರ್ವಜನಿಕರಿಗೆ ಬಾಂಡ್ ವಿವರಗಳು ಸಿಗಲಿವೆ.

**ವ್ಯಾಪಕ ಟೀಕೆ**

ಎಸ್‌ಬಿಐ ಮನವಿಗೆ ದೇಶದಾದ್ಯಂತ ವ್ಯಾಪಕ ಟೀಕೆ ವ್ಯಕ್ತವಾಗಿರುವುದು ಮಾತ್ರವಲ್ಲದೆ ಅದು ಅಪಹಾಸ್ಯಕ್ಕೆ ಈಡಾಗುತ್ತಿದೆ. ಎಸ್‌ಬಿಐನ ಎಲ್ಲಾ ವ್ಯವಹಾರಗಳನ್ನು ಡಿಜಿಟಲೀಕರಿಸಲಾಗಿದೆ. ಚುನಾವಣಾ ಬಾಂಡ್ ಆರಂಭಿಸಲು ಐಟಿ ವ್ಯವಸ್ಥೆ ಅಭಿವೃದ್ಧಿಗೆ ಒಟ್ಟು 1,50,15,338 ರೂಪಾಯಿಯಲ್ಲಿ 60,43,005 ರೂಪಾಯಿಯನ್ನು ಖರ್ಚು ಮಾಡಲಾಗಿದೆ ಎಂದು ಆರ್‌ಟಿಐ ಅರ್ಜಿದಾರರೊಬ್ಬರಿಗೆ ಎಸ್‌ಬಿಐ ಮಾಹಿತಿ ನೀಡಿದೆ. ಬಾಂಡ್ ಯೋಜನೆಗಾಗಿ ಐಟಿ ವ್ಯವಸ್ಥೆ ಸೃಷ್ಟಿಸಲು 60 ಲಕ್ಷ ರೂಪಾಯಿಗಿಂತಲೂ ಅಧಿಕ ಹಣವನ್ನು ವೆಚ್ಚ ಮಾಡಲಾಗಿದೆಯೆಂದ ಮೇಲೆ ಬಾಂಡ್‌ಗಳ ಕೆಲವು ದಾಖಲೆಗಳನ್ನು ಮ್ಯಾನ್ಯುಯಲ್ ಆಗಿ ಇಡಲಾಗಿದೆ ಮತ್ತು ಅವುಗಳನ್ನು ಮುಂಬಯಿಯಲ್ಲಿರುವ ಎಸ್‌ಬಿಐ ಕೇಂದ್ರ ಕಚೇರಿಯಲ್ಲಿ ಸೀಲ್ ಮಾಡಿದ ಲಕೋಟೆಗಳಲ್ಲಿ ಇರಿಸಲಾಗಿದೆ ಎಂದು ಎಸ್‌ಬಿಐ ಈಗ ಹೇಳುವುದರಲ್ಲಿ ಏನು ಅರ್ಥವಿದೆ?

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ನಿಯೋಜಿತ ಎಸ್‌ಬಿಐ ಶಾಖೆಯಲ್ಲಿ ಬಾಂಡ್ ಖರೀದಿಸಿದಾಗ ಅದು ಡಿಜಿಟಲ್ ರೂಪದಲ್ಲಿ ದಾಖಲಾಗುತ್ತದೆ. ಬೇರರ್ ಬಾಂಡ್ ಅನ್ನು ಇತರ ಯಾವುದೇ ನಿಯೋಜಿತ ಶಾಖೆಯಲ್ಲಿ ಠೇವಣಿ ಇಟ್ಟರೂ ಅದು ಒಂದು ಡಿಜಿಟಲ್ ದಾಖಲೆಯಾಗುತ್ತದೆ.

**ಗುಪ್ತ ಸಂಖ್ಯಾಕ್ಷರ**

ಎಸ್‌ಬಿಐ ನೀಡುವ ಬಾಂಡ್ ಮೇಲೆ ಹೇಗೆ ಒಂದು ಗುಪ್ತವಾದ ಅಕ್ಷರ ಹಾಗೂ ಸಂಖ್ಯೆ ಯ ಕೋಡ್‌ಅನ್ನು (ಅಲ್ಫಾನ್ಯೂಮರಿಕ್–ಸಂಖ್ಯಾಕ್ಷರ ಕೋಡ್) ನೀಡಲಾಗುತ್ತದೆ ಎನ್ನುವುದನ್ನು 2019ರಲ್ಲೇ ಹಫ್‌ಪೋಸ್ಟ್ ಇಂಡಿಯಾದಲ್ಲಿ ನಿತಿನ್ ಸೇಠಿ ಹೇಳಿದ್ದರು. ಬಾಂಡ್‌ಅನ್ನು ಖರೀದಿಸಿದವರು ಯಾರು ಹಾಗೂ ಆ ಹಣವನ್ನು ಯಾವ ಪಕ್ಷಕ್ಕೆ ದೇಣಿಗೆ ನೀಡಲಾಗಿದೆ ಎನ್ನುವುದನ್ನು ತಿಳಿಯಲು ಈ ಕೋಡ್ ಅನ್ನು ಬಳಸಬಹುದು ಎಂದಿದ್ದರು.

ಒಂದು ವೇಳೆ ಕೆಲವು ದಾಖಲೆಗಳನ್ನು ಮ್ಯಾನ್ಯುಯಲ್ ಆಗಿ ನಿರ್ವಹಿಸಲಾಗಿದೆ ಎಂದರೂ 21 ದಿನದಲ್ಲಿ 22,217 ಚುನಾವಣಾ ಬಾಂಡ್‌ಗಳ ಲೆಕ್ಕವನ್ನು ಮಾಡಲು ಆಗದು ಎನ್ನುವ ಕಾರಣವನ್ನು ನಂಬಲು ಸಾಧ್ಯವೇ ಇಲ್ಲ. ಅದಕ್ಕಾಗಿ ಎಸ್‌ಬಿಐ ಕೆಲವು ಹೆಚ್ಚುವರಿ ಸಿಬ್ಬಂದಿಯನ್ನು ಬಳಸಬೇಕಾಗಬಹುದು ಅಷ್ಟೇ.

**ಸುಪ್ರೀಂ ಕೋರ್ಟ್ ಬುದ್ಧಿವಂತಿಕೆಗೆ ಅವಮಾನ**

ಆದ್ದರಿಂದ, ಎಸ್‌ಬಿಐ ಒಂದು ಕುಂಟು ನೆಪ ಮತ್ತು ಹುಸಿ ಕಾರಣವನ್ನು ಮುಂದೊಡ್ಡಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಇದು ಸುಪ್ರೀಂ ಕೋರ್ಟ್‌ನ ಬುದ್ಧಿವಂತಿಕೆಯನ್ನು ಅವಮಾನಿಸುವುದಕ್ಕೆ ಸಮನಾಗುತ್ತದೆ. ಅಲ್ಲದೆ, ಮಾರ್ಚ್ 6ರ ಗಡುವಿನ (ಡೆಡ್‌ಲೈನ್) ಒಂದು ದಿನದ ಮುಂಚೆಯಷ್ಟೇ ಕಾಲಾವಕಾಶ ವಿಸ್ತರಣೆ ಕೋರಿ ಎಸ್‌ಬಿಐ ಅರ್ಜಿ ಸಲ್ಲಿಸಿರುವುದು ಅದರ ಕುತ್ಸಿತ ಉದ್ದೇಶವನ್ನು ಬಯಲು ಗೊಳಿಸುತ್ತದೆ. ಡೆಡ್‌ಲೈನ್ ಮೀರಿಹೋಗಿರುವುದು ಒಂದು ಮುಗಿದು ಹೋದ ಸಂಗತಿ (ಫೇಯ್ಟ್ ಅಕಾಂಪ್ಲಿ) ಎಂದು ಸಾಧಿಸುವುದು ಅದರ ಉದ್ದೇಶವಾಗಿದೆ.

**ಕೊಡು–ಕೊಳ್ಳುವಿಕೆ ವ್ಯವಹಾರ**

ಇದುವರೆಗೆ ನೀಡಲಾದ ಹಾಗೂ ನಗದು ಮಾಡಿಕೊಳ್ಳಲಾದ ಚುನಾವಣಾ ಬಾಂಡ್‌ಗಳ ಪ್ರಕಟಣೆಯನ್ನು ತಡೆಯಲು ಹಾಗೂ ವಿಫಲಗೊಳಿಸಲು ಮೋದಿ ಸರಕಾರ ಮತ್ತು ಬಿಜೆಪಿಗೆ ಸಕಾರಣಗಳಿವೆ. ಒಂದು ಕೊಡು–ಕೊಳ್ಳುವಿಕೆ ವ್ಯವಸ್ಥೆಯ ಅನುಕೂಲಕ್ಕಾಗಿ ಬಾಂಡ್ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸ್ವತಃ ಸುಪ್ರೀಂ ಕೋರ್ಟ್ ಹೇಳಿದೆ. ಒಂದು ವೇಳೆ, ಬಾಂಡ್ ಮೂಲಕ ಬಿಜೆಪಿ ಪಡೆದಿರುವ 6,565 ಕೋಟಿ ರೂಪಾಯಿಗಳ ವಿವರ (ಬ್ರೇಕ್–ಅಪ್) ಗೊತ್ತಾದರೆ ಯಾವ ಕಂಪನಿ ಅಥವಾ ವೈಯಕ್ತಿಕ ಬಂಡವಾಳಗಾರ ಬಾಂಡ್‌ಅನ್ನು ದಾನ ಮಾಡಿದ್ದಾರೆ ಹಾಗೂ ಅದಕ್ಕೆ ಪ್ರತಿಯಾಗಿ ಅವರ ಪರವಾಗಿ ಯಾವ ನೀತಿಯನ್ನು ಸರಕಾರ ರೂಪಿಸಿದೆ ಅಥವಾ ವಶೀಲಿಬಾಜಿ (ಫೇವರ್) ಮಾಡಲಾಗಿದೆ ಎನ್ನುವುದು ತಿಳಿಯುತ್ತದೆ.

ಬಿಜೆಪಿ ಸ್ವೀಕರಿಸಿದ ಚುನಾವಣಾ ಬಾಂಡ್‌ಗಳ ವಿವರ ಬಹಿರಂಗಗೊಂಡರೆ ಬಯಲಾಗುವ ಇನ್ನೊಂದು ಆಯಾಮವೂ ಇದೆ. ಬಿಜೆಪಿ ಸ್ವೀಕರಿಸಿದ ಕಾರ್ಪೊರೇಟ್ ದೇಣಿಗೆಗಳ ಬಗ್ಗೆ (ಚುನಾವಣಾ ಬಾಂಡ್ ಮೂಲಕ ಅಲ್ಲದ ಡೊನೇಶನ್) ನ್ಯೂಸ್‌ಲಾಂಡ್ರಿ ಮತ್ತು ದಿ ನ್ಯೂಸ್ ಮಿನಿಟ್ ಇತ್ತೀಚೆಗೆ ನಡೆಸಿದ ಅಧ್ಯಯನವು, ಹಿಂದಿನ ಐದು ಹಣಕಾಸು ವರ್ಷಗಳಲ್ಲಿ ಬಿಜೆಪಿಗೆ ಸುಮಾರು 335 ಕೋಟಿ ರೂಪಾಯಿ ಕಾಣಿಕೆ ಸಲ್ಲಿಸಿರುವ ಕನಿಷ್ಠ 30 ಕಂಪನಿಗಳು ಅದೇ ಅವಧಿಯಲ್ಲಿ ಕೇಂದ್ರೀಯ ಸಂಸ್ಥೆಗಳಿಂದ ಕ್ರಮಕ್ಕೆ ಒಳಗಾಗಿರುವುದನ್ನು ಬಹಿರಂಗಪಡಿಸಿದೆ. ಈ ಪೈಕಿ 23 ಕಂಪನಿಗಳು 2014ರಿಂದ ಇ.ಡಿ. ಅಥವಾ ಐಟಿ ಇಲಾಖೆಗಳಂಥ ಕೇಂದ್ರೀಯ ಸಂಸ್ಥೆಗಳು ಕ್ರಮ ಕೈಗೊಂಡ ವರ್ಷದ ನಡುವೆ ಬಿಜೆಪಿಗೆ ಯಾವತ್ತೂ ದೇಣಿಗೆ ಕೊಟ್ಟಿರಲಿಲ್ಲ. ಕೇಂದ್ರೀಯ ಸಂಸ್ಥೆಗಳು ದಾಳಿ ಮಾಡಿದ ನಾಲ್ಕು ತಿಂಗಳೊಳಗೆ ನಾಲ್ಕು ಕಂಪನಿಗಳು 9.05 ಕೋಟಿ ರೂಪಾಯಿ ಡೊನೇಶನ್ ನೀಡಿವೆ. ಅದಾಗಲೇ ಬಿಜೆಪಿಗೆ ದೇಣಿಗೆ ನೀಡುತ್ತಿದ್ದ ಆರು ಸಂಸ್ಥೆಗಳು ಕೇಂದ್ರೀಯ ಸಂಸ್ಥೆಗಳ ದಾಳಿ–ಶೋಧದ ನಂತರ ಕಾಣಿಕೆಯನ್ನು ಹೆಚ್ಚಿಸಿವೆ.

**ಹಣ ಪೀಕುವ ತಂತ್ರ**

ಬಿಜೆಪಿಗೆ ನಿಧಿಯನ್ನು ದೋಚಲು ಕೇಂದ್ರೀಯ ಸಂಸ್ಥೆಗಳನ್ನು ಬಳಸಲಾಗುತ್ತಿರುವುದಕ್ಕೆ ಇವು ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾದ ಉದಾಹರಣೆಗಳಾಗಿವೆ. ಬಿಜೆಪಿಗೆ ಸಂಬಂಧಿಸಿದ ಚುನಾವಣಾ ಬಾಂಡ್‌ಗಳ ವಿವರ ಪ್ರಕಟಗೊಂಡರೆ ಲಂಚ ಮತ್ತು ಭ್ರಷ್ಟಾಚಾರದ ಕೊಡು–ಕೊಳ್ಳುವಿಕೆ ಸಂಬಂಧ ಸಾಬೀತಾಗುವುದಲ್ಲದೆ ಕೇಂದ್ರೀಯ ಸಂಸ್ಥೆಗಳ ಬಲವಂತದ ಕ್ರಮಗಳ ಮೂಲಕ ಬ್ಲಾಕ್‌ಮೇಲ್ ಮಾಡಿ ಹೇಗೆ ಹಣವನ್ನು ಪೀಕಲಾಗುತ್ತಿದೆ ಎನ್ನುವುದೂ ಜಗಜ್ಜಾಹೀರಾಗುತ್ತದೆ.

ಮಾರ್ಚ್ 6ರ ವರೆಗೆ ಎಸ್‌ಬಿಐ ಅರ್ಜಿಯನ್ನು ಪರಿಗಣನೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್‌ಗೆ ಸಾಧ್ಯವಾಗದು. ನುಣುಚಿಕೊಳ್ಳಲು ಕೋರ್ಟ್ ಅವಕಾಶ ನೀಡಲೇಬಾರದು. ಎಸ್‌ಬಿಐ ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡಾಗ ತುಂಬಾ ಅಲ್ಪಾವಧಿಯ ಸಮಯವನ್ನಷ್ಟೇ ಅದಕ್ಕೆ ಕೊಡಬೇಕು ಹಾಗೂ ತನ್ನ ತೀರ್ಪನ್ನು ಪಾಲಿಸಲು ತಕ್ಷಣದ ಗಡುವನ್ನು ನಿಗದಿಪಡಿಸಬೇಕು.

*ಅನು: ವಿಶ್ವ*

---

ಮನಗಂಡು ಇಡೀ ಸಮಾಜ ಅದಕ್ಕಾಗಿ ಶ್ರಮಿಸಬೇಕು. ನಮ್ಮ ಈ ಅರೆಪಾಳೆಗಾರಿ–ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಎಲ್ಲ ಬದಲಾವಣೆಗಳು ಸಾಧ್ಯವೇ ಎಂದು ನಾವು ಗಂಭೀರವಾಗಿ ಯೋಚಿಸಬೇಕು.

**ಹುಸಿ ವೈಭವೀಕರಣ ಸಲ್ಲದು**

ದೇಶದಲ್ಲಿ ಮಹಿಳೆಯರ ಪರಿಸ್ಥಿತಿಯು ದಯನೀಯವಾಗಿದ್ದರೂ ಸಹ 'ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ದೇವತೆ ಎಂದು ಪೂಜಿಸಲಾಗುತ್ತದೆ, ಭಾರತೀಯ ಸಂಸ್ಕೃತಿಗೆ ಜಗತ್ತಿನಲ್ಲಿ ಸರಿಸಾಟಿಯೇ ಇಲ್ಲ' ಎಂಬ ಹುಸಿ ವೈಭವೀಕರಣದ ಮಾತುಗಳನ್ನು ನಾವು ಸಾಕಷ್ಟು ಕೇಳುತ್ತೇವೆ.

ಭಾರತದಲ್ಲಿ ಬಾಲ್ಯ ವಿವಾಹ, ವಿಧವಾ ಪದ್ಧತಿ, ದೇವದಾಸಿ ಪದ್ಧತಿ ಇನ್ನು ಎಷ್ಟೋ ಅನಿಷ್ಟ ಪದ್ಧತಿಗಳು ಇವೆ. 18–19 ಶತಮಾನಗಳವರೆಗೂ ಸತಿ ಪದ್ಧತಿ ವ್ಯಾಪಕವಾಗಿತ್ತು. ವೈದಿಕ ಸಂಸ್ಕೃತಿಯಲ್ಲಿ ಸತ್ತ ಗಂಡನ ಚಿತೆಯಲ್ಲಿ ವಿಧವೆ ಹೆಣ್ಣನ್ನು ಜೀವಂತ ಸುಡಲಾಗುತ್ತಿತ್ತು. ಬೆಂಕಿಯ ಉರಿ ತಾಳಲಾರದೇ ಚಿತೆಯಿಂದ ಹೊರಕ್ಕೆ ಓಡಿಬರುವ ಮಹಿಳೆಯನ್ನು ಬೊಂಬುಗಳಿಂದ ಬಡಿದು ಮತ್ತೆ ಚಿತೆಗೆ ತಳ್ಳುತ್ತಿದ್ದ ದೃಶ್ಯಗಳ ಬಗೆಗೆ ವಿದೇಶಿ ಪ್ರವಾಸಿಗರು ದಾಖಲಿಸಿದ್ದಾರೆ.

ಹ ರ ಪ್ಪ – ಮೊ ಹೆಂ ಜೊ ದಾ ರೋ ಸಂಸ್ಕೃತಿಯಲ್ಲಿಯೂ ಮಹಿಳೆ ತಾರತಮ್ಯಕ್ಕೆ ಗುರಿಯಾಗಿದ್ದಳು ಎನ್ನುತ್ತವೆ ಅಧ್ಯಯನಗಳು. ಈ ನಾಗರೀಕತೆಯ ಅವಶೇಷಗಳಲ್ಲಿ ಸಿಕ್ಕಿರುವ ಮೂಳೆಗಳನ್ನು ವೈಜ್ಞಾನಿಕ ಅಧ್ಯಯನಕ್ಕೆ ಗುರಿಪಡಿಸಿದಾಗ, ಮಹಿಳೆಯರು ಪುರುಷರಿಗಿಂತಲೂ ಕಡಿಮೆ ಮಾಂಸಾಹಾರ ಸೇವನೆ ಮಾಡಿರುವುದು ಕಂಡು ಬರುತ್ತದೆ. ಅಂದರೆ ಹರಪ್ಪ–ಮೊಹೆಂಜೋದಾರೋ ನಾಗರೀಕತೆಯಲ್ಲಿ ಆಹಾರದ ವಿಷಯದಲ್ಲಿ ಮಹಿಳೆ ತಾರತಮ್ಯಕ್ಕೆ ಗುರಿಯಾಗಿದ್ದಳು ಎಂಬುದು ಇದರ ಅರ್ಥ. ಮನುಷ್ಯನ ವಿಕಾಸದ ಹಂತದಲ್ಲಿ ಪುರುಷರಿಗೆ ಸಿಕ್ಕಷ್ಟು ಪೌಷ್ಟಿಕ ಆಹಾರ ಸಿಗದೇ ಮಹಿಳೆಯರ ಎತ್ತರ ಪುರುಷಗಿಂತ ಕಡಿಮೆ ಇದೆ ಎನ್ನುತ್ತವೆ ಜೀವವಿಕಾಸ ಸಂಬಂಧಿತ ವೈಜ್ಞಾನಿಕ ಅಧ್ಯಯನಗಳು. ಹೀಗಾಗಿ ಯಾವುದರ ಹುಸಿ ವೈಭವೀಕರಣವೂ ಸಲ್ಲದು. ಹನ್ನೆರಡನೇ ಶತಮಾನದ ವಚನ ಚಳುವಳಿ ಲಿಂಗ ಸಮಾನತೆಯ ನಿಟ್ಟಿನಲ್ಲಿ ಒಂದು ಅಭೂತಪೂರ್ವವಾದ ಚಳುವಳಿಯಾದರೂ ಅದಕ್ಕೂ ಕೆಲವು ಚಾರಿತ್ರಿಕ ಕಾರಣಗಳಿಗಾಗಿ ಕೆಲವು ಮಿತಿಗಳೂ ಇದ್ದವು.

ಮಹಿಳೆಯನ್ನು ಪುರುಷನಿಗೆ ಸಂಪೂರ್ಣವಾಗಿ ಸಮಾನವಾಗಿ ಗೌರವದಿಂದ ಕಾಣುವ, ಮಾನವೀಯವಾದ ಒಂದು ಹೊಸ 'ಸಮಾನತೆ'ಯ ಸಂಸ್ಕೃತಿಯನ್ನೇ ನಾವು ಬೆಳೆಸಬೇಕಿದೆ. ಅದು ನಮ್ಮೆಲ್ಲರ ಗುರಿಯಾಗಬೇಕಿದೆ.

# ಮಹಿಳೆಯರನ್ನು ವಿಭಜಿಸುವ ಶಕ್ತಿಗಳನ್ನು ಸೋಲಿಸೋಣ

**ದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದಾರೆ ಎಂದು ಮಾತನಾಡುವುದಷ್ಟೇ. ಆದರೆ, ಹೆಣ್ಣುಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡು ಮಗುವಿಗೆ ನೀಡುವ ಗೌರವ ಹೆಣ್ಣಿಗೆ ಇಲ್ಲ. ಹೆಣ್ಣು ಅಂದರೆ ಹೊರೆ, ಕೀಳು ಎಂಬ ಭಾವನೆಗಳನ್ನು ಸೃಷ್ಟಿಸಿ, ಹೆಣ್ಣು ಹುಟ್ಟುವ ಮೊದಲೇ ಗರ್ಭದಲ್ಲಿಯೇ ಚಿವುಟಿ ಹಾಕುವ ಪರಿಸ್ಥಿತಿ ಇದೆ. ಹೆಣ್ಣು ಭ್ರೂಣ ಹತ್ಯೆ ಅಪರಾಧವೆಂದು ಗೊತ್ತಿದ್ದರೂ ಕಾನೂನುಬಾಹಿರ ಸ್ಕಾನಿಂಗ್ ಸೆಂಟರ್ ಗಳಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಅಲೆಮನೆಗಳಲ್ಲಿ ಭ್ರೂಣಹತ್ಯೆಗಳು ನಡೆಯುತ್ತಿವೆ.**

ಗೌರಮ್ಮ, ಕೆ.ಆರ್.ಪುರ

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಬಂದಿದೆ. ಆಳುವವರು ಮಹಿಳೆಯರ ಅಭಿವೃದ್ಧಿಯ ಕುರಿತಾದ ಬಣ್ಣ ಬಣ್ಣದ ಮಾತುಗಳನ್ನಾಡುತ್ತಾರೆ. ಆದರೆ ನಮ್ಮನ್ನಾಳುವ ಸರ್ಕಾರಗಳಿಗೆ ಮಹಿಳೆಯರ ಮೇಲಿನ ದೌರ್ಜನ್ಯಗಳ ನಿಯಂತ್ರಣಕ್ಕೆ ಕಡಿವಾಣ ಹಾಕಲಾರದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಕಾನೂನುಗಳನ್ನು ರೂಪಿಸಬೇಕಾದ ಸಂಸದರು, ಶಾಸಕರುಗಳು ಅತ್ಯಾಚಾರ, ಮಾನಭಂಗ ಮತ್ತು ಮಹಿಳೆಯರ ಮಾರಾಟಗಳಂತಹ ಕೃತ್ಯಗಳಲ್ಲಿ ಭಾಗಿಯಾಗಿರುವ ಈ ಸಂದರ್ಭದಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಯೋಚಿಸಲಾಗುತ್ತದೆಯೇ? ಹೋರಾಟಗಳ ಮೂಲಕ ಪಡೆದ ಹಲವಾರು ಮಹಿಳಾ ಪರ ಕಾನೂನುಗಳನ್ನು ಬಲಪಡಿಸುವ ಬದಲಿಗೆ, ಇವುಗಳಿಗೆ ಬದಲಾವಣೆ ತರಲು ಹಾಗೂ ನಿಷ್ಕ್ರಿಯಗೊಳಿಸಲು ಸರ್ಕಾರಗಳು ಮುಂದಾಗಿವೆ.

ದೇಶದಲ್ಲಿ ದಿನದಿಂದ ದಿನಕ್ಕೆ ಮಹಿಳೆಯರ ಮೇಲಿನ ಹಿಂಸೆಗಳು ವಿವಿಧ ಸ್ವರೂಪಗಳಲ್ಲಿ ಜರುಗುತ್ತಿವೆ. ಕೌಟುಂಬಿಕ ದೌರ್ಜನ್ಯ, ಹಿಂಸೆ, ಲೈಂಗಿಕ ದೌರ್ಜನ್ಯ, ಮರ್ಯಾದಾ ಹತ್ಯೆಗಳು, ವರದಕ್ಷಿಣೆ ಸಾವುಗಳು. ಯುವಜನರ ಆಯ್ಕೆ ಹಕ್ಕಿನ ಮೇಲಿನ ದಾಳಿ, ಹೆಣ್ಣು ಭ್ರೂಣ ಹತ್ಯೆ, ಮಾನವ ಕಳ್ಳಸಾಗಣೆ, ಆಸಿಡ್ ದಾಳಿ ಹೀಗೆ ಹತ್ತು ಹಲವು ರೂಪದ ದಾಳಿಗಳು ಮಹಿಳೆಯರ ಮೇಲೆ ನಡೆಯುತ್ತಿವೆ. ಹಸುಗೂಸಿನಿಂದ ವಯಸ್ಸಾದ ವೃದ್ಧೆಯವರೆಗೂ, ಬುದ್ಧಿ ಭ್ರಮಣೆಯಾದವರ ಮೇಲೂ ಎಗ್ಗಿಲ್ಲದೆ ಅತ್ಯಾಚಾರ ನಡೆಯುತ್ತಿವೆ. ಗಾಂಧೀಜಿಯವರ ಕನಸಿನಂತೆ ರಾತ್ರಿ ವೇಳೆ ಮಹಿಳೆಯೊಬ್ಬಳು ನಿರ್ಭಯವಾಗಿ ನಡೆದಾಡಿದಾಗ ನಮಗೆ ಸ್ವತಂತ್ರ ಲಭಿಸಿದಂತೆ ಎಂದರು. ಆದರೆ ಈಗ ರಾತ್ರಿಯಿರಲಿ, ಹಗಲಿನಲ್ಲಿಯೂ ಮಹಿಳೆ ಮತ್ತು ಮಕ್ಕಳು ಸುರಕ್ಷಿತರಾಗಿಲ್ಲ ಎಂಬುದಕ್ಕೆ ಪ್ರತಿದಿನ ನಡೆಯುವ ಘಟನೆಗಳು ಸಾಕ್ಷಿಯಾಗಿವೆ ಮತ್ತು ಆತಂಕಕಾರಿಯಾಗಿವೆ.

**ಹೆಚ್ಚುತ್ತಿರುವ ಅಪರಾಧ ಪ್ರಕರಣಗಳು**

2018 ರ ಚುನಾವಣೆಯಲ್ಲಿ ನರೇಂದ್ರ ಮೋದಿಯವರು ಬೇಟಿ ಬಚಾವೊ ಭೇಟಿ ಪಡಾವೊ ಎಂಬ ಘೋಷಣೆ ಮೊಳಗಿಸಿದರು. ಮೋದಿಯವರು ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟುತ್ತಾರೆ ಅಂತ ದೇಶದ ಮಹಿಳೆಯರು ತುಂಬಾ ಖುಷಿಯಾಗಿದ್ದರು. ಆದರೆ ನಮ್ಮ ಎನ್.ಸಿ.ಅರ್.ಬಿ. ವರದಿ 2023 ಡಿಸೆಂಬರ್ ವೇಳೆಗೆ ದೇಶದಲ್ಲಿ ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳು ಶೇ. 4 ಹೆಚ್ಚಾಗಿರುವುದನ್ನು ಅಂಕಿ ಸಂಖ್ಯೆಗಳು ಸೂಚಿಸುತ್ತವೆ. ಪ್ರತಿ ನಿಮಿಷಕ್ಕೆ ಒಂದು ಅತ್ಯಾಚಾರ ನಡೆಯುತ್ತದೆ. ಅಂದರೆ ಒಂದು ದಿನಕ್ಕೆ 100 ಅತ್ಯಾಚಾರ ನಡೆಯುತ್ತವೆ. 2020 ರಲ್ಲಿ 3,71,503 ಪ್ರಕರಣಗಳು ನಡೆದರೆ, 2022 ರಲ್ಲಿ ಮತ್ತಷ್ಟು ಹೆಚ್ಚಾಗಿ 4,44,256 ಪ್ರಕರಣಗಳು ನಡೆದಿವೆ. ಗಂಡ ಮತ್ತು ಸಂಬಂಧಿಕ ರಿಂದ ಕ್ರೌರ್ಯ ಶೇ. 31.4, ಮಹಿಳೆಯರ ಅಪಹರಣ ಶೇ. 19.2 ಈ ಅಂಕಿ ಸಂಖ್ಯೆ ಮಹಿಳೆಯರ ವ ' ೦ ೀ ಲ ' ನಡೆಯುತ್ತಿರುವ ದೌರ್ಜನ್ಯಗಳನ್ನು ಎತ್ತಿತೋರಿಸುತ್ತದೆ. ಅತ್ಯಾಚಾರ 2021 ರಲ್ಲಿ ಶೇ. 64.5 ರಷ್ಟಿದ್ದು, ಪ್ರತಿ ಒಂದು ಲಕ್ಷ ಮಹಿಳಾ ಜನಸಂಖ್ಯೆಗೆ ಅಪರಾಧ ಪ್ರಮಾಣ ಶೇ. 66.4 ಕ್ಕೆ ಏರಿಕೆಯಾಗಿರುವುದು ಆತಂಕ ಸೃಷ್ಟಿಸುತ್ತದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮಹಿಳೆಯರ ಮೇಲಿನ ದೌರ್ಜನ್ಯವು ಶೇ. 14.3 ರಷ್ಟು ಏರಿಕೆ ಕಂಡಿದೆ.



ಕರ್ನಾಟಕ ರಾಜ್ಯದಲ್ಲಿ 10,000 ಮಹಿಳೆಯರಲ್ಲಿ ಶೇ. 45 ರಷ್ಟು ಮಹಿಳೆಯರು ಹಿಂಸೆ ಅನುಭವಿಸುತ್ತಿದ್ದಾರೆ. 62 ಮಹಿಳೆಯರು ಪೊಲೀಸರ ಸಹಾಯ ಕೇಳಿದರೆ 16 ಮಹಿಳೆಯರಿಗೆ ಸಹಾಯ ಸಿಗುತ್ತದೆ. 2021 ಎನ್.ಎಫ್.ಹೆಚ್. ಎಸ್.–2021 ರ ಸರ್ವೆ ಪ್ರಕಾರ ಶೇ. 54 ಮಹಿಳೆಯರು ಹಾಗೂ ಶೇ. 51 ಪುರುಷರು ಹೆಂಡತಿಗೆ ಹೊಡೆಯುವುದನ್ನು ಅನುಮೋದಿಸಿದ್ದಾರೆ. ಯಾವ ಕಾರಣಕ್ಕೆ ಅಂದರೆ ದೈಹಿಕ ಸಂಪರ್ಕ ನಿರಾಕರಣೆಗಾಗಿ ಎಂದು ನಿಮಾನ್ಸ್ ವೈದ್ಯರು ಹೇಳುತ್ತಾರೆ.

ದೌರ್ಜನ್ಯ ಅನ್ನುವುದು ಕೂತು ಚರ್ಚಿಸುವ ವಿಷಯ ಅಲ್ಲ. ಹಿಂಸೆಗೆ ಉತ್ತರ ಅಂದರೆ ಕೌನ್ಸಿಲ್ ಅಲ್ಲ. ಕೌಟುಂಬಿಕ ಹಿಂಸೆ ತಡೆಗಟ್ಟಲು ಇರುವ ಕೌಟುಂಬಿಕ ದೌರ್ಜನ್ಯ ತಡೆ ಕಾನೂನನ್ನು ಬಲಗೊಳಿಸಿ. ಅದಕ್ಕೆ ಬೇಕಾದ ನುರಿತ ರಕ್ಷಣಾಧಿಕಾರಿಗಳು, ವಕೀಲರು ಹಾಗೂ ಪೊಲೀಸರನ್ನು ನಿಯೋಜಿಸಬೇಕು ಎಂದು ಸಿ.ಡಬ್ಲ್ಯೂ.ಎಲ್ ನ ವಕೀಲರು ಹೇಳುತ್ತಾರೆ.

ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಸಹ 2017 ರಿಂದ 2023 ರ ಅವಧಿಯಲ್ಲಿ ಶೇ. 94.47 ಏರಿಕೆಯಾಗಿದೆ. ಬಾಲ್ಯ ವಿವಾಹಗಳ ಪ್ರಮಾಣ ದೇಶದಲ್ಲಿ ಶೇ. 45 ಇದ್ದರೆ, ಬಾಲ್ಯ ವಿವಾಹ ಮತ್ತು ದೌರ್ಜನ್ಯದ ವರದಿಯಲ್ಲಿ ಕರ್ನಾಟಕ ನಂಬರ್ ಒನ್ ಸ್ಥಾನ ಪಡೆದಿದೆ.

**ಹಲ್ಲು ಕಿತ್ತ ಹಾವಿನಂತಾಗಿರುವ ವರದಕ್ಷಿಣೆ ನಿಷೇಧದ ಕಾನೂನು**

ಹೆಣ್ಣೆತ್ತ ತಾಯಿ ತಂದೆಯರು ಮದುವೆಗೆ ಮಾಡಿದ ಸಾಲ ತೀರಿಸಲಾದರೆ ನೇಣಿಗೆ ಕೊರಳೊಡ್ಡುವ ಪರಿಸ್ಥಿತಿಗಳಿವೆ. ವರದಕ್ಷಿಣೆ ನಿಷೇಧದ ಕಾನೂನು ಇರುವಾಗ ಒಂದಷ್ಟು ಮಹಿಳೆಯರ ಮೇಲಿನ ದೌರ್ಜನ್ಯ ಹತೋಟಿಯಲ್ಲಿತ್ತು. ಆದರೆ ಪುರುಷ ಪ್ರಧಾನ ಮೌಲ್ಯಗಳನ್ನು ಹೊಂದಿರುವ ಹಾಗೂ ಮನುಸ್ಮೃತಿಯನ್ನು ಜಾರಿಗೆ ತರಲು ಮುಂದಾಗಿರುವ ಕೇಂದ್ರದ ನರೇಂದ್ರ ಮೋದಿ ಸರ್ಕಾರ, ವರದಕ್ಷಿಣೆ ವಿರೋಧಿ ಕಾನೂನನ್ನು ಹಲ್ಲು ಕಿತ್ತ ಹಾವಿನಂತೆ ಬದಲಾವಣೆ ಮಾಡಿದ ಕಾರಣ ವರದಕ್ಷಿಣೆ ಹಿಂಸೆಗಳು ಜಾಸ್ತಿಯಾಗಿವೆ, ನೊಂದ ಮಹಿಳೆಯರು ಮನೆಯಿಂದ ಹೊರಬಂದು ದೂರು ನೀಡುವ ವಾತಾವರಣವೇ ಇಲ್ಲದ ಸಂದರ್ಭದಲ್ಲಿಯೂ ದೇಶದಲ್ಲಿ 13,479 ವರದಕ್ಷಿಣೆ ಪ್ರಕರಣಗಳು ದಾಖಲಾಗಿವೆ. ಬೆಳಕಿಗೆ ಬಾರದ ಪ್ರಕರಣಗಳೆಷ್ಟೋ? ಬೆಂಗಳೂರು ನಗರದಲ್ಲಿ ವರದಕ್ಷಿಣೆ ಹಿಂಸೆಗಳು ಜಾಸ್ತಿಯಾಗಿ, ಈ ಕಿರುಕುಳಕ್ಕೆ 25 ಮಹಿಳೆಯರು ಬಲಿಯಾದ ಪ್ರಕರಣಗಳಿವೆ.

**ಜಾತಿವಾದಿ ಮತ್ತು ಪಿತೃಪ್ರಧಾನ ವ್ಯವಸ್ಥೆ**

ಜಾತಿವಾದಿ ಮತ್ತು ಪಿತೃಪ್ರಧಾನ ದಂತಹ ಕೆಟ್ಟ ವ್ಯವಸ್ಥೆಯಿಂದಾಗಿ ಯುವಜನರು ತಮಗೆ ಬೇಕಾದ ಬಾಳ ಸಂಗಾತಿಗಳನ್ನು ಆಯ್ಕೆ ಸಂದರ್ಭಗಳಲ್ಲಿ ಸಾಕಷ್ಟು ಕೊಲೆಗಳು ನಡೆದಿವೆ. ಕುಟುಂಬಸ್ಥರು ಒಪ್ಪಿದರೂ ನೆರೆ ಹೊರೆಯವರ ಹೀಯಾಳಿಕೆ ಮೂದಲಿಸುವಿಕೆಗಳಿವೆ. ಬಾಳಿ ಬದುಕಬೇಕಾದ ಜೀವಗಳು ಕೊಲೆಗಳಲ್ಲಿ ಅಂತ್ಯವಾಗುತ್ತಿವೆ. ಜಾತಿ ರಾಜಕಾರಣ ಹೋಗಬೇಕಿದೆ ಹಾಗೂ ಅವಮರ್ಯಾದ ಹೆಸರಿನಲ್ಲಿ ನಡೆಯುವ ಕೊಲೆಗಳ ನಿಯಂತ್ರಣಕ್ಕೆ ಹೊಸ ಕಾನೂನಿನ ಅಗತ್ಯವಿದೆ. ಪ್ರೀತಿ ನಿರಾಕರಿಸಿದ ಕಾರಣಕ್ಕೆ ಅಸಿಡ್ ದಾಳಿಗೆ ತುತ್ತಾದ ಹೆಣ್ಣುಮಕ್ಕಳು ಈಗಲೂ ತಮ್ಮ ಜೀವನೋಪಾಯಕ್ಕೆ ಸರ್ಕಾರದ ಕಚೇರಿಗಳಿಗೆ ಅಲೆದಾಡುವ ಪ್ರಸಂಗಗಳು ಕಾಣ್ಮುಂದೆ ಕಾಣಿಸುತ್ತವೆ.


**ದುಡಿಯುವ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ**

ಬೆಲೆ ಏರಿಕೆಯಂತಹ ಈ ಸಂಧರ್ಭದಲ್ಲಿ ಗಂಡ ಹೆಂಡತಿ ಇಬ್ಬರೂ ದುಡಿದರೂ ಜೀವನ ನಿರ್ವಹಣೆ ಮಾಡಲಾರದ ಪರಿಸ್ಥಿತಿ ಇದೆ. ಅಂತಹ ಸಂದರ್ಭಗಳಲ್ಲಿ ಮಹಿಳೆಯರು ದುಡಿಯುವ ಸ್ಥಳದಲ್ಲಿಯೂ ಲೈಂಗಿಕ ಕಿರುಕುಳಗಳನ್ನು ಅನುಭವಿಸುತ್ತಿದ್ದಾರೆ. ಕೆಲವು ಅಧ್ಯಯನಗಳ ಪ್ರಕಾರ ದೇಶದಲ್ಲಿ ದುಡಿಯುವ ಸ್ಥಳಗಳಲ್ಲಿ ಶೇ. 80 ರಷ್ಟು ಮಹಿಳೆಯರು ಲೈಂಗಿಕ ಕಿರುಕುಳವನ್ನು ಎದುರಿಸುತ್ತಿದ್ದಾರೆ. ಕಳೆದ ವರ್ಷ ಇಂತಹ ಶೇ 57 ರಷ್ಟು ವರದಿಯಾಗಿವೆ. ಜಾಗತಿಕ ಮಟ್ಟದಲ್ಲಿಯೂ ಭಾರತ ಕಿರುಕುಳದಲ್ಲಿ ಮುಂದಿದೆ.

ದೇಶದ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದಾರೆ ಎಂದು ಮಾತನಾಡುವುದಷ್ಟೇ. ಆದರೆ, ಹೆಣ್ಣುಮಕ್ಕಳ ಸಂಖ್ಯೆ ಕ್ಷೀಣಿಸುತ್ತಿದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡು ಮಗುವಿಗೆ ನೀಡುವ ಗೌರವ ಹೆಣ್ಣಿಗೆ ಇಲ್ಲ, ಹೆಣ್ಣು ಅಂದರೆ ಹೊರೆ, ಕೀಳು ಎಂಬ ಭಾವನೆಗಳನ್ನು ಸೃಷ್ಟಿಸಿ, ಹೆಣ್ಣು ಹುಟ್ಟುವ ಮೊದಲೇ ಗರ್ಭದಲ್ಲಿಯೇ ಚಿವುಟಿ ಹಾಕುವ ಪರಿಸ್ಥಿತಿ ಇದೆ. ಹೆಣ್ಣು ಭ್ರೂಣ ಹತ್ಯೆ ಅಪರಾಧವೆಂದು ಗೊತ್ತಿದ್ದರು ಕಾನೂನುಬಾಹಿರ ಸ್ಕ್ಯಾನಿಂಗ್ ಸೆಂಟರ್ ಗಳಲ್ಲಿ, ಮಂಡ್ಯ ಜಿಲ್ಲೆಯಲ್ಲಿ ಅಲೆಮನೆಗಳಲ್ಲಿ ಭ್ರೂಣಹತ್ಯೆಗಳು ನಡೆಯುತ್ತಿವೆ. 2014–15 ರಲ್ಲಿ 1000 ಗಂಡು ಮಕ್ಕಳಿಗೆ 918 ರಷ್ಟಿದ್ದ ಹೆಣ್ಣು ಮಕ್ಕಳ ಜನನದ ಲಿಂಗಾನುಪಾತ 2022–23ರ ಅವಧಿಯಲ್ಲಿ 933ಕ್ಕೆ ಮುಟ್ಟಿದೆ. ಇದನ್ನು ಕೇಂದ್ರ ಸಚಿವೆ ಸ್ಮೃತಿ ಇರಾನಿಯವರು

ಪುಟ 14 ಕ್ಕೆ





# ಯುವತಿಯರು ಮತ್ತು ಬದುಕಿನ ತಲ್ಲಣಗಳು



**ಯುವತಿಯರು ತಮ್ಮ ಆಯ್ಕೆಯ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಅದು ಬಾಳ ಸಂಗಾತಿಯ ಆಯ್ಕೆ ಆಗಿರಬಹುದು, ತನ್ನಿಚ್ಛೆಯ ಓದಿನ ಆಯ್ಕೆ ಆಗಿರಬಹುದು, ತನಗೆ ಇಷ್ಟವಾಗುವ ಕೆಲಸದ ಆಯ್ಕೆ ಆಗಿರಬಹುದು, ತಾನು ಉಡುವ ಬಟ್ಟೆಯ ಆಯ್ಕೆಯೂ ಆಗಿರಬಹುದು. ತನ್ನ ಅನೇಕ ಬೇಕು-ಬೇಡಗಳ ಬಗ್ಗೆ ರಾಜಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ರಾಜಿ ಮಾಡಿಕೊಳ್ಳುವುದು, ತ್ಯಾಗದ ಮನೋಭಾವನೆ ಕೇವಲ ಹೆಣ್ಣಿನ ಗುಣ ಎಂಬಂತೆ ಬಿಂಬಿಸಲಾಗಿದೆ. ಹಾಗೆ ಮಾಡಿದರೆ ಮಾತ್ರ ಅವಳು ಪರಿಪೂರ್ಣ ಹೆಣ್ಣು. ಅದೇ ಅವಳ ಅಸ್ತಿತ್ವ ಎನ್ನುವ ರೀತಿ ಸುತ್ತಮುತ್ತಲಿನ ವಾತಾವರಣ ನಿರ್ಮಾಣವಾಗಿದೆ.**

ಲವಿತ್ರ ವಸ್ತ್ರದ
ಕಲಬುರಗಿ

ಮೊಲೆ, ಮುಡಿ ಬಂದಡೆ ಹೆಣ್ಣೆಂಬರು ಗಡ್ಡ ಮೀಸೆ ಬಂದಡೆ ಗಂಡೆಂಬರು ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ

ಈ ವಚನ ನಮ್ಮೊಳಗಿನ ಆತ್ಮ ನಮ್ಮೊಳಗಿನ ಮನಸ್ಸು ಹೆಣ್ಣು ಅಲ್ಲ ಗಂಡು ಅಲ್ಲ, ಅದು ಯಾವುದೇ ಲಿಂಗವನ್ನು ಹೊಂದಿರುವಂತದ್ದಲ್ಲ, ಲಿಂಗವನ್ನು ಮೀರಿದಂತದ್ದು ಈ ಮನಸ್ಸು ಅಂತ ಹೇಳುತ್ತದೆ. 12ನೇ ಶತಮಾನದಿಂದ ನಾವು 22ನೇ ಶತಮಾನಕ್ಕೆ ಕಾಲಿಟ್ಟರೂ ಸಹ ಲಿಂಗ-ಜಾತಿ-ವರ್ಗ-ವರ್ಣ ಆಧಾರಿತ ತಾರತಮ್ಯ ಇನ್ನೂ ನಮ್ಮ ಮಧ್ಯೆ ಉಳಿದುಕೊಂಡಿದೆ. ದೇಶದ ಯುವಜನತೆಯ ಸಂಖ್ಯೆಯಲ್ಲಿ ಸುಮಾರು 50 ಪ್ರತಿಶತದಷ್ಟು ಯುವತಿಯರು ಇದ್ದರೂ ಸಹ ತಮ್ಮ ಹಕ್ಕುಗಳಿಗಾಗಿ ಹುಟ್ಟಿನಿಂದಲೂ ಹೋರಾಟ ಮುಂದುವರಿಸಬೇಕಾಗಿದೆ. ಆಹಾರಕ್ಕಾಗಿ, ಶಿಕ್ಷಣಕ್ಕಾಗಿ, ಉದ್ಯೋಗಕ್ಕಾಗಿ, ಕೌಟುಂಬಿಕ ಹಂತಗಳಲ್ಲಿ ಹೀಗೆ ಅನೇಕ ಹೋರಾಟಗಳನ್ನು ಮಾಡುತ್ತಲೇ ಬಂದಿದ್ದಾರೆ.

ಹುಟ್ಟಿದ ಮೇಲೆ ಮನೆಯಲ್ಲಿ ಗಂಡು ಮಕ್ಕಳು ಇದ್ದರೆ ಊಟಕ್ಕಾಗಿ ಅವರೊಂದಿಗೆ ಹೋರಾಟ ನಡೆಸಲೇಬೇಕು. ನಮ್ಮ ಭಾರತ ಹಳ್ಳಿಗಳಿಂದ ಕೂಡಿದ ಭಾರತವಾಗಿರುವುದರಿಂದ ನಮ್ಮೊಳಗೆ ಇನ್ನೂ ಲಿಂಗ ತಾರತಮ್ಯದ ಅಂಶಗಳು ಉಳಿದಿರುವುದರಿಂದ ಮನೆಯ ಗಂಡು ಮಕ್ಕಳು ಊಟ ಮಾಡಿದ ಮೇಲೆಯೇ ಉಳಿದದ್ದು ಹೆಣ್ಣು ಮಕ್ಕಳು ಊಟ ಮಾಡಬೇಕು ಎನ್ನುವ ಮನೋಭಾವ ಜೀವಂತವಾಗಿರುವುದರಿಂದ ಅಪೌಷ್ಟಿಕತೆಯು ನಮ್ಮ ಹೆಣ್ಣು ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. 125 ದೇಶಗಳನ್ನು ಒಳಗೊಂಡ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಬಾರತ 111ನೇ ಸ್ಥಾನ ಪಡೆದಿದೆ. 15 ರಿಂದ 24 ವರ್ಷದ ಒಳಗಿನ ಯುವತಿಯರಲ್ಲಿ ಅನೀಮಿಯಾ ಸಮಸ್ಯೆ ಶೇ. 58.1 ರಷ್ಟಿದೆ ಎಂಬ ವರದಿ ಇದೆ.

ಪ್ರಾಥಮಿಕ ಶಾಲೆಗಳಲ್ಲಿ ಸುಮಾರು 95 ಪ್ರತಿಶತ ದಾಖಲಾತಿ ಆದರೆ ಅದು ಉನ್ನತ ಶಿಕ್ಷಣಕ್ಕೆ ಬರುವಷ್ಟಿಗೆ 27 ಪ್ರತಿಶತಕ್ಕೆ ಬಂದು ನಿಲ್ಲುತ್ತದೆ. ಕಾಲೇಜುಗಳಿಂದ ದೂರ ಉಳಿಯುವ ಈ 68 ಪ್ರತಿಶತದಲ್ಲಿ ಹೆಚ್ಚಿನ ಪಾಲು ಯುವತಿಯರದ್ದೆ. ಹಳ್ಳಿಗಳಲ್ಲಿ ಶಾಲೆಯನ್ನು ಮುಗಿಸಿ ಮುಂದಿನ ಅಭ್ಯಾಸಕ್ಕಾಗಿ ತಾಲೂಕು ಅಥವಾ ನಗರಗಳಿಗೆ ಬರುವುದು ಯುವತಿಯರಿಗೆ ಕಷ್ಟಕರವಾದದ್ದು. ದಿನೇ ದಿನೇ ಹೆಚ್ಚುತ್ತಿರುವ ಸಾಮೂಹಿಕ ಅತ್ಯಾಚಾರಗಳು, ಮಾನಸಿಕ ಹಿಂಸೆಗಳು, ದೈಹಿಕ ಹಿಂಸೆಗಳು ಯುವತಿಯರನ್ನು ಅವರ ಹಕ್ಕುಗಳಿಂದ ದೂರ ಮಾಡುತ್ತಿವೆ. ಉನ್ನತ ಶಿಕ್ಷಣವನ್ನು ಪಡೆಯಲಿಕ್ಕಾಗಿ ಪ್ರತಿದಿನ ಓಡಾಡಲು ಸಮಯಕ್ಕೆ ಸರಿಯಾಗಿ ಬಸ್ ಗಳ ವ್ಯವಸ್ಥೆ ಇಲ್ಲದಿರುವುದು ಈ ಎಲ್ಲಾ ಕಾರಣಗಳಿಂದಾಗಿ ಯುವತಿಯರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಓದಲು ಇಚ್ಛೆ ಇದ್ದರೂ ಫೀಸ್ ಕಟ್ಟಲು ಸಹ ಹಣ ಇಲ್ಲದಿರುವಾಗ ಅನೇಕ ಯುವತಿಯರು ಶಿಕ್ಷಣವನ್ನು ಮರೆತು ಉದ್ಯೋಗಕ್ಕಾಗಿ ನಗರಗಳಿಗೆ ಬಂದು ವಾಸಿಸುತ್ತಿದ್ದಾರೆ. ಹೆಚ್ಚಿನ ಶಿಕ್ಷಣ ಪಡೆಯಲಾರದ ಯುವತಿಯರು ಒಂದು ರೀತಿ ಕಷ್ಟ ಪಡುತ್ತಿದ್ದರೆ, ಉನ್ನತ ಶಿಕ್ಷಣವನ್ನು ಪಡೆದಿರುವಂತಹ ಯುವತಿಯರು ವಿವಿಧ ರೀತಿಯ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಮನೆ ಕೆಲಸ, ಕಟ್ಟಡ ನಿರ್ಮಾಣ ಕೆಲಸ, ಸಣ್ಣಪುಟ್ಟ ಅಂಗಡಿಗಳಲ್ಲಿ, ಮಾಲ್‌ಗಳಲ್ಲಿ ಕೆಲಸ ಹೀಗೆ ಅನೇಕ ರೀತಿಯ ಕೆಲಸಗಳಲ್ಲಿ ತಾವು ಬೆವರು ಸುರಿಸಿ ದುಡಿದಂತಹ ಶ್ರಮಕ್ಕೆ ನ್ಯಾಯಯುತವಾದ ಕನಿಷ್ಟ ವೇತನ ಸಿಗುತ್ತಿಲ್ಲ.

**ಕೆಲಸದ ಸ್ಥಳಗಳಲ್ಲಿ ಅಸುರಕ್ಷತೆ**

ಕಷ್ಟಪಟ್ಟು ಓದಿ ಉನ್ನತ ವ್ಯಾಸಂಗ ಪಡೆದ ಮೇಲೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಕೆಲಸಗಳನ್ನು ಗಿಟ್ಟಿಸಿಕೊಳ್ಳಲು ಅನೇಕ ಯುವತಿಯರು ತಮ್ಮ ಊರುಗಳನ್ನು ಬಿಟ್ಟು ಬೇರೊಂದು ದೂರದ ನಗರಕ್ಕೆ ಹೋಗಿ ಕೆಲಸವನ್ನು ಮಾಡುತ್ತಿದ್ದಾರೆ. ಖಾಸಗಿ ಮತ್ತು ಸರಕಾರಿ ಸಂಸ್ಥೆಗಳಲ್ಲಿ ಕೆಲಸಗಳನ್ನು ಮಾಡುತ್ತಿರುವ ಯುವತಿಯರು ಅಲ್ಲಿನ ಲಿಂಗ ತಾರತಮ್ಯಕ್ಕೆ ಬಲಿಯಾಗುತ್ತಿದ್ದಾರೆ. ಕೆಲಸದ ಸ್ಥಳಗಳಲ್ಲಿ ಅಸುರಕ್ಷತೆ ಇದೆ. ಕೆಲಸದ ಸ್ಥಳಗಳಲ್ಲಿ ಲೈಂಗಿಕ ಮತ್ತು ಮಾನಸಿಕ ಕಿರುಕುಳಗಳನ್ನು ಅನುಭವಿಸುತ್ತಿದ್ದಾರೆ. ಕೆಲಸ ಮಾಡುವ ಅನೇಕ ಸ್ಥಳಗಳಲ್ಲಿ ಇಂತಹ ಕಿರುಕುಳಗಳು ಆದಾಗ ಹೇಳಿಕೊಳ್ಳಲು ಆಂತರಿಕ ದೂರು ಸಮಿತಿಗಳಿಲ್ಲ. ಸಮಿತಿಗಳಿದ್ದರೂ ನಿಷ್ಕ್ರಿಯವಾಗಿವೆ. ಹೀಗಾಗಿ ಅವರಲ್ಲಿ ಅಸುರಕ್ಷತೆಯ ಭಾವ ಹೆಚ್ಚು ಕಾಡುತ್ತದೆ. ಜೀವನದಲ್ಲಿ ಎದುರಾಗುತ್ತಿರುವಂತಹ ಸವಾಲುಗಳನ್ನು ಎದುರಿಸಲು ಆಗದೆ ಖಿನ್ನತೆಗೆ ಒಳಗಾಗುತ್ತಿದ್ದಾರೆ.

ಎನ್.ಸಿ.ಆರ್.ಬಿ. ವರದಿಯ ಪ್ರಕಾರ 2023 ರಲ್ಲಿ ಸರಿಸುಮಾರು ಒಂದು ಲಕ್ಷ ನಿರುದ್ಯೋಗಿಗಳು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ಭರವಸೆ ನೀಡಿ ಓಟು ಪಡೆದು ಕುರ್ಚಿ ಏರಿದ ಕೇಂದ್ರ ಸರಕಾರವು ಇಲ್ಲಿಯವರೆಗೆ ಹೊಸ ಉದ್ಯೋಗಗಳನ್ನು ಸೃಷ್ಟಿ ಮಾಡಿಲ್ಲ. ಕೋವಿಡ್ ಸಂದರ್ಭದಲ್ಲಿ ಅನೇಕ ಯುವಜನರು ಕೆಲಸವನ್ನು ಕಳೆದುಕೊಳ್ಳಬೇಕಾಯಿತು. ನಿರುದ್ಯೋಗದ ಪ್ರಮಾಣ ಏರುತ್ತಲೆ ಇದೆ. ನಿರುದ್ಯೋಗ ಮತ್ತು ಬಡತನವು ಸಾಮಾಜಿಕ ಅಸಮಾನತೆಗೆ ತಕ್ಕಂತೆ ತನ್ನ ಅಪಾಯಗಳನ್ನು ಬಿಟ್ಟುಕೊಡುತ್ತಿದೆ. ದಲಿತ, ಅಲ್ಪಸಂಖ್ಯಾತ, ಹಿಂದುಳಿತ, ಕೃಷಿಕ ಸಮುದಾಯದ, ಕೃಷಿಕೂಲಿ ಕಾರ್ಮಿಕ ಸಮುದಾಯದ ಯುವತಿಯರನ್ನು ನಿರುದ್ಯೋಗ ಮತ್ತು ಬಡತನವು ಹೆಚ್ಚು ಕಾಡುತ್ತಿದೆ ಮತ್ತು ಅಪಾಯದತ್ತ ದೂಡುತ್ತಿದೆ.

**ಕೌಟುಂಬಿಕ ದೌರ್ಜನ್ಯ**

ಇನ್ನು ಮಹಿಳೆಯರು, ಯುವತಿಯರು ಮನೆಯಲ್ಲಿ ಇದ್ದುಕೊಂಡು ಕೆಲಸ ಮಾಡುವಾಗ ಹೆಚ್ಚು ಕಷ್ಟಗಳನ್ನು ಅನುಭವಿಸಿದ್ದಾರೆ. ಕೌಟುಂಬಿಕ ದೌರ್ಜನ್ಯವು ಕೋವಿಡ್ ಸಂದರ್ಭದಲ್ಲಿ ದುಪ್ಪಟ್ಟು ಹೆಚ್ಚಾಗಿದೆ. ಮನೆಯ ಕೆಲಸ, ಆಫೀಸಗಳ ಕೆಲಸ, ಒತ್ತಾಯದ ಲೈಂಗಿಕ ಧಾಳಿ ಇವೆಲ್ಲವುಗಳ ಮಧ್ಯೆ ಅವಳು ಖಿನ್ನತೆಯತ್ತ ಹೋಗುತ್ತಿದ್ದಾಳೆ ಎಂಬುದನ್ನು ಕುಟುಂಬದವರು ಗಮನಿಸುವುದೇ ಇಲ್ಲ. 2021 ರ ಆತ್ಮಹತ್ಯೆಗಳಲ್ಲಿ ಸುಮಾರು 29 ಪ್ರತಿಶತ ಆತ್ಮಹತ್ಯೆಗಳು ಮಹಿಳೆಯರಲ್ಲಿ ಕಂಡುಬಂದಿದೆ.

ಬಾಲ್ಯ ವಿವಾಹಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ದಾಖಲಾಗುವ ಪ್ರಕರಣಗಳು ಕಡಿಮೆ ಇರಬಹುದು. ಆದರೆ ಯಾರಿಗೂ ಗೊತ್ತಾಗದಂತೆ ನಡೆಯುವ ಬಾಲ್ಯ ವಿವಾಹಗಳು ಹೆಚ್ಚಾಗಿದೆ. ಕೋವಿಡ್ ಸಂದರ್ಭದಲ್ಲಂತೂ ಬಾಲ್ಯ ವಿವಾಹಗಳು ಹೆಚ್ಚು ನಡೆದಿವೆ. ಮರ್ಯಾದಾ ಹತ್ಯೆಗಳಿಗೆ ಕಾನೂನು ರೀತಿಯಲ್ಲಿ ನ್ಯಾಯ ಸಿಗದೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ಯುವತಿಯರು ತಮ್ಮ ಆಯ್ಕೆಯ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ಅದು ಬಾಳ ಸಂಗಾತಿಯ ಆಯ್ಕೆ ಆಗಿರಬಹುದು, ತನ್ನಿಚ್ಛೆಯ ಓದಿನ ಆಯ್ಕೆ ಆಗಿರಬಹುದು, ತನಗೆ ಇಷ್ಟವಾಗುವ ಕೆಲಸದ ಆಯ್ಕೆ ಆಗಿರಬಹುದು, ತಾನು ಉಡುವ ಬಟ್ಟೆಯ ಆಯ್ಕೆಯೂ ಆಗಿರಬಹುದು. ತನ್ನ ಅನೇಕ ಬೇಕು-ಬೇಡಗಳ ಬಗ್ಗೆ ರಾಜಿ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ರಾಜಿ ಮಾಡಿಕೊಳ್ಳುವುದು, ತ್ಯಾಗದ ಮನೋಭಾವನೆ ಕೇವಲ ಹೆಣ್ಣಿನ ಗುಣ ಎಂಬಂತೆ ಬಿಂಬಿಸಲಾಗಿದೆ. ಹಾಗೆ ಮಾಡಿದರೆ ಮಾತ್ರ ಅವಳು ಪರಿಪೂರ್ಣ ಹೆಣ್ಣು. ಅದೇ ಅವಳ ಅಸ್ತಿತ್ವ ಎನ್ನುವ ರೀತಿ ಸುತ್ತಮುತ್ತಲಿನ ವಾತಾವರಣ ನಿರ್ಮಾಣವಾಗಿದೆ.

**ಮರ್ಯಾದಾ ಹತ್ಯೆಗಳು**

ಬಾಳ ಸಂಗಾತಿಯ ಆಯ್ಕೆಯ ವಿಷಯ ಬಂದಾಗ ಮರ್ಯಾದಾ ಹತ್ಯೆಗಳು ಹೆಚ್ಚಾಗುತ್ತಿವೆ ಎಂಬುದನ್ನು ಗಂಭೀರವಾಗಿ ಗಮನಿಸಬೇಕಿದೆ. ತಾನು ಇಷ್ಟಪಡುವ ಯುವಕನೊಂದಿಗೆ ಜೀವನ ನಡೆಸಲು ಜಾತಿ ತಾರತಮ್ಯದೊಂದಿಗೆ ಯುದ್ಧವನ್ನು ಪ್ರತಿ ಕ್ಷಣ ಮಾಡಬೇಕಾಗಿದೆ. ಜಾತಿ-ಧರ್ಮಗಳೆಂಬ

**ಪುಟ 14 ಕ್ಕೆ**

# ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ ಇನ್ನೆಷ್ಟು ದಿನ ಕಾಯಬೇಕು?

**ರಾಜಕೀಯ ವಲಯವನ್ನು ಸಾಮಾಜಿಕ ಮತ್ತು ಆರ್ಥಿಕ, ಸಾಂಸ್ಕೃತಿಕ ವಲಯಗಳಿಂದ ಪ್ರತ್ಯೇಕಿಸಲಾಗದು. ಅವೆಲ್ಲಾ ವಲಯಗಳನ್ನು ಒಳಗೊಂಡು ವಿಶಾಲಾರ್ಥದಲ್ಲಿ ರಾಜಕೀಯವನ್ನು ನಾವು ಅರ್ಥೈಸಿಕೊಳ್ಳಬೇಕಿದೆ ಮತ್ತು ನಮ್ಮ ಮುಂದಿರುವ ಸವಾಲುಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ. ಪ್ರಸ್ತುತ ರಾಜಕೀಯವನ್ನು ಚುನಾವಣೆಗಳು, ಶಾಸನ ಸಭೆಗಳು, ಸ್ಥಳೀಯ ಆಡಳಿತಕ್ಕೆ ಸೀಮಿತವಾಗಿ ನೋಡಲಾಗುತ್ತಿದೆ. ಬದುಕಿನ ಎಲ್ಲ ಮಗ್ಗುಲಗಳನ್ನು ತೀರ್ಮಾನಿಸುವ ರಾಜಕೀಯದಲ್ಲಿ ಸಮಗ್ರ ಜನತೆ ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರ ಅದನ್ನು ಪರಿಪೂರ್ಣ ಪ್ರಜಾಪ್ರಭುತ್ವ ಎಂದು ಕರೆಯಬಹುದು. ಬಹುಸಂಖ್ಯಾತರಾದ ದುಡಿಯುವ ಜನತೆ, ದುರ್ಬಲ ವರ್ಗಗಳು, ಅಂಚಿನ ಸಮುದಾಯಗಳು, ಆದಿವಾಸಿಗಳು, ಮಹಿಳೆಯರನ್ನು ನೀತಿ ನಿರ್ಧಾರಗಳಲ್ಲಿ ಒಳಗೊಳ್ಳದಿದ್ದರೆ ಅದು ಪರಿಪೂರ್ಣ ಪ್ರಜಾಪ್ರಭುತ್ವವಾಗಲು ಸಾಧ್ಯವೇ ಇಲ್ಲ.**

**ಕೆ.ಎಸ್.ಲಕ್ಷ್ಮಿ**

ನಾವು ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ನ್ಯಾಯವನ್ನು ಖಾತ್ರಿಗೊಳಿಸುವ ಸಂವಿಧಾನವನ್ನು ಹೊಂದಿದ್ದರು ಸಹ ನಾವಿನ್ನೂ ಪಾಳೇಗಾರಿ ಮೌಲ್ಯಗಳ ಪ್ರಭಾವದಿಂದ ಮುಕ್ತರಾಗಿಲ್ಲ. ಸಂವಿಧಾನವನ್ನು ವಿಶೇಷವಾಗಿ ಅಭ್ಯಸಿಸಿರುವರು, ರಾಜ್ಯಶಾಸ್ತ್ರವನ್ನು ಓದಿದವರು, ಕಾನೂನನ್ನು ಓದಿದವರು ಸಹ ಈ ಪ್ರಭಾವದಿಂದ ಮುಕ್ತರಲ್ಲ. ಇದರ ಪರಿಣಾಮಗಳನ್ನು ತೀರ್ಪುಗಳಲ್ಲಿ, ಸರ್ಕಾರದ ನೀತಿಗಳಲ್ಲಿ, ಜನಪ್ರತಿನಿಧಿಗಳ ನಡೆನುಡಿಯಲ್ಲಿ ಕಾಣುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ನಮ್ಮ ಬದುಕಿನ ಒಪ್ಪಿತ ಮೌಲ್ಯಗಳಾಗುವವರೆಗು ಪಾಳೇಗಾರಿ ಮೌಲ್ಯಗಳ ಪ್ರಭಾವ ನಮ್ಮನ್ನು ಕಾಡುತ್ತಲೇ ಇರುತ್ತದೆ, ಅದರ ಪ್ರಭಾವ ಇದ್ದೇ ಇರುತ್ತದೆ.

**ಮಹಿಳಾ ಮೀಸಲಾತಿ ಸಂವಿಧಾನ ತಿದ್ದುಪಡಿ ಕಾಯ್ದೆ**

ಪ್ರಸ್ತುತ ರಾಜಕೀಯ ವಲಯದಲ್ಲಿ ಮಹಿಳಾ ಪ್ರಾತಿನಿಧ್ಯಕ್ಕೆ ಸಂಬಂಧಿಸಿ ಹೇಳುವುದಾದರೆ ಶಾಸನ ಸಭೆಗಳಲ್ಲಿ 33% ಮಹಿಳಾ ಮೀಸಲಾತಿಗೆ ಸಂಬಂಧಿಸಿ ಸಂವಿಧಾನದ 128 ನೇ ತಿದ್ದುಪಡಿ ಮಸೂದೆ (ನಾರಿ ಶಕ್ತಿ ವಂದನಾ ಮಸೂದೆ)ಯು ಲೋಕಸಭೆಯಲ್ಲಿ ಅಂಗೀಕಾರವಾಗಿದೆ. ಇದು 2024 ರಲ್ಲಿ ಮಹಿಳೆಯರ ಮತಗಳನ್ನು ಸೆಳೆಯುವ ಹುನ್ನಾರ ಮಾತ್ರ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ.

**ಅವಿರತ ಹೋರಾಟದ ಫಲ**

27 ವರ್ಷಗಳ ಕಾಲ ಮಹಿಳಾ ಚಳುವಳಿಗಳು ಮತ್ತು ಎಡ ಪಕ್ಷಗಳು ಮಸೂದೆಯ ಅಂಗೀಕಾರಕ್ಕೆ ಹೋರಾಡಿದ್ದವು. ಈ ಮಸೂದೆಯು ಅಂಗೀಕಾರ ಪಡೆದಿದ್ದರೂ ಇದು ಜಾರಿಯಾಗುವುದು ಮುಂದಿನ ಜನಗಣತಿ ಮತ್ತು ಕ್ಷೇತ್ರ ಪುನರ್ ವಿಂಗಡನೆಯ ನಂತರ ಮಾತ್ರ ಎಂದು ಹೇಳಲಾಗಿದೆ.

84 ನೇ ತಿದ್ದುಪಡಿಯು 2001 ರಿಂದ 2026 ರವರೆಗೆ ಲೋಕಸಭಾ ಕ್ಷೇತ್ರಗಳ ಗಡಿಯನ್ನು ನಿಗಧಿ ಪಡಿಸಿದ್ದರೂ ಮತ್ತೆ ಕ್ಷೇತ್ರ ಪುನರ್ ವಿಂಗಡನೆಯವರಗೆ ಮಹಿಳಾ ಮೀಸಲಾತಿಯನ್ನು ಮಂದೂಡುವ ಅಗತ್ಯವೇ ಇರಲಿಲ್ಲ. ಮುಂದಿನ ಜನಗಣತಿ 2031 ರಲ್ಲಿ ನಡೆಯುವ ನಿರೀಕ್ಷೆ ಇದೆ, ಅದರ ಆಧಾರದಲ್ಲಿ ಕ್ಷೇತ್ರ ಪುನರ್‌ವಿಂಗಡನೆಯ ನಂತರ ಮಸೂದೆ ಜಾರಿಗೊಳ್ಳಲಿದೆ ಎಂದು ಹೇಳುತ್ತಿರುವುದು ಮಹಿಳಾ ಮೀಸಲಾತಿಯ ಭ್ರಮೆಯಲ್ಲದೇ ಬೇರೇನು ಅಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. ಹಿಂದುಳಿದ ವರ್ಗಗಳ ಮಹಿಳೆಯರು, ಅಲ್ಪ ಸಂಖ್ಯಾತ ಮಹಿಳೆಯರಿಗೆ ಕೋಟಾ ನೀಡಬೇಕೆಂಬ ಚರ್ಚೆ ನಡೆಯುತ್ತಿದೆ. ಪ್ರಸ್ತುತ ಸಂಸತ್ತು ಮತ್ತು ಅಸೆಂಬ್ಲಿಗಳಲ್ಲಿ ಇವರ ಸಂಖ್ಯೆ ಕಡಿಮೆ ಇರುವುದು ಕಳವಳಕಾರಿ ಅಂಶವಾಗಿದ್ದು, ಅವರ ಪ್ರಾತಿನಿಧ್ಯ ಹೆಚ್ಚಿಸುವ ಸಂವಿಧಾನದ ಮಾರ್ಗಗಳ ಕುರಿತು ಚಿಂತಿಸಬೇಕಿದೆ. ಈ ಹಿನ್ನಲೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ ಆಗಿದೆ ಎಂದು ನಾವು ಸುಮ್ಮನೆ ಕೂಡುವಂತಿಲ್ಲ. ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗುವವರೆಗೂ ನಾವು ಹೋರಾಟವನ್ನು ಮುನ್ನಡೆಸಬೇಕಿದೆ. ಪ್ರಸ್ತುತ 543 ಲೋಕಸಭಾ ಕ್ಷೇತ್ರಗಳಿದ್ದು ಅದರಲ್ಲಿ 84 ಎಸ್.ಸಿ. 47 ಎಸ್.ಟಿ ಕ್ಷೇತ್ರಗಳು, 412 ಸಾಮಾನ್ಯ ಕ್ಷೇತ್ರಗಳಾಗಿವೆ. ಮಹಿಳಾ ಮೀಸಲಾತಿ ಜಾರಿಯಾದಲ್ಲಿ 179 ಸ್ಥಾನಗಳಲ್ಲಿ ಮಹಿಳೆಯರಿರಬೇಕು. ಆದರೆ ಈಗಿರುವುದು 78 ಮಹಿಳಾ ಸದಸ್ಯರು. ಅಂದರೆ ಶೇಕಡಾ 14 ಮಾತ್ರ. 2019 ರಲ್ಲಿ 8,054 ಅಭ್ಯರ್ಥಿಗಳ ಪೈಕಿ 726 ಮಹಿಳಾ ಅಭ್ಯರ್ಥಿಗಳು ಅಂದರೆ ಕೇವಲ ಶೇಕಡಾ 9 ಮಹಿಳೆಯರಿಗೆ ಮಾತ್ರ ಟಿಕೆಟ್ ನೀಡಲಾಗಿದೆ. ಇದು ರಾಜಕೀಯ ಪಕ್ಷಗಳ ಬದ್ಧತೆ ಏನೆಂಬುದನ್ನು ತೋರುತ್ತದೆ.

ಇನ್ನು ದೇಶದಲ್ಲಿನ ರಾಜ್ಯಗಳಲ್ಲಿ ಒಟ್ಟು 4,123 ವಿಧಾನ ಸಭಾ ಕ್ಷೇತ್ರಗಳಿದ್ದು, ಅದರಲ್ಲಿ 2,045 ಸಾಮಾನ್ಯ ಕ್ಷೇತ್ರಗಳು, 614 ಎಸ್.ಸಿ. 51 ಎಸ್.ಟಿ, ಬುತಿಯಾ ಲಿಚಾ ಎಸ್.ಟಿ. ಗಳಿಗೆ 12, ಸಂಘಾ ಒಂದು ಕ್ಷೇತ್ರಗಳಾಗಿವೆ. (ಸಿಕ್ಕಿಂ) ಮಹಿಳಾ ಮೀಸಲಾತಿ ಜಾರಿಯಾದಲ್ಲಿ 1,250 ಮಹಿಳಾ ಶಾಸಕಿಯರು ಇರುತ್ತಾರೆ. ಈಗಿನ ಸ್ಥಿತಿ ಏನೆಂದರೆ ಯಾವುದೇ ರಾಜ್ಯದಲ್ಲಿಯೂ ಶೇ. 16 ಕ್ಕಿಂತ ಹೆಚ್ಚಿಗೆ ಮಹಿಳೆಯರ ಪ್ರಾತಿನಿಧ್ಯವಿಲ್ಲ. 17 ರಾಜ್ಯಗಳಲ್ಲಿ ಶೇ. 10 ಕ್ಕೂ ಕಡಿಮೆ ಮಹಿಳಾ ಶಾಸಕಿಯರಿದ್ದಾರೆ. ಇಡೀ ದಕ್ಷಿಣ ಭಾರತದ ರಾಜ್ಯಗಳ ಪೈಕಿ ನಮ್ಮ ರಾಜ್ಯದಲ್ಲಿ ಅತ್ಯಂತ ಕಡಿಮೆ ಪ್ರಾತಿನಿಧ್ಯ ಅಂದರೆ 10 ಮಾತ್ರ ಇದ್ದಾರೆ. ಆಂಧ್ರಪ್ರದೇಶದಲ್ಲಿ ಶೇ. 8, ಕೇರಳ ಶೇ. 7.9, ತಮಿಳುನಾಡು ಶೇ. 5.1 ಮಹಿಳೆಯರು ಇದ್ದಾರೆ. ಇಡೀ ದೇಶದಲ್ಲಿ ಕಡಿಮೆ ಶಾಸಕಿಯರಿರುವ ರಾಜ್ಯಗಳ ಪೈಕಿ ಕರ್ನಾಟಕ ಆರನೇ ಸ್ಥಾನದಲ್ಲಿದೆ.

**ಸ್ಥಳೀಯ ಆಡಳಿತದಲ್ಲಿ ಮಹಿಳಾ ಮೀಸಲಾತಿ**

ಈಗ ಗ್ರಾಮೀಣ ಮತ್ತು ಸ್ಥಳೀಯ ಆಡಳಿತಗಳ ವಿಚಾರಕ್ಕೆ ಬರೋಣ. 20 ರಾಜ್ಯಗಳ ಪಂಚಾಯತ್ ರಾಜಕೀಯದಲ್ಲಿ ಶೇ. 50ರಷ್ಟು ಮಹಿಳಾ ಮೀಸಲಾತಿ ಇದೆ. ಎಸ್.ಸಿ. ಮತ್ತು ಎಸ್.ಟಿ ಮೀಸಲು ಕ್ಷೇತ್ರಗಳಿವೆ. 2023 ರ ದಾಖಲೆಗಳ ಪ್ರಕಾರ 2,55,643 ಗ್ರಾಮ ಪಂಚಾಯಿತಿಗಳಿವೆ. 666 ಜಿಲ್ಲಾ ಪಂಚಾಯಿತಿಗಳಿವೆ. 6,687 ತಾಲೂಕು ಪಂಚಾಯಿತಿಗಳಿವೆ. ದೇಶದಲ್ಲಿ 1,874 ಮುನ್ಸಿಪಾಲಿಟಿಗಳಿದ್ದು ಇಲ್ಲಿಯೂ ಮಹಿಳೆಯರಿಗೆ ಶೇ. 50 ಮೀಸಲು ಸ್ಥಾನಗಳಿವೆ. ಸ್ಥಳೀಯ ಆಡಳಿತದಲ್ಲಿ ಮಹಿಳೆಯರ ಭಾಗವಹಿಸುವಿಕೆಯಲ್ಲಿ ಭಾರತವು ಅಗ್ರಗಣ್ಯ ದೇಶಗಳಲ್ಲಿ ಒಂದಾಗಿದೆ. 1.45 ಮಿಲಿಯನ್ ಮಹಿಳೆಯರು ನಿರ್ಧಾರಗಳನ್ನು ಕೈಗೊಳ್ಳುವ ಸ್ಥಾನದಲ್ಲಿದ್ದಾರೆ. ಅವರ ಕೊಡುಗೆ ಮೌಲ್ಯಯುತವಾಗಿದ್ದರೂ ಸಹ ಅವರ ಕೆಲಸವನ್ನು ನಗಣ್ಯ ಮಾಡಲಾಗುತ್ತಿದೆ. ಪುರುಷ ಪ್ರಧಾನ ಪಾಳೇಗಾರಿ ಹಿಡಿತವಿರುವಾಗಲೂ ಮಹಿಳೆಯರು ಸ್ವತಂತ್ರವಾಗಿ ಪಾತ್ರ ನಿರ್ವಹಿಸುತ್ತಿರುವುದನ್ನು ಬಹುತೇಕ ಕಡೆ ನೋಡಬಹುದು. ಕೆಲ ಸಮೀಕ್ಷೆಗಳ ಪ್ರಕಾರ ಮಹಿಳಾ ಪ್ರತಿನಿಧಿಗಳು ಜನತೆಯ ಸಮಸ್ಯೆಗಳಿಗೆ ಪುರುಷರಿಗಿಂತಲೂ ಹೆಚ್ಚು ಸಂವೇದನಾ ಶೀಲರಾಗಿರುವುದನ್ನು ಗುರುತಿಸಿದೆ. ಆದರೆ ಪೂರ್ವಾಗ್ರಹದ ಈ ಸಮಾಜ ಮೂರು ನಾಲ್ಕು ಸಲ ಶಾಸಕರಾಗಿ ಗೆದ್ದು ಜವಾಬ್ದಾರಿಯನ್ನು ನಿರ್ವಹಿಸದ ಶಾಸಕನಿಗಿಂತ ಮೊದಲ ಸಲ ಗೆದ್ದ ಮಹಿಳೆಯನ್ನು ತೀಕ್ಷ್ಣವಾಗಿ ವಿಮರ್ಶಿಸುತ್ತದೆ ಮತ್ತು ಅಪರೂಪದ ಕೆಲ ಘಟನೆಗಳನ್ನೇ ದೊಡ್ಡದು ಮಾಡಿ ಮಹಿಳಾ ಪ್ರತಿನಿಧಿಗಳನ್ನು ವಿಮರ್ಶಿಸುವುದು ಸಹ ಮಹಿಳಾ ವಿರೋಧಿ ಮಾತುಗಳೇ ಆಗಿವೆ. ರಾಜಕೀಯವಾಗಿ ಮಹಿಳೆಯರನ್ನು ತರಬೇತುಗೊಳಿಸದಿರುವುದು, ಸ್ವತಂತ್ರ ಕಾರ್ಯಾಚರಣೆ ಕುರಿತು ಸಂವೇದನಾಶೀಲ ಗೊಳಿಸದಿರುವುದು, ಪಾಳೇಗಾರಿ ಹಿಡಿತದಿಂದ ಮುಕ್ತಗೊಳಿಸದಿರುವುದು ಇಡೀ ವ್ಯವಸ್ಥೆಯ ವೈಫಲ್ಯವೆಂಬುದನ್ನು ನಾವು ಗುರುತಿಸಿಕೊಳ್ಳಬೇಕು. ಗೆದ್ದ ಮಹಿಳೆಯರೆಲ್ಲರೂ ಮಹಿಳೆಯರ ಪರ ಕೆಲಸ ಮಾಡುತ್ತರೆ, ಗೆದ್ದ ದಲಿತ ಪ್ರತಿನಿಧಿಗಳೆಲ್ಲರೂ ದಲಿತರ ಪರ ಕೆಲಸ ಮಾಡುತ್ತಾರೆಂಬ ಭ್ರಮೆಗಳು ನಮಗೆ ಬೇಕಿಲ್ಲ ಅಥವಾ ಮಾಡಲಾರರು ಎಂಬ ಪೂರ್ವಾಗ್ರಹಗಳೂ ಬೇಕಿಲ್ಲ. ಅವರ ಕೆಲಸ ಆಯಾ ರಾಜಕೀಯ ಪಕ್ಷಗಳ ವರ್ಗ ಬದ್ಧತೆಯನ್ನು ಆಧರಿಸಿರುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆದಾಗ್ಯೂ ಅವರೆಲ್ಲರೂ ಈ ದೇಶದ ಸಂವಿಧಾನಕ್ಕೆ ಬದ್ಧರಾಗಿ ಕರ್ತವ್ಯ ನಿರ್ವಹಿಸುವಂತೆ ಮಾಡಬೇಕು. ಎಡ ಪಕ್ಷಗಳು ಮಾತ್ರ ಸಂವಿಧಾನಕ್ಕೆ ಪೂರಕವಾದ ನಡೆಯನ್ನು ಹೊಂದಿವೆ ಎಂಬುದನ್ನು ಹಲವು ನಿದರ್ಶನಗಳಲ್ಲಿ ಕಾಣಬಹುದು. ಸ್ಥಳೀಯ ಸರ್ಕಾರಗಳು ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವುದು ಮಾತ್ರವಲ್ಲ, ಇಡೀ ರಾಜ್ಯದ ಬಜೆಟ್ ರೂಪುಗೊಳ್ಳುವುದೇ ಸ್ಥಳೀಯ ಅಂಗಗಳಿಂದ. ಜನತೆಯನ್ನು ಮಹಿಳೆಯರ ಸಹಭಾಗಿತ್ವದೊಂದಿಗೆ ಸಾಕ್ಷರತೆ, ಮೌಢ್ಯತೆಯ ವಿರುದ್ಧ ವಿಜ್ಞಾನದ ಕಾರ್ಯಕ್ರಮಗಳು, ಭೂಸುಧಾರಣೆಯ ಕಾರ್ಯಕ್ರಮಗಳನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಲಿಂಗಸಮಾನತೆಯ ಕಾರ್ಯಕ್ರಮಗಳನ್ನು ಈ ಅಂಗಗಳ ಮೂಲಕವೇ ತೆಗೆದುಕೊಂಡು ಹೋಗುತ್ತಿರುವುದು ದೇಶಕ್ಕೇ ಮಾದರಿಯ ಕ್ರಮವಾಗಿದೆ.

**ಮಹಿಳಾ ಪ್ರಾತಿನಿಧ್ಯ ವಂಚಕ ಷರತ್ತುಗಳು**

ಕೆಲ ರಾಜ್ಯಗಳ ಪಂಚಾಯತ್ ರಾಜ್ ಕಾನೂನಿಗೆ ತಿದ್ದುಪಡಿಗಳನ್ನು ಮಾಡುವ ಮೂಲಕ ಮಹಿಳೆಯರನ್ನು ಮತ್ತು ದಲಿತರನ್ನು ಸ್ಪರ್ಧೆಗೇ ಅನರ್ಹರನ್ನಾಗಿ ದೂರ ಉಳಿಯುವಂತೆ ಮಾಡಲಾಗುತ್ತಿದೆ. ಬಿಜೆಪಿ ಆಳ್ವಿಕೆಯ ಸಮಯದಲ್ಲಿ ಹರಿಯಾಣದಲ್ಲಿ ಶೈಕ್ಷಣಿಕ ಅರ್ಹತೆಯನ್ನು ಕಡ್ಡಾಯ ಮಾಡಿದರು, ಸ್ಪರ್ಧಿಸುವವರ ಬೆಳೆಸಾಲ ಕ್ಲಿಯರೆನ್ಸ್, ವಿದ್ಯುತ್ ಬಿಲ್ ಕ್ಲಿಯರೆನ್ಸ್, ಅಭ್ಯರ್ಥಿಗಳು ವಾಸಸ್ಥಳದಲ್ಲಿ ಶೌಚಾಲಯವನ್ನು ಹೊಂದಿರಬೇಕೆಂಬ ನಿಯಮಗಳನ್ನು ರೂಪಿಸಲಾಗಿದೆ. ಶೈಕ್ಷಣಿಕ ಅರ್ಹತೆಯ ಭಾಗವಾಗಿ ಸಾಮಾನ್ಯ ಪುರುಷರು 10 ನೇ ತರಗತಿ ಓದಿರಬೇಕು, ಮಹಿಳೆಯರು 8 ನೇ ತರಗತಿ ಓದಿರಬೇಕು, ಎಸ್.ಸಿ. ಎಸ್.ಟಿ. ಮಹಿಳೆಯರು 5 ನೇ ತರಗತಿ ಓದಿರಬೇಕು, 10 ವರ್ಷಗಳ ಜೈಲು ಶಿಕ್ಷೆಯನ್ನು ಹೊಂದಿರುವ ಅಪರಾಧಗಳ ಚಾರ್ಜ್‌ನ್ನು ಹಾಕಿರಬಾರದು ಎಂದು ಹೇಳಿದೆ. ರಾಜಸ್ಥಾನ ಸರ್ಕಾರ ಇಬ್ಬರಿಗಿಂತ ಹೆಚ್ಚು ಮಕ್ಕಳನ್ನು ಹೊಂದಿರುವವರನ್ನು ಚುನಾವಣೆಯಿಂದ ಅನರ್ಹ ಗೊಳಿಸುವ ತಿದ್ದುಪಡಿಯನ್ನು ಹೊಂದಿದೆ. ರಾಜಸ್ಥಾನ ಛತ್ತೀಸ್‌ಘಡ, ಮಧ್ಯಪ್ರದೇಶ, ಆಂಧ್ರ ಪ್ರದೇಶ, ಒಡಿಸ್ಸಾ ರಾಜ್ಯಗಳು ಅಭ್ಯರ್ಥಿ ಕ್ಷಯರೋಗಿಯಾಗಿರಬಾರದು ಎಂಬ ಮಾನದಂಡವನ್ನು ರೂಪಿಸಿವೆ. ಶೈಕ್ಷಣಿಕ ಅರ್ಹತೆಯಿಂದಾಗಿ ಹರಿಯಾಣದಲ್ಲಿ ಶೇ. 83 ಎಸ್.ಸಿ. ಮಹಿಳೆಯರು, ಶೇ. 72 ಸಾಮಾನ್ಯ ಮಹಿಳೆಯರು, ಶೇ. 71 ಎಸ್.ಸಿ. ಪುರುಷರು ಶೇ. 56 ಸಾಮಾನ್ಯ ವರ್ಗದ ಪುರುಷರು ಅನರ್ಹರಾದರು (2011 ಜನಗಣತಿ). ಹರಿಯಾಣದ ರೊಹತಲ್ ಬ್ಲಾಕ್ ನ 11 ವಾರ್ಡ್‌ಗಳಲ್ಲಿ ಒಬ್ಬರೇ ಒಬ್ಬ ಮಹಿಳೆ ಸ್ಪರ್ಧಿಸಿರಲಿಲ್ಲ. ಏಕೆಂದರೆ ಮಹಿಳೆಯರು ಒಂದಲ್ಲಾ ಒಂದು ಸಾಲ ಪಡೆದಿದ್ದರು. ಒಂದು ಗ್ರಾಮ ಪಂಚಾಯಿತಿಗೆ ಅಧ್ಯಕ್ಷ ಸ್ಥಾನಕ್ಕೆ ದಲಿತ ಮಹಿಳೆ ಇರಲೇ ಇಲ್ಲ. ಈ ಕುರಿತು ವಿಚಾರಿಸಿದಾಗ ವಿದ್ಯಾವಂತ ಮಹಿಳೆಯನ್ನು ಮದುವೆಯಾಗಿ ಕರೆತಂದು ಅಧ್ಯಕ್ಷೆ ಮಾಡಿ ಎಂದದ್ದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಣಕವಾಗಿದೆ. ಇದರಿಂದಾಗಿ ಹಲವೆಡೆ ಯಾರೂ ಇಲ್ಲದೆ ಸ್ಥಾನಗಳು ಉಳಿದಿವೆ. ಈ ಹಿನ್ನಲೆಯಲ್ಲಿ ಇಂಥಹ ಯಾವುದೇ ತಿದ್ದುಪಡಿಗಳನ್ನು ನಾವು ದೇಶವ್ಯಾಪಿಯಾಗಿ ವಿರೋಧಿಸಬೇಕು.

**ಹಕ್ಕುಗಳೇ ಇಲ್ಲದ ದಿನದಿಂದ ರಾಜಕೀಯ ಪ್ರಾತಿನಿಧ್ಯದವರೆಗೆ**

ಆಸ್ತಿ, ವಿದ್ಯೆ, ತೆರಿಗೆ ಪಾವತಿಯ

ಪುಟ 15 ಕ್ಕೆ






**ರೈತರು ಬೆಳೆದ ಬೆಳೆಗಳಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ಉತ್ಪಾದನಾ ವೆಚ್ಚದ ಜೊತೆಗೆ ಶೇ. 50 ರಷ್ಟು ಲಾಭಾಂಶವನ್ನು ಸೇರಿಸಿ C2+50% ಆಧಾರದಲ್ಲಿ ಬೆಲೆಯನ್ನು ನಿಗದಿಗೊಳಿಸಬೇಕು ಎಂಬ ರೈತರ ಬೇಡಿಕೆಗೆ ಕಿವಿಗೊಡದ ಮೋದಿ ಸರ್ಕಾರ, ರೈತರಿಂದ ಕಡಿಮೆ ಬೆಲೆಗೆ (ಖಾರಿಫ್ ಮಾರ್ಕೆಟಿಂಗ್ ಸೀಸನ್ (KMS) 22–23 ರಲ್ಲಿ ಗ್ರೇಡ್ 'ಎ'ಭತ್ತಕ್ಕೆ ಕ್ವಿಂಟಲ್ ಗೆ 2060 ರೂ. ನಂತೆ) ಭತ್ತ ಖರೀದಿಸಿ, 'ಭಾರತ್ ರೈಸ್' ಹೆಸರಿನಲ್ಲಿ ಕೆಜಿ ಅಕ್ಕಿಗೆ 29 ರೂ.ಗೆ ಮಾರಾಟ ಮಾಡುತ್ತಾ, ಇದು ಜನರ ಮೇಲಿರುವ ಮೋದಿಯವರ ಖಾಳಜಿ ಎಂದು ಹೇಳತೊಡಗಿದ್ದಾರೆ. (ಈ 'ಎ' ಗ್ರೇಡ್ ಅಕ್ಕಿ ಪಡಿತರದಲ್ಲಿ ವಿತರಣೆ ಆಗುವುದಿಲ್ಲ ಎಂಬುದು ಬೇರೆ ವಿಷಯ) ಇದರಲ್ಲಿ ರೈತರ ಬೆವರ ಹನಿಯಿದೆ, ರೈತರ ಶೋಷಣೆ ಇದೆ. ಭಾರತ್ ರೈಸ್ ನ ಕೊಡುಗೆಯ ಶ್ರೇಯಸ್ಸು ಸಲ್ಲಬೇಕಿರುವುದು ರೈತರಿಗೆ ವಿನಃ ಮೋದಿಯವರಿಗಲ್ಲ.**

**ಮೋದಿ–10 ವರ್ಷಗಳು–ಭಾಗ–41**

**ಒಂದೆಡೆ, ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪಡಿತರ ಧಾನ್ಯಗಳ ಬದಲಿಗೆ ನೇರ ನಗದು ಯೋಜನೆ ಮೂಲಕ ಫಲಾನುಭವಿಗಳ ಖಾತೆಗೆ ಹಣ ಹಾಕುತ್ತಾರೆ. ಮತ್ತೊಂದೆಡೆ, ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಜನರನ್ನು ರಕ್ಷಿಸುವ ಉದ್ದೇಶದಿಂದ ಕಡಿಮೆ ದರದಲ್ಲಿ ಭಾರತ್ ರೈಸ್ ಹೆಸರಿನಲ್ಲಿ ಕೆಜಿ ಅಕ್ಕಿಗೆ 29 ರೂ. ನಂತೆ ಮಾರಾಟ ಮಾಡಲಾಗುತ್ತಿದೆ ಎಂದು ಮೋದಿ ಸರ್ಕಾರ ಹೇಳುತ್ತಿದೆ. ಏನಿದು ನಾಟಕ? ಒಂದು ವೇಳೆ ಧಾನ್ಯಗಳ ಬೆಲೆ ಏರಿಕೆಯಿಂದ ಜನರನ್ನು ರಕ್ಷಣೆ ಮಾಡಬೇಕು ಎಂಬುದೇ ಅವರ ನಿಜವಾದ ಖಾಳಜಿಯಾಗಿದ್ದರೆ, 'ಭಾರತ್ ಅಕ್ಕಿ' ಹೆಸರಿನಲ್ಲಿ ಒಕ್ಕೂಟ ಸರ್ಕಾರವೇ ನೇರವಾಗಿ ಜನರ ಬಳಿಗೆ ಕೊಂಡ್ಯೊಯ್ದು ಮಾರಾಟ ಮಾಡುವ ಬದಲಾಗಿ, ರಾಜ್ಯ ಸರ್ಕಾರಗಳ ಮೂಲಕ ಧಾನ್ಯಗಳ ವಿತರಣೆ ಮಾಡಲು ಅವಕಾಶ ಕೊಡಬೇಕಾಗಿತ್ತು. ಇದನ್ನು ಬಿಜೆಪಿ ತನ್ನ ಚುನಾವಣಾ ಲಾಭಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿದೆ ಎಂಬ ಆರೋಪದ ಹೊರತಾಗಿಯೂ, ಇದರಲ್ಲಿ ಪಡಿತರ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಗಳಿಗೆ ಇರುವ ಅಧಿಕಾರ ಕಸಿದುಕೊಳ್ಳುವುದೂ ಸೇರಿದಂತೆ ಹಲವು ಮುಚ್ಚಿಟ್ಟ ಅಜೆಂಡಾಗಳಿವೆ.**

# ಹಲವು ಮುಚ್ಚಿಟ್ಟ ಅಜೆಂಡಾಗಳನ್ನು ಒಳಗೊಂಡಿರುವ 'ಭಾರತ್ ರೈಸ್'

ಸಿ. ಸಿದ್ದಯ್ಯ

ಪಡಿತರ ಧಾನ್ಯಗಳನ್ನು ಪಡಿತರ ಅಂಗಡಿಗಳ ಮೂಲಕವೇ ವಿತರಣೆ ಅಥವಾ ರಿಯಾಯಿತಿ ದರದಲ್ಲಿ ಮಾರಾಟ ಮಾಡಬೇಕು. ಆದರೆ, ಮೋದಿ ಸರ್ಕಾರದ 'ಭಾರತ್ ರೈಸ್' ಹೆಸರಿನ ಅಕ್ಕಿ ಕೇಂದ್ರೀಯ ಭಂಡಾರ್, ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (NAFED) ಮತ್ತು ಭಾರತೀಯ ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟ (NCCF) ದ ಭೌತಿಕ ಮತ್ತು ಮೊಬೈಲ್ ಮಳಿಗೆಗಳಲ್ಲಿ ಮಾತ್ರವಲ್ಲದೆ, ಅಂಬಾನಿ ಒಡೆತನದ ರಿಲಯನ್ಸ್ ಕಂಪನಿಯ ಜಿಯೋ ಮಾರ್ಟ್ ನಲ್ಲೂ, ಆನ್ ಲೈನ್ ನಲ್ಲೂ ಮಾರಾಟವಾಗುತ್ತಿದೆ. ಇದು ಬಡವರಿಗಾಗಿ ತಂದ ಯೋಜನೆಯಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. 'ಭಾರತ್ ರೈಸ್' ಯೋಜನೆಯ ಹಿಂದೆ ಮೋದಿ ಸರ್ಕಾರದ ಹಲವು ರಹಸ್ಯ ಅಜೆಂಡಾಗಳಿವೆ. 1) ತಕ್ಷಣ ಬರುವ ಚುನಾವಣೆಯಲ್ಲಿ ಬಿಜೆಪಿ ಚುನಾವಣಾ ಲಾಭ ಪಡೆಯುವುದು, 2) ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳುವುದು, 3) ಕೇಂದ್ರೀಕೃತ ವ್ಯವಸ್ಥೆ ತರುವುದು, 4) ರೈತರಿಂದ ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸುವ ವ್ಯವಸ್ಥೆಯನ್ನು ಇಲ್ಲವಾಗಿಸುವುದು, 5) ಸರ್ಕಾರಿ ಗೋದಾಮುಗಳನ್ನು ಖಾಸಗಿಯವರಿಗೆ ಹಸ್ತಾಂತರಿಸುವುದು, 6) ಅಂತಿಮವಾಗಿ ಪಡಿತರ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶ ಮಾಡಿ, ಸರ್ಕಾರ ತನ್ನ ಸಾಮಾಜಿಕ ಜವಾಬ್ಧಾರಿಯಿಂದ ಹೊರಬಂದು ಎಲ್ಲವನ್ನೂ ಮುಕ್ತ ಮಾರುಕಟ್ಟೆಗೆ ತೆರೆದಿಡುವುದು, ಈ ಮೂಲಕ, ವಿಶ್ವ ವಾಣಿಜ್ಯ ಸಂಸ್ಥೆ (WTO) ಜೊತೆಗಿನ ಒಪ್ಪಂದದಲ್ಲಿನ ಷರತ್ತುಗಳನ್ನು ಪೂರೈಸುವುದು ಇದರ ಉದ್ದೇಶವಾಗಿದೆ.

**ರಾಜ್ಯಗಳ ಹಕ್ಕುಗಳನ್ನು ಕಸಿದುಕೊಳ್ಳುತ್ತದೆ**

ಒಕ್ಕೂಟ ವ್ಯವಸ್ಥೆ ಎಂಬುದು ಭಾರತೀಯ ಸಂವಿಧಾನದ ಪ್ರಮುಖ ಸ್ತಂಭಗಳಲ್ಲಿ ಒಂದಾಗಿದೆ. ಸಂವಿಧಾನದ ಪೀಠಿಕೆಯು 'ಇಂಡಿಯಾ ಎಂದರೆ ಭಾರತ–ರಾಜ್ಯಗಳ ಒಕ್ಕೂಟ' ಎಂದು ಹೇಳುತ್ತದೆ. ಕೇಂದ್ರವು ರಾಜ್ಯಗಳಿಂದ ರಚನೆಯಾಗಿರುವುದರಿಂದ ರಾಜ್ಯಗಳನ್ನು ಬಲಪಡಿಸಿದರೆ ಮಾತ್ರ ಬಲಿಷ್ಠ ಭಾರತ ದೇಶ ಸಾಧ್ಯ. ಆದರೆ ಬಿಜೆಪಿ ಸರ್ಕಾರವು ರಾಜ್ಯಗಳ ಎಲ್ಲಾ ಸಂಪನ್ಮೂಲಗಳು ಮತ್ತು ಅಧಿಕಾರಗಳನ್ನು ಕೇಂದ್ರ ಸರ್ಕಾರದಲ್ಲಿ ಕೇಂದ್ರೀಕರಿಸುವುದು ಅಸಾಂವಿಧಾನಿಕವಾಗಿದೆ. 'ಒಂದು ದೇಶ–ಒಂದು ಕಾನೂನು, ಒಂದು ದೇಶ–ಒಂದು ಭಾಷೆ, ಒಂದು ದೇಶ–ಒಂದು ಚುನಾವಣೆ...' ಎಂದು ಕೇಂದ್ರೀಕರಿಸಲು ಪ್ರಯತ್ನಿಸುತ್ತಿದೆ. ಇದರ ಮತ್ತೊಂದು ಭಾಗ 'ಒನ್ ನೇಷನ್ ಒನ್ ರೇಷನ್' ವ್ಯವಸ್ಥೆ.

ದೇಶದ ಯಾವುದೇ ರಾಜ್ಯದಲ್ಲಿದ್ದರೂ ಪಡಿತರ ಪಡೆಯಬಹುದು ಎನ್ನುವ 'ಒನ್ ನೇಷನ್ ಒನ್ ರೇಷನ್' (ಒಂದು ದೇಶ ಒಂದು ಪಡಿತರ) ಯೋಜನೆ ಜಾರಿಗೆ ತರುವ ಮೂಲಕ ಒಕ್ಕೂಟ ಸರ್ಕಾರ ರಾಜ್ಯಗಳ ಅಧಿಕಾರಗಳನ್ನು ಕಸಿದುಕೊಳ್ಳಲಿದೆ. ಇದು ಕೇಂದ್ರೀಕೃತ ವ್ಯವಸ್ಥೆಯನ್ನು ಜಾರಿಗೆ ತರುವ ಒಂದು ಭಾಗವಾಗಿದೆ. ಭಾರತ್ ಅಕ್ಕಿ ಹೆಸರಿನಲ್ಲಿ ಒಕ್ಕೂಟ ಸರ್ಕಾರವೇ ನೇರವಾಗಿ ಜನರ ಬಳಿಗೆ ಕೊಂಡ್ಯೊಯ್ದು ಮಾರಾಟ ಮಾಡುವ ಮೂಲಕ ಪಡಿತರ ವಿತರಣಾ ವ್ಯವಸ್ಥೆಯ ಭಾಗವಾಗಿರುವ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ಕಸಿದುಕೊಂಡಿದೆ.

**ಜಂಟಿ ಜವಾಬ್ದಾರಿಯ ಪಡಿತರ ವಿತರಣಾ ವ್ಯವಸ್ಥೆ**

ಪಡಿತರ ವಿತರಣಾ ವ್ಯವಸ್ಥೆ (PDS) ಕೇಂದ್ರ ಮತ್ತು ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳ ಜಂಟಿ ಜವಾಬ್ದಾರಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಒಕ್ಕೂಟ ಸರ್ಕಾರವು ಭಾರತೀಯ ಆಹಾರ ನಿಗಮದ ಮೂಲಕ (FCI) ರಾಜ್ಯ ಸರ್ಕಾರಗಳಿಗೆ ಆಹಾರ ಧಾನ್ಯಗಳ ಖರೀದಿ, ಸಂಗ್ರಹಣೆ, ಸಾಗಣೆ ಮತ್ತು ಬೃಹತ್ ಹಂಚಿಕೆಯ ಜವಾಬ್ದಾರಿಯನ್ನು ವಹಿಸಿದೆ. ರಾಜ್ಯದೊಳಗೆ ಹಂಚಿಕೆ, ಅರ್ಹ ಕುಟುಂಬಗಳ ಗುರುತಿಸುವಿಕೆ, ಪಡಿತರ ಚೀಟಿಗಳ ವಿತರಣೆ ಮತ್ತು ನ್ಯಾಯಬೆಲೆ ಅಂಗಡಿಗಳ (FPSs) ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಇತ್ಯಾದಿ ಸೇರಿದಂತೆ ಕಾರ್ಯಾಚರಣೆಯ ಜವಾಬ್ದಾರಿಯು ರಾಜ್ಯ ಸರ್ಕಾರಗಳ ಮೇಲಿದೆ. PDS ಅಡಿಯಲ್ಲಿ, ಪ್ರಸ್ತುತ ಸರಕುಗಳಾದ ಗೋಧಿ, ಅಕ್ಕಿ, ಸಕ್ಕರೆ ವಿತರಣೆಗಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಕೆಲವು ರಾಜ್ಯಗಳು/ಯುಟಿಗಳು ದ್ವಿದಳ ಧಾನ್ಯಗಳು, ಖಾದ್ಯ ತೈಲಗಳು, ಅಯೋಡಿಕರಿಸಿದ ಉಪ್ಪು, ಮಸಾಲೆಗಳು ಇತ್ಯಾದಿಗಳಂತಹ ಪಡಿತರ ಅಂಗಡಿಗಳ ಮೂಲಕ ಸಾಮೂಹಿಕ ಬಳಕೆಯ ಹೆಚ್ಚುವರಿ ವಸ್ತುಗಳನ್ನು ವಿತರಿಸುತ್ತವೆ.

**ಆಹಾರ ಧಾನ್ಯಗಳ ಬೆಲೆಗಳ ಏರಿಕೆಗೆ ಕಾರಣವಾಗಿದೆ**

ಪಡಿತರ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಬಡವರ ಹಸಿವನ್ನು ನೀಗಿಸುತ್ತದೆ, ಜನರಲ್ಲಿನ ಅಪೌಷ್ಠಿಕತೆ ಕಡಿಮೆಯಾಗಲು ಸಹಾಯವಾಗುತ್ತದೆ, ಹಸಿವಿನಿಂದ ನರಳುವವರ/ಸಾಯುವವರ ಸಂಖ್ಯೆ ಕಡಿಮೆಯಾಗುತ್ತದೆ ಎಂಬುದಂತೂ ಸತ್ಯ. ಇಷ್ಟು ಮಾತ್ರವೇ ಅಲ್ಲ, ಇಂತಹ ವ್ಯವಸ್ಥೆ ಭಾರತೀಯರೆಲ್ಲರ ಕುಟುಂಬದ ವೆಚ್ಚಗಳನ್ನು ಕಡಿಮೆ ಮಾಡುತ್ತದೆ. ಮುಕ್ತ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆಗಳ ಏರಿಕೆಯನ್ನು ತಡೆಯಲು ಪಡಿತರ ವ್ಯವಸ್ಥೆ ಗಣನೀಯವಾಗಿ ಕೊಡುಗೆ ನೀಡಿದೆ. ಹೆಚ್ಚೆಚ್ಚು ಆಹಾರ ಧಾನ್ಯಗಳು ಪಡಿತರದ ಮೂಲಕ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಸಿಗುವಂತಾದರೆ, ಅಷ್ಟೇ ಕಡಿಮೆ ಪ್ರಮಾಣದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಧಾನ್ಯಗಳನ್ನು ಖರೀದಿಸುತ್ತಾರೆ. ಈ ಕಾರಣದಿಂದಲೇ ಎಪಿಎಲ್, ಬಿಪಿಎಲ್, ಅಂತ್ಯೋಧಯ ಎಂಬ ಬೇಧವಿಲ್ಲದೆ, ಪಡಿತರ ಧಾನ್ಯಗಳನ್ನು ಬಯಸಿ ಬರುವ ಎಲ್ಲರಿಗೂ ಪಡಿತರ ನೀಡಬೇಕು ಎಂಬುದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ (ಸಿಪಿಎಂ) ಮತ್ತು ಎಡ ಸಂಘಟನೆಗಳ ಬೇಡಿಕೆ.

ಪಡಿತರ ಧಾನ್ಯಗಳ ವಿತರಣೆಯ ಪ್ರಮಾಣ ಕಡಿಮೆಯಾದರೆ, ಜನರು ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚು ದರ ಕೊಟ್ಟು ಖರೀದಿಸಬೇಕಾದ ಅನಿವಾರ್ಯತೆ ಬರುತ್ತದೆ. ಇದರ ಪರಿಣಾಮ ಮುಕ್ತ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗುತ್ತದೆ. ಇಂತಹ ಸಂದರ್ಭವನ್ನು ದೊಡ್ಡ ವ್ಯಾಪಾರಿ ಸಂಸ್ಥೆಗಳು, ಖಾಸಗೀ ಗೋದಾಮು ಹೊಂದಿರುವವರು ಬೆಲೆ ಹೆಚ್ಚಿಸುವ ಮೂಲಕ ಲಾಭ ಮಾಡಿಕೊಳ್ಳಲು ಮುಂದಾಗುತ್ತಾರೆ. ಪಡಿತರ ವಿತರಣೆಯಲ್ಲಿ ಧಾನ್ಯಗಳ ಪ್ರಮಾಣ ಕಡಿತ ಮತ್ತು ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೆಲವು ರಾಜ್ಯಗಳಲ್ಲಿ ಧಾನ್ಯಗಳ ವಿತರಣೆ ಬದಲು ನೇರ ನಗದು ನೀಡುತ್ತಿರುವುದು ಇಂದು ಆಹಾರ ಧಾನ್ಯಗಳ ಬೆಲೆ ಏರಿಕೆಗೆ ಒಂದು ಪ್ರಮುಖ ಕಾರಣ.




**ಧಾನ್ಯಗಳ ಬದಲು ನೇರ ನಗದು!**

ಪಡಿತರ ಕುಟುಂಬಗಳಿಗೆ ಧಾನ್ಯಗಳ ವಿತರಣೆಯ ಬದಲು, ಅದಕ್ಕೆ ಸರ್ಕಾರ ವೆಚ್ಚ ಮಾಡುವ ಹಣವನ್ನು ನೇರ ನಗದು ಯೋಜನೆ(DBT) ಯ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಗೆ ತುಂಬಲು ಸರ್ಕಾರ ಮುಂದಾಗಿದೆ ಎಂದರೆ ಇಲ್ಲಿನ ಬಹಳಷ್ಟು ಜನರು ನಂಬುವುದಿಲ್ಲ. ಆದರೆ, ಇದು ಸತ್ಯ. ಆಹಾರ ಸಬ್ಸಿಡಿ ಯೋಜನೆಯ ನಗದು ವರ್ಗಾವಣೆಯ ಯೋಜನೆಯನ್ನು 21.08.2015 ರಂದು ಜಾರಿಗೆ ತರಲಾಗಿದೆ. ಈ ನಿಯಮಗಳ ಅಡಿಯಲ್ಲಿ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶ ಅಥವಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದೊಳಗೆ ಯಾವುದೇ ನಿರ್ದಿಷ್ಟ ಪ್ರದೇಶ ಎಂದು ವ್ಯಾಖ್ಯಾನಿಸಲಾಗಿದೆ. ಈ ಯೋಜನೆ ಅನುಷ್ಠಾನಕ್ಕೆ ರಾಜ್ಯ ಸರ್ಕಾರದ ಲಿಖಿತ ಒಪ್ಪಿಗೆ ಇದೆ. ಹೀಗಾಗಿ, ಮೊದಲಿಗೆ ಈ ಯೋಜನೆಯನ್ನು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈಗಾಗಲೇ ಜಾರಿಗೆ ಬಂದಿದೆ.

2022ರ ಮಾರ್ಚ್‌ನಲ್ಲಿ, ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ರಾಜ್ಯ ಸಚಿವೆ, ಶ್ರೀಮತಿ ಸಾಧ್ವಿ ನಿರಂಜನ್ ಜ್ಯೋತಿ ಅವರು ಲೋಕಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ, ಆಹಾರಧಾನ್ಯಗಳನ್ನು ಒದಗಿಸುವ ಬದಲು ಆಹಾರ ಸಬ್ಸಿಡಿಯನ್ನು ನೇರವಾಗಿ ಸಾರ್ವಜನಿಕ ವಿತರಣಾ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಗದು ವರ್ಗಾವಣೆ ಮಾಡುವ ಯೋಜನೆ ಬಗ್ಗೆ ತಿಳಿಸಿದರು. ವ್ಯವಸ್ಥೆಯನ್ನು ಈಗಾಗಲೇ ಮೂರು ಕೇಂದ್ರಾಡಳಿತ ಪ್ರದೇಶಗಳಾದ ಚಂಡೀಗಢ ಮತ್ತು ಪುದುಚೇರಿಯಲ್ಲಿ ಸೆಪ್ಟೆಂಬರ್ 2015 ರಿಂದ ಮತ್ತು ದಾದ್ರಾ ಮತ್ತು ನಗರ ಹವೇಲಿಯ ನಗರ ಪ್ರದೇಶಗಳಲ್ಲಿ ಮಾರ್ಚ್ 2016 ರಿಂದ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಈ ಕೇಂದ್ರಾಡಳಿತ ಪ್ರದೇಶಗಳ ಫಲಾನುಭವಿಗಳು ನಗದು ವರ್ಗಾವಣೆಯನ್ನು ಸ್ವೀಕರಿಸುತ್ತಿದ್ದಾರೆ. ಅವರು ಆಹಾರ ಧಾನ್ಯಗಳ ಬದಲಿಗೆ ಮುಕ್ತ ಮಾರುಕಟ್ಟೆಯಿಂದ ತಾವು ಬಳಸುವ ತಮ್ಮ ಆಯ್ಕೆಯ ಆಹಾರ ಧಾನ್ಯಗಳನ್ನು ಖರೀದಿಸಲು ಅವಕಾಶವಾಗಿದೆ ಎಂದರು. (30 MAR 2022- PIB–ಪ್ರೆಸ್ ಇನ್ಫರ್ಮೇಶನ್ ಬ್ಯೂರೊ).

ನೇರ ನಗದು ವರ್ಗಾವಣೆ (DBT) ಆಹಾರ ಧಾನ್ಯಗಳ ಬೃಹತ್ ಭೌತಿಕ

**ಪುಟ 15 ಕ್ಕೆ**

# ಅಪಾಯದ ಅಂಚಿನಲ್ಲಿ ಪ್ರಜಾಪ್ರಭುತ್ವ!

**ಲೋಕಸಭಾ ಚುನಾವಣೆಯತ್ತ: 1**

ಮೋದಿ ಸರಕಾರದ ಆಡಳಿತದ ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಅಭೂತಪೂರ್ವ ದಾಳಿ ನಡೆದಿದೆ. ಈ ಪ್ರವೃತ್ತಿ ಹೀಗೆ ಮುಂದುವರಿದರೆ, ಭಾರತವು ಔಪಚಾರಿಕ ಪ್ರಜಾಪ್ರಭುತ್ವವಾಗಿ ಉಳಿಯುತ್ತದೆ ಮತ್ತು ನಿಸಂಶಯವಾಗಿ ಪೂರ್ಣ ಪ್ರಮಾಣದ ನಿರಂಕುಶ ಅಥವಾ ಸರ್ವಾಧಿಕಾರಿ ಪ್ರಭುತ್ವವಾಗುತ್ತದೆ.

**ಸಂಸತ್ತಿನ ಪ್ರಜಾಪ್ರಭುತ್ವ–ಅಪಾಯಕ್ಕೆ ಸಿಲುಕಿದೆ**

ನಮ್ಮ ಸಂವಿಧಾನವು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒದಗಿಸಿದೆ. ಈ ವ್ಯವಸ್ಥೆಯ ಅಡಿಯಲ್ಲಿ, ಕಾರ್ಯಾಂಗವು (ಸರ್ಕಾರ) ಸಂಸತ್ತಿನಲ್ಲಿ ಶಾಸನಗಳನ್ನು ರೂಪಿಸುವ ಜವಾಬ್ದಾರಿ ಹೊಂದಿರುತ್ತದೆ. ಸಂಸತ್ತಿನಲ್ಲಿ ಅಂಗೀಕಾರ ಗೊಂಡ ಶಾಸನಗಳೇ ಕಾನೂನುಗಳಾಗುತ್ತವೆ. ಅವನ್ನು ಪಾಲನೆಗೆ ತರಲಾಗುವುದು.

ಆದರೆ, ಬಿಜೆಪಿ ಆಡಳಿತದಲ್ಲಿ ಸಂಸತ್ತಿನ ಸ್ಥಾನವನ್ನು ವ್ಯವಸ್ಥಿತವಾಗಿ ಕೆಳಮಟ್ಟಕ್ಕಿಳಿಸಲಾಗುತ್ತಿದೆ. ಮೊದಲ ಲೋಕಸಭೆಯಲ್ಲಿ (2014–19) ಸಂಸತ್ ಸೇರಿರುವುದು, ಸರಾಸರಿ ವಾರ್ಷಿಕ ಸಭೆಯ ದಿನಗಳು 135; ಫೆಬ್ರವರಿ 2024 ರಲ್ಲಿ ಮುಕ್ತಾಯಗೊಂಡ ಪ್ರಸ್ತುತ 17ನೇ ಲೋಕಸಭೆಯಲ್ಲಿ, (2019–24) ಸರಾಸರಿ ವಾರ್ಷಿಕ ಕೇವಲ 55 ಸಭೆಗಳು ಮಾತ್ರ ನಡೆದಿವೆ.

ಸಂಸತ್ತಿನಲ್ಲಿ ಹಲವು ಸಮಿತಿಗಳು ಕಾರ್ಯ ನಿರ್ವಹಿಸುತ್ತವೆ. ಸಂಸತ್ತು ಅಂಗೀಕರಿಸಲು ಉದ್ದೇಶಿಸಲಾದ ಶಾಸನಗಳನ್ನು ಪರಿಶೀಲಿಸುವಲ್ಲಿ ಈ ಸಮಿತಿಗಳು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ. 2019 ರಿಂದ ಸಂಸತ್ತಿನ ಕೊನೆಯ ಅವಧಿಯಲ್ಲಿ, 2009–2014 ರ ಸಂಸತ್ತಿನಲ್ಲಿ, ಮೋದಿ ಅಧಿಕಾರಕ್ಕೆ ಬರುವ ಮೊದಲು, 71 ಪ್ರತಿಶತದಷ್ಟು ಮಸೂದೆಗಳನ್ನು ಇಂತಹ ಸಂಬಂಧ ಪಟ್ಟ ಸಮಿತಿಗಳಿಗೆ ಪರಿಶೀಲನೆಗೆ ಕಳುಹಿಸಲಾಗಿತ್ತು. ಆದರೆ, 2019 ರಿಂದ ಕೇವಲ 13 ಪ್ರತಿಶತದಷ್ಟು ಶಾಸಕಾಂಗ ಮಸೂದೆಗಳನ್ನು ಮಾತ್ರ, ಪರಿಶೀಲನಾ ಸಮಿತಿಗಳಿಗೆ ಕಳುಹಿಸಲಾಗಿದೆ. ಇದು ಸರ್ವಾಧಿಕಾರಿ ಪ್ರವೃತ್ತಿಯ ಸಂಕೇತವಾಗಿದೆ.

ಸಂಸತ್ತಿನಲ್ಲಿ ಪ್ರತಿಪಕ್ಷಗಳು ಪ್ರಮುಖ ಪಾತ್ರ ವಹಿಸುತ್ತವೆ. ಆದರೆ, ಮೋದಿ ಆಡಳಿತದಲ್ಲಿ ಪ್ರತಿಪಕ್ಷಗಳನ್ನು ಹತ್ತಿಕ್ಕುವ ವ್ಯವಸ್ಥಿತ ಪ್ರಯತ್ನಗಳು ನಡೆಯುತ್ತಿವೆ. 2023 ರಲ್ಲಿ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ 146 ಪ್ರತಿಪಕ್ಷ ಸಂಸದರನ್ನು ಅಮಾನತು ಗೊಳಿಸಲಾಯಿತು. ವಿರೋಧ ಪಕ್ಷಗಳ ಹತ್ತಿಕ್ಕುವಿಕೆ ಪ್ರಜಾಪ್ರಭುತ್ವದಲ್ಲಿ ಮಾರಕವಾದ ಸರ್ವಾಧಿಕಾರಿ ಧೋರಣೆ.

2019 ಮತ್ತು 2023 ರ ನಡುವೆ ಸರಾಸರಿ, ಸುಮಾರು 80 ಪ್ರತಿಶತ ಬಜೆಟ್ ಅನ್ನು ಚರ್ಚೆಯಿಲ್ಲದೆ ಮತಕ್ಕೆ ಹಾಕಲಾಗಿದೆ. 2023 ರಲ್ಲಿ, ಸಂಪೂರ್ಣ ಬಜೆಟ್ ಅನ್ನು ಚರ್ಚೆಯಿಲ್ಲದೆ ಅಂಗೀಕರಿಸಲಾಯಿತು. ಇದು ನಿರಕುಂಶ ಪ್ರವೃತ್ತಿಗೆ ಹಿಡಿದ ಕನ್ನಡಿ.

**ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ**

ಸಂವಿಧಾನದ 19 ನೇ ಪರಿಚ್ಛೇದ ನಾಗರಿಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ, ಸಂಘಟನಾ ಸ್ವಾತಂತ್ರ್ಯ, ಚಲನೆಯ ಸ್ವಾತಂತ್ರ್ಯ ಇತ್ಯಾದಿಗಳನ್ನು ಒದಗಿಸುತ್ತದೆ. ಈ ಎಲ್ಲಾ ಮೂಲಭೂತ ಹಕ್ಕುಗಳನ್ನು ಈಗ ದುರ್ಬಲಗೊಳಿಸಲಾಗಿದೆ ಅಥವಾ ನಿರಾಕರಿಸಲಾಗಿದೆ.

ಒಂದು ಸ್ಪಷ್ಟ ಉದಾಹರಣೆಯೆಂದರೆ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆ (ಯುಎಪಿಎ), ಇದನ್ನು ಹೆಚ್ಚು ಕಠಿಣಗೊಳಿಸಲು 2019 ರಲ್ಲಿ ತಿದ್ದುಪಡಿ ಮಾಡಲಾಗಿದೆ. 2015 ಮತ್ತು 2019 ರ ನಡುವೆ, ಯುಎಪಿಎ ಅಡಿಯಲ್ಲಿ ಬಂಧನಗಳಲ್ಲಿ ಶೇಕಡಾ 72 ರಷ್ಟು ಹೆಚ್ಚಳವಾಗಿದೆ, ಶೇ 98 ಬಂಧಿತರು ಜಾಮೀನು ಇಲ್ಲದೆ ಜೈಲಿನಲ್ಲಿ ಉಳಿದಿದ್ದಾರೆ. 2021ರಲ್ಲಿ ಯುಎಪಿಎ ಅಡಿಯಲ್ಲಿ 814 ಪ್ರಕರಣಗಳು ದಾಖಲಾಗಿವೆ. ಇದು 2022 ರಲ್ಲಿ 1,005 ಕ್ಕೆ ಏರಿತು.

ಇದರ ಅಡಿಯಲ್ಲಿ 8,947 ಜನರನ್ನು ಬಂಧಿಸಲಾಯಿತು ಮತ್ತು 6,503 ಚಾರ್ಜ್ ಶೀಟ್ ಗಳಲ್ಲಿ ಹೆಸರಿಸಲಾಯಿತು. ಬಂಧಿತರಲ್ಲಿ ರಾಜಕೀಯ ಮತ್ತು ಸಾಮಾಜಿಕ ಕಾರ್ಯಕರ್ತರು, ಶಿಕ್ಷಣ ತಜ್ಞರು, ಪತ್ರಕರ್ತರು ಮತ್ತು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದವರೂ ಇದ್ದಾರೆ. ಯುಎಪಿಎಯ ನಿಬಂಧನೆಗಳ ಅಡಿಯಲ್ಲಿ, ಬಂಧಿತ ವ್ಯಕ್ತಿಗಳು ಜಾಮೀನು ಪಡೆಯಲು ಪ್ರಾಯೋಗಿಕವಾಗಿ ಅಸಾಧ್ಯವಾಗಿರುತ್ತದೆ.

ಇನ್ನೊಂದು ಅಸ್ತ್ರವೆಂದರೆ ಭಾರತೀಯ ದಂಡ ಸಂಹಿತೆಯಲ್ಲಿನ ದೇಶದ್ರೋಹದ ಷರತ್ತು. 2018 ರಿಂದ 2022 ರವರೆಗೆ 701 ದೇಶದ್ರೋಹದ ಪ್ರಕರಣಗಳು ದಾಖಲಾಗಿವೆ. ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ನಾಗರಿಕರ ವಿರುದ್ಧ ದಾಖಲಾದ ದೇಶದ್ರೋಹ ಪ್ರಕರಣಗಳಲ್ಲಿ, 96 ಪ್ರತಿಶತವು 2014 ರಲ್ಲಿ ಮೋದಿ ಅಧಿಕಾರಕ್ಕೆ ಬಂದ ನಂತರ ದಾಖಲಾಗಿವೆ. ಅದರ ನಂತರ, ದೇಶದ್ರೋಹದ ಪ್ರಕರಣಗಳನ್ನು ಸುಪ್ರೀಂ ಕೋರ್ಟ್ ನಲ್ಲಿ ದಾಖಲಿಸಲಾಗಿಲ್ಲ.

ಮುಂದಿನ ಪರಿಶೀಲನೆಯವರೆಗೆ ಈ ಷರತ್ತನ್ನು ಅಮಾನತು ಗೊಳಿಸುವಂತೆ ಆದೇಶಿಸಿದೆ. ಸಂಸತ್ತಿನಲ್ಲಿ ಅಂಗೀಕರಿಸಲಾದ ಕ್ರಿಮಿನಲ್ ಕೋಡ್ ನಲ್ಲಿ, ದೇಶದ್ರೋಹದ ಷರತ್ತನ್ನು ಹೆಚ್ಚು ಕಠಿಣ ಶಿಕ್ಷೆಯೊಂದಿಗೆ ಹೊಸ ರೂಪದಲ್ಲಿ ಮರಳಿ ತರಲಾಗಿದೆ.


**ಮಾಧ್ಯಮವನ್ನು ನಿಯಂತ್ರಿಸುವುದು ಮತ್ತು ಪಳಗಿಸುವುದು**

ಮಾಧ್ಯಮಗಳ ಕಾರ್ಪೊರೇಟ್ ಮಾಲೀಕರಿಗೆ ಬೆದರಿಕೆ ಹಾಕುವ ಮೂಲಕ ಮುಖ್ಯವಾಹಿನಿಯ ದೂರದರ್ಶನ ಮತ್ತು ಮುದ್ರಣ ಮಾಧ್ಯಮವನ್ನು ಪಳಗಿಸಲಾಗುತ್ತದೆ ಮತ್ತು ನಿಯಂತ್ರಿಸಲಾಗುತ್ತದೆ. ಇತ್ತೀಚೆಗೆ ಅಳವಡಿಸಿಕೊಂಡ ದೂರಸಂಪರ್ಕ ಕಾಯಿದೆ, ಐಟಿ ತಿದ್ದುಪಡಿ ನಿಯಮಗಳು ಮತ್ತು ಬ್ರಾಡ್ ಕಾಸ್ಟಿಂಗ್ ಮಸೂದೆ ಇವೆಲ್ಲವೂ ಸರ್ಕಾರದ ನಿಯಂತ್ರಣಕ್ಕೆ ಕಾರಣವಾಗುತ್ತವೆ. ನ್ಯೂಸ್ ಕ್ಲಿಕ್ ಸಂಸ್ಥಾಪಕರೊಂದಿಗೆ ಸಂಭವಿಸಿದಂತೆ ಸ್ವತಂತ್ರ ಮಾಧ್ಯಮ ಮತ್ತು ಪತ್ರಕರ್ತರಿಗೆ ದೇಶದ್ರೋಹದ ಷರತ್ತು ಹಾಕಲಾಗಿದೆ. ಇದರೊಂದಿಗೆ ಯುಎಪಿಎ ಬಳಕೆಯೊಂದಿಗೆ ಬೆದರಿಕೆ ಹಾಕಲಾಗಿದೆ. ಲಾಭದ ಹಿತಾಸಕ್ತಿ ಹೊಂದಿರುವ ದೊಡ್ಡ ವ್ಯಾಪಾರ ಸಂಸ್ಥೆಗಳ ಮಾಧ್ಯಮದ ಏಕಾಗ್ರತೆ ಮತ್ತು ನಿಯಂತ್ರಣವು ಮುಖೇಶ್ ಅಂಬಾನಿ 72 ದೂರದರ್ಶನ ಚಾನೆಲ್ ಗಳನ್ನು 800 ಮಿಲಿಯನ್ ವೀಕ್ಷಕರನ್ನು ಹೊಂದಲು ಕಾರಣವಾಗಿದೆ. ಅದಾನಿ ಸಮೂಹವು ಮಾಧ್ಯಮದ ತನ್ನ ಮಾಲಿಕತ್ವವನ್ನು ವಿಸ್ತರಿಸಲು ಪ್ರಾರಂಭಿಸಿದೆ.

ವಿಶ್ವ ಪತ್ರಿಕಾ ವರದಿಗಾರರ ಸ್ವಾತಂತ್ರ ಸೂಚ್ಯಂಕ ಪ್ರಕಾರ, ಭಾರತವು 180 ದೇಶಗಳ ಪೈಕಿ 161 ನೇ ಸ್ಥಾನಕ್ಕೆ ಕುಸಿದಿದೆ.

**ವೈಫಲ್ಯಗಳ ವಿರೋಧದ ನಿಗ್ರಹ**

ಆಡಳಿತದಲ್ಲಿನ ವೈಪಲ್ಯಗಳನ್ನು ವಿರೋಧಿಸುವವರನ್ನು ಹತ್ತಿಕ್ಕುವ ಮೂಲಕ ಏಕಪಕ್ಷೀಯ ಸರ್ವಾಧಿಕಾರವನ್ನು ಸ್ಥಾಪಿಸುವುದು ಮೋದಿ ಮತ್ತು ಬಿಜೆಪಿಯ ಗುರಿಯಾಗಿದೆ. ಇದಕ್ಕಾಗಿ ಕೇಂದ್ರೀಯ ಸಂಸ್ಥೆಗಳಾದ ಜಾರಿ ನಿರ್ದೇಶನಾಲಯ (ಇಡಿ), ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಯನ್ನು ಪ್ರತಿಪಕ್ಷಗಳು ಮತ್ತು ವಿರೋಧ ಪಕ್ಷಗಳ ನಾಯಕರನ್ನು ಗುರಿ ಮಾಡಿ ಕೊಂಡು ಬಳಸಿ ಕೊಳ್ಳಲಾಗುತ್ತದೆ. ಪ್ರಸ್ತುತ, ಇಡಿ/ಸಿಬಿಐ ತನಿಖೆಗಳು ಮತ್ತು ವಿವಿಧ ವಿರೋಧ ಪಕ್ಷಗಳಿಗೆ ಸೇರಿದ ಹಲವಾರು ನಾಯಕರ ವಿರುದ್ಧ




ಪ್ರಕರಣಗಳಿವೆ. ಜಾರ್ಖಂಡ್ ನ ಮುಖ್ಯಮಂತ್ರಿಯನ್ನು ಇಡಿ ಬಂಧಿಸಿ ಸೆರೆ ಮನೆಗೆ ದಬ್ಬಲಾಯಿತು. ದೆಹಲಿಯ ಉಪಮುಖ್ಯಮಂತ್ರಿ ಒಂದು ವರ್ಷದಿಂದ ಜೈಲಿನಲ್ಲಿದ್ದಾರೆ. ಕೇಂದ್ರೀಯ ಸಂಸ್ಥೆಗಳ ತನಿಖೆ ಮತ್ತು ಬಂಧನದ ಬೆದರಿಕೆಯಿಂದಾಗಿ ಅನೇಕ ವಿರೋಧ ಪಕ್ಷದ ರಾಜಕಾರಣಿಗಳು ಬಿಜೆಪಿಗೆ ಬದಲಾಗಿದ್ದಾರೆ. ಶಿವಸೇನೆ ಮತ್ತು ಎನ್.ಸಿ.ಪಿ.ಯಂತಹ ಪಕ್ಷಗಳು ಇಂತಹ ತಂತ್ರಗಳಿಂದ ಒಡೆದು ಚೂರಾಗಿ ಹೋಗಿವೆ.

**ಕಣ್ಗಾವಲು ಪ್ರವೃತ್ತಿ ಪ್ರಭುತ್ವ**

ವಿರೋಧ ಪಕ್ಷದ ನಾಯಕರು, ಪತ್ರಕರ್ತರು ಮತ್ತು ಕಾರ್ಯಕರ್ತರ ಫೋನ್ ಗಳಲ್ಲಿ ಪೆಗಾಸಸ್ ಸ್ಪೈವೇರ್ ಅನ್ನು ಹೇಗೆ ಅಳವಡಿಸಲಾಗಿದೆ ಎಂಬುದನ್ನು ರಾಜ್ಯ ಕಣ್ಗಾವಲು ಬಹಿರಂಗ ಪಡಿಸಿತು. ಅದು ಈಗ ಎಲ್ಲೆಡೆ ವ್ಯಾಪಿಸಿಕೊಂಡಿದೆ.

ಟೆಲಿಕಾಂ ಕಣ್ಗಾವಲು ಕೇಂದ್ರೀಯ ಮಾನಿಟರಿಂಗ್ ಸಿಸ್ಟಮ್, ಇಂಟರ್ನೆಟ್ ವಿಶ್ಲೇಷಣೆಗಾಗಿ ನೆಟ್ ವರ್ಕ್ ಟ್ರಾಫಿಕ್ ಅನಾಲಿಸಿಸ್ (NETRA) ಮತ್ತು ರಾಷ್ಟ್ರೀಯ ಕಣ್ಗಾವಲು ಗ್ರಿಡ್ NATGRID ನಂತಹ ಅಸ್ತಿತ್ವದಲ್ಲಿರುವ ಡಿಜಿಟಲ್ ಕಣ್ಗಾವಲು ಮೂಲಸೌಕರ್ಯಗಳ ಮೂಲಕ ಹಲವಾರು ಕಾನೂನು ಜಾರಿ ಸಂಸ್ಥೆಗಳು ನಾಗರಿಕರ ಡಿಜಿಟಲ್ ಡೇಟಾಗೆ ಪ್ರವೇಶವನ್ನು ಹೊಂದಿವೆ. ಡೇಟಾ ಬೇಸ್ ಮತ್ತು ಇಂಟಿಗ್ರೇಟೆಡ್ ಕ್ರಿಮಿನಲ್ ಜಸ್ಟೀಸ್ ಸಿಸ್ಟಮ್ (ICJS).

ಡಿಜಿಟಲ್ ಪರ್ಸನಲ್ ಡೇಟಾ ಪ್ರೊಟೆಕ್ಷನ್ ಆಕ್ಟ್ ಗೌಪ್ಯತೆಯ ಉಲ್ಲಂಘನೆಯನ್ನು ತೀವ್ರವಾಗಿ ತೆಗೆದುಕೊಳ್ಳುತ್ತದೆ ಏಕೆಂದರೆ ಇದು ಜನನದಿಂದ ಮರಣದವರೆಗೆ ತಮ್ಮ ವೈಯಕ್ತಿಕ ವಿವರಗಳೊಂದಿಗೆ ಕೂಡಿರುತ್ತದೆ. ಇವುಗಳ ಸಂಪೂರ್ಣ ಮಾಹಿತಿಯನ್ನು ಜನರಿಗೆ ಒದಗಿಸುತ್ತದೆ. ಸರ್ಕಾರವು ಜನತೆಯ ಈ ಎಲ್ಲಾ ವೈಯಕ್ತಿಕ ಮಾಹಿತಿಗಳನ್ನು ಕಣ್ಗಾವಲು ಏಜೆನ್ಸಿಗಳೊಂದಿಗೆ ಹಂಚಿಕೊಳ್ಳಬಹುದು. ಇತ್ತೀಚೆಗೆ ಅಂಗೀಕರಿಸಿದ ಪೋಸ್ಟ್ ಆಫೀಸ್ ಕಾಯಿದೆಯು ಯಾವುದೇ ಅಧಿಕಾರಿಯು ಪಾರ್ಸೆಲ್ ಅನ್ನು ಅನುಮಾನ ಆಸ್ಪದ ವೆಂದು ಭಾವಿಸಿದರೆ, ಅದನ್ನು ತೆರೆಯಲು ಮತ್ತು ಹೆಚ್ಚಿನ ತನಿಖೆಗಾಗಿ ಕಸ್ಟಮ್ಸ್ ಅಥವಾ ಯಾವುದೇ ಇತರ ಏಜೆನ್ಸಿಗೆ ಕಳುಹಿಸಲು ಅಧಿಕಾರ ನೀಡುತ್ತದೆ. ವಿವಿಧ ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳಿಗೆ ಕಡ್ಡಾಯವಾಗಿ ಲಿಂಕ್ ಮಾಡಲಾದ ಆಧಾರ್ ಬಳಕೆಯು ಎಲ್ಲಾ ವೈಯಕ್ತಿಕ ಡೇಟಾವನ್ನು ಸಂಗ್ರಹಿಸಲು ಸರ್ಕಾರವನ್ನು ಶಕ್ತಗೊಳಿಸುತ್ತದೆ.

2022 ರಲ್ಲಿ 84 ಸರ್ಕಾರಿ ನಿರ್ದೇಶನದ ಸ್ಥಗಿತಗೊಳಿಸುವಿಕೆಗಳೊಂದಿಗೆ ಭಾರತವು ಸರ್ಕಾರ–ನಿರ್ದೇಶಿತ ಇಂಟರ್ನೆಟ್ ಸ್ಥಗಿತಗೊಳಿಸುವಿಕೆಗಳಲ್ಲಿ ಜಗತ್ತನ್ನು ಮುನ್ನಡೆಸುತ್ತಿದೆ. ಈ ಬ್ಲ್ಯಾಕ್ ಔಟ್ ಗಳನ್ನು ಸಾಮಾನ್ಯವಾಗಿ ಅಮಾನತುಗೊಳಿಸುವ ಸ್ಪಷ್ಟ ಮಾನದಂಡಗಳಿಲ್ಲದೆ, ಪರಿಣಾಮಕಾರಿ ಸಾರ್ವಜನಿಕ ಸಮನ್ವಯಕ್ಕೆ ಅಡ್ಡಿಯಾಗಲು ಪ್ರತಿಭಟನೆಗಳ ಮೊದಲು ಮತ್ತು ಆ ಸಮಯದಲ್ಲಿ ವಿಧಿಸಲಾಗುತ್ತದೆ.

**ಏಕೀಕೃತ ವ್ಯವಸ್ಥೆಯನ್ನು ಜಾರಿಗೊಳಿಸುವುದು**

ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಅಂಶವೆಂದರೆ ಅದರಲ್ಲಿ ಅಂತರ್ಗತ ವಾಗಿರುವ ಫೆಡರಲಿಸಂ ಅಂದರೆ ಒಕ್ಕೂಟ ತತ್ವ. ಭಾರತವು ರಾಜ್ಯಗಳ (ಯೂನಿಯನ್ ಸ್ಟೇಟ್ಸ್) ಒಕ್ಕೂಟವಾಗಿದೆ. ಆದರೆ ಬಿಜೆಪಿ–ಆರ್.ಎಸ್.ಎಸ್. ಆಡಳಿತವು ರಾಜ್ಯಗಳ ಕಾನೂನು ಬದ್ಧ ಹಕ್ಕುಗಳು ಮತ್ತು ಸಂಪನ್ಮೂಲಗಳನ್ನು ಕಸಿದುಕೊಳ್ಳುವ ಕೇಂದ್ರೀಕೃತ ಏಕೀಕೃತ ವ್ಯವಸ್ಥೆಯನ್ನು ರಚಿಸಲು ಬಯಸುತ್ತವೆ. ಸಂಸದೀಯ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಫೆಡರಲಿಸಂ ಸುತ್ತ ನಿರ್ಮಿಸಲಾಗಿದೆ. ಇದು ದೇಶದ ಎಲ್ಲಾ ವೈವಿಧ್ಯತೆಗಳಿಗೆ ಅವಕಾಶ ಕಲ್ಪಿಸುತ್ತದೆ. ಆದರೆ ಮೋದಿ ಸರ್ಕಾರದ ಆಡಳಿತವು ಒಕ್ಕೂಟ ವ್ಯವಸ್ಥೆಯನ್ನು ನಾಶಗೊಳಿಸುತ್ತಿದೆ.

ರಾಜ್ಯಗಳು ಮತ್ತು ಚುನಾಯಿತ ಪ್ರತಿಪಕ್ಷ ರಾಜ್ಯ ಸರ್ಕಾರಗಳ ಹಕ್ಕುಗಳ ಮೇಲೆ ಕೇಂದ್ರವು ಘೋರ ದಾಳಿಯನ್ನು ಪ್ರಾರಂಭಿಸಿದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ವಿಘಟಿಸಿ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ಪರಿವರ್ತಿಸಿದ ರೀತಿ ರಾಜ್ಯಗಳ ಹಕ್ಕುಗಳ ಮೇಲಿನ ಕೆಟ್ಟ ದಾಳಿಯಾಗಿದೆ. ರಾಜ್ಯದ ವಿಷಯಗಳಲ್ಲಿ ಮಧ್ಯಪ್ರವೇಶಿಸಲು ರಾಜ್ಯಪಾಲರ ದುರುಪಯೋಗ, ಸಾಕಷ್ಟು ಸಂಪನ್ಮೂಲಗಳ ನಿರಾಕರಣೆ ಮತ್ತು ಹಣವನ್ನು ಎರವಲು ಪಡೆಯುವ ಹಕ್ಕು ಮತ್ತು ರಾಜ್ಯದ ವಿಷಯದ ಮೇಲೆ ಕೇಂದ್ರ ನಿರ್ದೇಶನಗಳನ್ನು ಹೇರುವುದು–ಇವೆಲ್ಲವೂ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿಯಾಗಿವೆ.

**ಈ ಸರ್ವಾಧಿಕಾರಿಯುತ ಆಡಳಿತದ ಚಾಲನೆಯನ್ನು ನಿಲ್ಲಿಸಿ**

ಭಾರತದಲ್ಲಿ ಪ್ರಜಾಪ್ರಭುತ್ವದ ಗಂಭೀರ ಸವೆತವನ್ನು ವಿವಿಧ ಅಂತರಾಷ್ಟ್ರೀಯ ಸಂಸ್ಥೆಗಳು ಸೂಕ್ಷ್ಮವಾಗಿ ಗಮನಿಸಿವೆ. 2021 ರಲ್ಲಿ, ಫ್ರೀಡಂ ಹೌಸ್ ಭಾರತದ ಪ್ರಮಾಣವನ್ನು ಮುಕ್ತತೆಯಿಂದ, ಭಾಗಶಃ ಮುಕ್ತತೆಗೆ ಇಳಿಸಿದೆ. (ಉಳಿದಿರುವ ಏಕೈಕ ಮಾನದಂಡ ಮುಕ್ತವಲ್ಲದ್ದು, ಅಂದರೆ, ಸಂಪೂರ್ಣ ಸರ್ವಾಧಿಕಾರಿ ಧೋರಣೆ.) ಅದೇ

**ಪುಟ 14 ಕ್ಕೆ**

# ಹೂಡಿಕೆದಾರರ 15,000 ಕೋಟಿ ರೂ. ಕಣ್ಮರೆ ಮಾಡಿದ ಪೇಟಿಎಂ ಕುಸಿತ

## ಕೋಟಿ ಫಾಸ್ಟ್ ಟ್ಯಾಗ್ ಖಾತೆದಾರರ ನೂರಾರು ಕೋಟಿ ರೂ. ಗುಳುಂ




**ನರೇಂದ್ರ ಮೋದಿಯವರ 10 ವರ್ಷಗಳ ಆಡಳಿತದ ಅಂತ್ಯದಲ್ಲಿ ಮತ್ತೊಂದು ಮೆಘಾ ಹಗರಣ ಬೆಳಕಿಗೆ ಬಂದಿದೆ. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ ಪರವಾನಗಿಯನ್ನು ರದ್ದುಪಡಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ರಿಸರ್ವ್ ಬ್ಯಾಂಕ್ ಈಗಾಗಲೇ ಹೊಸ ಗ್ರಾಹಕರನ್ನು ಸೇರಿಸಲು ನಿರ್ಬಂಧ ಮತ್ತು ಹಾಲಿ ಗ್ರಾಹಕರಿಂದ ಹಣ ಪಡೆಯುವುದನ್ನು ನಿಷೇಧಿಸುವ ಅನೇಕ ನಿರ್ಬಂಧಗಳನ್ನು ವಿಧಿಸಿದ್ದರೆ, ಆ ಕಂಪನಿಯ ಸಂಸ್ಥಾಪಕ ಮತ್ತು ಅದರ ದೊಡ್ಡ ಷೇರುದಾರರಾಗಿರುವ ಉತ್ತರ ಪ್ರದೇಶದ ವಿಜಯ್ ಶೇಖರ್ ಶರ್ಮಾ ಅವರು ಕಂಪನಿಯ ಆಡಳಿತ ಮಂಡಳಿಗೆ ರಾಜೀನಾಮೆ ನೀಡಿದ್ದಾರೆ. ಆರ್‌ಬಿಐ ಒತ್ತಾಯದ ಮೇರೆಗೆ ಅವರು ರಾಜೀನಾಮೆ ನೀಡಿದ್ದಾರೆ ಎಂಬ ಊಹಾಪೋಹಗಳ ನಡುವೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ನಿರ್ವಹಿಸಲು ಆರ್‌ಬಿಐ ಕಾರ್ಯನಿರ್ವಾಹಕರನ್ನು ನೇಮಿಸಬಹುದು ಎಂಬ ವರದಿಗಳೂ ಇವೆ. ಇದರ ನಡುವೆ ಪೇಟಿಎಂ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್ ಷೇರು ಬೆಲೆ ಮತ್ತಷ್ಟು ಕುಸಿದಿದೆ.**

ಪ್ರತಿ ಷೇರಿಗೆ ರೂ. 2150 ಬೆಲೆಗೆ ಮಾರಾಟ ಮಾಡಿ ರೂ. 18,300 ಕೋಟಿಯನ್ನು One97 ಕಮ್ಯುನಿಕೇಶನ್ (ಪೇಟಿಎಂ ಎಂಬ ಹೆಸರಿನಲ್ಲಿ) ಸಂಗ್ರಹಿಸಿದೆ. ಈಗ ಇದರ ಷೇರು ಅತ್ಯಂತ ಕೆಟ್ಟದಾಗಿ ಕುಸಿತ ಕಂಡಿದೆ. ಇದು 'ಕಳೆದ ದಶಕದಲ್ಲಿ ವಿಶ್ವದ ಅತ್ಯಂತ ಕೆಟ್ಟ ಷೇರು ಮಾರುಕಟ್ಟೆ ಸುದ್ದಿ' ಎಂದು ಜಾಗತಿಕ ಮಾರುಕಟ್ಟೆಗಳು ವಿಷಾದ ವ್ಯಕ್ತಪಡಿಸಿವೆ. ಈಗ ಅದರ ಷೇರಿನ ಗರಿಷ್ಠ ಬೆಲೆಗಿಂತ ಶೇ. 80 ರಷ್ಟು ಕುಸಿದು, ರೂ. 400 ರ ಸಮೀಪಕ್ಕೆ ಬಂದಿದೆ. (ಇದರ ಷೇರು ಬೆಲೆ ನವೆಂಬರ್ 2021 ರಲ್ಲಿ 1780 ರೂ. ಮತ್ತು 2024ರ ಮಾರ್ಚ್ 7 ರಂದು 400.10 ರೂ.)

ಈ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡಿದವರು ಸುಮಾರು ರೂ. 15 ಸಾವಿರ ಕೋಟಿ ನಷ್ಟ ಅನುಭವಿಸಿದರು. ಆದರೂ ಯಾವುದೇ ಮಾಧ್ಯಮಗಳು ಇದರ ಬಗ್ಗೆ ಮಾತನಾಡುತ್ತಿಲ್ಲ. ಸಾರ್ವಜನಿಕ ವಲಯದ ಎಲ್ಐಸಿ ಷೇರು ಬೆಲೆ ಕುಸಿದಾಗ ಕಂಪನಿ ಮುಚ್ಚಲಿದೆ ಎಂಬ ಭಾವನೆ ಮೂಡಿಸಿದ್ದು ಇದೇ ಮಾಧ್ಯಮಗಳು. ಎಲ್ ಐಸಿಯಲ್ಲಿ ಕೇವಲ ಶೇ. 3.5ರಷ್ಟು ಷೇರುಗಳು ಮಾರಾಟವಾಗಿದ್ದರೂ ಶೇ. 100ರಷ್ಟು ಷೇರುಗಳಿಗೆ ಶೇರು ಬೆಲೆ ಕುಸಿತದ ಲೆಕ್ಕಾಚಾರ ಹಾಕಿ ಜನರನ್ನು ಹೆದರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಷ್ಟೇ ಅಲ್ಲ, ಮಾಧ್ಯಮಗಳು ಈ ಸುದ್ದಿಯನ್ನು ಪ್ರಾಮುಖ್ಯತೆಯಿಂದ ಪ್ರಕಟಿಸಲಿಲ್ಲ. One97 ಕಮ್ಯುನಿಕೇಷನ್ಸ್ ಕಂಪನಿಯು ಅನೇಕ ಕಂಪನಿಗಳನ್ನು ನಡೆಸುತ್ತಿದೆ, ಕೇವಲ Paytm ಬ್ಯಾಂಕ್‌ಗೆ ಮಾತ್ರ ತೊಂದರೆಯಾಗಿದೆ ಎಂದು ಅವರು ಹೇಳುತ್ತಾರೆ. ನಿಜ, ಇದು Paytm, Paytm ಮಾಲ್ (ಆನ್‌ಲೈನ್ ಮಾಲ್), Paytm ಪೇಮೆಂಟ್ಸ್ ಬ್ಯಾಂಕ್ ಸೇರಿದಂತೆ 8 ಕಂಪನಿಗಳನ್ನು ನಿರ್ವಹಿಸುತ್ತದೆ. ಆದಾಗ್ಯೂ, ಅದರ ಹೆಚ್ಚಿನ ಆದಾಯವು Paytm ಪೇಮೆಂಟ್ಸ್ ಬ್ಯಾಂಕ್ ಅನ್ನು ಅವಲಂಬಿಸಿದೆ. ಇಲ್ಲಿ ಕೆಲ ವಿಷಯಗಳನ್ನು ತಿಳಿಯಬೇಕಿದೆ.

**ಯಾಕೆ ಈ ನಿಷೇಧ?**

ಬ್ಯಾಂಕಿಂಗ್ ಮಾನದಂಡಗಳು ಮತ್ತು KYC ಅವಶ್ಯಕತೆಗಳನ್ನು ಅನುಸರಿಸಲು Paytm ಪೇಮೆಂಟ್ಸ್ ಬ್ಯಾಂಕ್ ಪದೇ ಪದೇ ವಿಫಲವಾದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಬ್ಯಾಂಕ್ ಹೇಳಿದೆ. KYC (ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ) ನಿಯಮಗಳು, ಅನುಸರಣೆ ಸಮಸ್ಯೆಗಳು ಮತ್ತು ಸಂಬಂಧಿತ ಪಕ್ಷದ ವಹಿವಾಟುಗಳಲ್ಲಿನ ಅಕ್ರಮಗಳ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (RBI) ಚಾಟಿ ಬೀಸಿದೆ. ಈ ಹಸ್ತಕ್ಷೇಪವು ಮನಿ ಲಾಂಡರಿಂಗ್ ಮತ್ತು ಕೋಟ್ಯಂತರ ರೂಪಾಯಿಗಳನ್ನು ಒಳಗೊಂಡ ಪ್ರಶ್ನಾರ್ಹ ವಹಿವಾಟುಗಳ ಬಗ್ಗೆ ಆತಂಕದಿಂದ ಉದ್ಭವಿಸಿದೆ. KYC-ಅನುವರ್ತನೆಯಲ್ಲದ ಖಾತೆಗಳು ಮತ್ತು ಬಹು ಖಾತೆಗಳಿಗೆ ಬಳಸಲಾದ ಏಕ PAN ಗಳ ನಿದರ್ಶನಗಳಿವೆ.

ರಾಯಿಟರ್ಸ್ ವರದಿಯ ಪ್ರಕಾರ, Paytm ಪೇಮೆಂಟ್ಸ್ ಬ್ಯಾಂಕ್(PPBL) RBI ಪರಿಶೀಲನೆಗೆ ಒಳಪಟ್ಟಿತು. ಏಕೆಂದರೆ ನೂರಾರು ಸಾವಿರ ಖಾತೆಗಳನ್ನು ಸರಿಯಾದ ಗುರುತೇ ಇಲ್ಲದೆ ರಚಿಸಲಾಗಿದೆ ಎಂದು ಕಂಡುಬಂದಿದೆ. ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ಖಾತೆಗಳಲ್ಲಿನ ಅಕ್ರಮಗಳ ಬಗ್ಗೆ ಆರ್‌ಬಿಐ ಜಾರಿ ನಿರ್ದೇಶನಾಲಯ (ಇಡಿ) ಮತ್ತು ಇತರ ಸರ್ಕಾರಿ ಏಜೆನ್ಸಿಗಳಿಗೆ ಎಚ್ಚರಿಕೆ ನೀಡಿದೆ.

PPBL ಖಾತೆಗಳಲ್ಲಿನ ವಹಿವಾಟಿನ ಒಟ್ಟು ಮೌಲ್ಯವು ಕೋಟ್ಯಂತರ ರೂಪಾಯಿಗಳನ್ನು ಮೀರಿದ ನಿದರ್ಶನಗಳಿರುವುದರಿಂದ ಕೆಂಪು ಧ್ವಜಗಳನ್ನು ಏರಿಸಲಾಗಿದೆ, ಕನಿಷ್ಠ KYC ಪ್ರಿ-ಪೇಯ್ಡ್ ಉಪಕರಣಗಳಲ್ಲಿ ನಿಯಂತ್ರಕ ಮಿತಿಗಳನ್ನು ಮೀರಿದೆ ಎಂದು PTI ವರದಿ ಮಾಡಿದೆ. ಇದು ಸಂಭಾವ್ಯ ಮನಿ ಲಾಂಡರಿಂಗ್ ಬಗ್ಗೆ ಕಳವಳ ವ್ಯಕ್ತಪಡಿಸಿದೆ ಎಂದು ಮೂಲಗಳು ಏಜೆನ್ಸಿಗೆ ತಿಳಿಸಿವೆ.




**ಪೇಮೆಂಟ್ಸ್ ಬ್ಯಾಂಕ್ ಎಂದರೇನು?**

ಮೊದಲು ಪೇಮೆಂಟ್ಸ್ ಬ್ಯಾಂಕ್ (ಪಾವತಿ ಬ್ಯಾಂಕ್) ಎಂದರೇನು ಎಂದು ನೋಡೋಣ. ಎಲ್ಲರಿಗೂ ಬ್ಯಾಂಕಿಂಗ್ ಸೇವೆಗಳನ್ನು ತಲುಪಿಸಲು, 2015 ರಲ್ಲಿ ಪೇಮೆಂಟ್ಸ್ ಬ್ಯಾಂಕ್‌ಗಳು ಮತ್ತು 2016ರಲ್ಲಿ ಸಣ್ಣ ಹಣಕಾಸು ಬ್ಯಾಂಕ್ (ಸ್ಮಾಲ್ ಫೈನಾನ್ಸ್ ಬ್ಯಾಂಕ್) ಗಳಿಗೂ ಅವಕಾಶ ಕೊಡಲಾಯಿತು. ಇವುಗಳಲ್ಲಿ, ಕಿರುಸಾಲವನ್ನು ಒದಗಿಸುವ ಉದ್ದೇಶಕ್ಕಾಗಿ ಮೈಕ್ರೋಫೈನಾನ್ಸ್ ಬ್ಯಾಂಕುಗಳಿಗೆ ಅವಕಾಶ ನೀಡಲಾಯಿತು. ಆದರೆ ಪೇಮೆಂಟ್ಸ್ ಬ್ಯಾಂಕ್‌ಗಳು ಎಂದು ಕರೆಯಲ್ಪಡುವ ಹಣಕಾಸು ಸಂಸ್ಥೆಗಳಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಅಂದರೆ, ಅವುಗಳು ಜನರ ಉಳಿತಾಯವನ್ನು ಮಿತಿಗೆ ಒಳಪಟ್ಟು (ರೂ. 2 ಲಕ್ಷದವರೆಗೆ) ಸಂಗ್ರಹಿಸಬಹುದಾಗಿದೆ. ಆದರೆ, ಸಾಲ ಅಥವಾ ಕ್ರೆಡಿಟ್ ಕಾರ್ಡ್‌ಗಳನ್ನು ನೀಡುವಂತಿಲ್ಲ. ಉಳಿತಾಯವನ್ನು ಸಂಗ್ರಹಿಸಿದ ನಂತರ, ಸಾಲ ನೀಡದೆ ಹೇಗೆ ಬಡ್ಡಿ ಕೊಡಲು ಸಾಧ್ಯ ಎಂದು ಅಂದೇ ತಜ್ಞರು ಗಮನ ಸೆಳೆದರು. ಆದರೆ, ಸಾಲ ನೀಡದೆ ಉಳಿತಾಯವನ್ನು ಹೇಗೆ ಸಂಗ್ರಹಿಸಬಹುದು ಮತ್ತು ಬಡ್ಡಿಯನ್ನು ಪಾವತಿಸಬಹುದು ಎಂದು ತಜ್ಞರು ಸೂಚಿಸಿದರು. 41 ಕಂಪನಿಗಳು ಅರ್ಜಿ ಸಲ್ಲಿಸಿದ್ದು, 11 ಕಂಪನಿಗಳಿಗೆ ಆರ್‌ಬಿಐ ಅನುಮೋದನೆ ನೀಡಿತು. ಅವುಗಳಲ್ಲಿ ಒಂದು ಭಾರತೀಯ ಅಂಚೆ ಇಲಾಖೆ. ಇದು ಈಗಾಗಲೇ ಉಳಿತಾಯ ಖಾತೆಗಳನ್ನು ನಿರ್ವಹಿಸುವ ಸಂಸ್ಥೆಯಾಗಿರುವುದರಿಂದ, ನ್ಯಾಯಯುತವಾಗಿ ಅದಕ್ಕೆ ಸಂಪೂರ್ಣ ಬ್ಯಾಂಕಿಂಗ್ ಪರವಾನಗಿಯನ್ನು ನೀಡಬೇಕಿತ್ತು. ಎಲ್ಐಸಿಗೆ ನಿರಾಕರಿಸಿದಂತೆಯೇ ಅದಕ್ಕೂ ನಿರಾಕರಿಸಲಾಯಿತು. ಆದ್ದರಿಂದ, ಅಂಚೆ ಇಲಾಖೆಯನ್ನು ಹೊಸ ಬ್ಯಾಂಕ್ ಎಂದು ಪರಿಗಣಿಸುವ ಅಗತ್ಯವಿಲ್ಲ.

**ದಾಸ್ತಾನು ಹೆಚ್ಚಿಸಬೇಕೇ ಹೊರತು ಮಳಿಗೆಗಳಲ್ಲ**

ಉಳಿದ 10 ಕಂಪನಿಗಳಲ್ಲಿ 3 ಕಂಪನಿಗಳು ಕಾರ್ಯನಿರ್ವಹಿಸಲು ಸಾಧ್ಯವಾಗದ ಕಾರಣ ಅವುಗಳಿಗೆ ಕೊಟ್ಟಿದ್ದ ಪರವಾನಗಿಯನ್ನು ಹಿಂಪಡೆಯಲಾಗಿದೆ. ಇನ್ನೂ ಎರಡು ಕಂಪನಿಗಳು ಕೆಲ ಕಾಲ ಕಾರ್ಯನಿರ್ವಹಿಸಿದ ನಂತರ ಮುಚ್ಚಲ್ಪಟ್ಟವು. ಈ Paytm ಪೇಮೆಂಟ್ಸ್ ಬ್ಯಾಂಕ್ ಇನ್ನುಳಿದ 5 ರಲ್ಲಿ ಒಂದಾಗಿದೆ. ಒಂದು ಸರಕು ಎಲ್ಲರಿಗೂ ಸಿಗಬೇಕಾದರೆ ದಾಸ್ತಾನು ಹೆಚ್ಚಿಸಬೇಕೇ ಹೊರತು ಮಳಿಗೆಗಳಲ್ಲ. ಎಲ್ಲಾ ಜನರಿಗೆ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸಲು ಈಗಾಗಲೇ ಸುರಕ್ಷಿತವಾಗಿ ಕಾರ್ಯನಿರ್ವಹಿಸುತ್ತಿರುವ, ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಮೂಲಸೌಕರ್ಯ ಮತ್ತು ಸಿಬ್ಬಂದಿಯನ್ನು ಹೆಚ್ಚಿಸಿದಾಗ ಇದು ಅನಗತ್ಯ ಕ್ರಮಗಳು ಎಂದು ಅನುಭವವು ತೋರಿಸಿದೆ. ಆದರೆ ಉದ್ದೇಶವು ಸುರಕ್ಷಿತ ಸೇವೆ ಒದಗಿಸಬೇಕು ಎಂಬುದಾಗಿದ್ದರೆ ತಾನೇ ಅದನ್ನು ಮಾಡುವುದು?

**ಪ್ರಧಾನಿ ಮೋದಿಯವರ ಬೆಂಬಲ**

ಅದು ಇಲ್ಲ ಎಂದು ತಾನೇ, ಪೇಟಿಎಂ ಬ್ಯಾಂಕ್‌ನಲ್ಲಿ ಪದೇ ಪದೇ ಕಂಡುಬಂದ ಅಕ್ರಮಗಳು, ವಿಧಿಸಲಾದ ದಂಡಗಳು, ನಿಷೇಧಗಳ ನಂತರವೂ ಕಾರ್ಯನಿರ್ವಹಿಸಲು ಅನುಮತಿ ನೀಡಿರುವುದೇಕೆ ಎಂಬುದಕ್ಕೆ ಅದರ ಜಾಹೀರಾತಿನಲ್ಲಿ ಪ್ರಧಾನಿ ಮೋದಿ ಕಾಣಿಸಿಕೊಂಡಿರುವುದನ್ನು ಉತ್ತರವಾಗಿ ತೋರಿಸುತ್ತದೆ. 2018 ರಲ್ಲಿ, ಅಕ್ರಮಗಳು ಪತ್ತೆಯಾದ ನಂತರ ಹೊಸ ಗ್ರಾಹಕರನ್ನು ನಿಷೇಧಿಸಿದ RBI, 2019 ರಲ್ಲಿ ನಿಷೇಧವನ್ನು ತೆಗೆದುಹಾಕಿತು. ನಿರಂತರ ಅಕ್ರಮಗಳ ಕಾರಣ 2021 ರಲ್ಲಿ 1 ಕೋಟಿ ರೂ. ದಂಡ ವಿಧಿಸಲಾಗುತ್ತದೆ. ಆದಾಗ್ಯೂ, 2023 ರಲ್ಲಿ ನಮೋ ಭಾರತ್ ರೈಲುಗಳಲ್ಲಿ ಪ್ರಯಾಣಿಸಲು ಕಾರ್ಡ್ ಅನ್ನು ವಿತರಿಸುವ ಹಕ್ಕನ್ನು ಪೇಟಿಎಂ ಬ್ಯಾಂಕ್‌ಗೆ ನೀಡಲಾಯಿತು ಮತ್ತು ಅದನ್ನು ಪ್ರಧಾನಿ ಉದ್ಘಾಟಿಸಿದರು.

**ಮೆಗಾ ಹಗರಣ**

ಪ್ರಧಾನ ಮಂತ್ರಿಯೇ ಬೆಂಬಲಿಸುತ್ತಾರೆ ಎಂದರೆ, ಆ ಕಂಪನಿಯ ತಪ್ಪುಗಳು ಸಣ್ಣದಾಗಿವೆ ಎಂದು ಅನಿಸುವುದು ಸಹಜ. ಆದರೆ, ಒಂದೇ ಆದಾಯ ತೆರಿಗೆ ಖಾತೆ (PAN) ಸಂಖ್ಯೆಯೊಂದಿಗೆ ಸಾವಿರಕ್ಕೂ ಹೆಚ್ಚು ಖಾತೆಗಳ ಅಸ್ತಿತ್ವ ಸೇರಿದಂತೆ ಹಲವಾರು ದೋಷಗಳು ಪತ್ತೆಯಾಗಿವೆ. ಪ್ರಧಾನಿ ಮೋದಿ ಯೋಜನೆಗಳ 7.5 ಲಕ್ಷ ಫಲಾನುಭವಿಗಳು ಕಡಿಮೆ ಮೊಬೈಲ್ ಸಂಖ್ಯೆಯೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂಬುದನ್ನು ನಾವು ನೋಡಿದರೆ, ಈ ಮೋದಿ ಯೋಜನೆಗಳಲ್ಲಿಯೂ ಯಾವ ಮಟ್ಟದ ಭ್ರಷ್ಟಾಚಾರ ನಡೆದಿರಬಹುದು ಎಂಬುದು ತಿಳಿಯುತ್ತದೆ. ಅಷ್ಟೇ ಅಲ್ಲ, ಹಲವು ಲಕ್ಷ ಖಾತೆಗಳು ಸೂಕ್ತ ದಾಖಲೆಗಳಿಲ್ಲದೆ ಬಳಕೆಯಲ್ಲಿವೆ ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ಉಲ್ಲೇಖಿಸಿದೆ. ಕಪ್ಪುಹಣ ಬಿಳುಪುಗೊಳಿಸುವ ಕಾರ್ಯಾಚರಣೆಗಳನ್ನು ತಡೆಗಟ್ಟಲು KYC ಸಂಖ್ಯೆಯ ಗ್ರಾಹಕರ ದಾಖಲೆಗಳನ್ನು ಪ್ರಪಂಚದಾದ್ಯಂತ ತರಲಾಗುತ್ತದೆ ಎಂಬ ಅಂಶದಿಂದ, ಈ ಖಾತೆಗಳನ್ನು ಯಾವುದಕ್ಕಾಗಿ ಬಳಸಬಹುದಾಗಿತ್ತು ಮತ್ತು ಈ ಎಲ್ಲಾ ಅಕ್ರಮಗಳ ನಂತರವೂ Paytm ಬ್ಯಾಂಕ್ ಅನ್ನು ಏಕೆ ದೀರ್ಘಕಾಲ ಕಾರ್ಯನಿರ್ವಹಿಸಲು ಅನುಮತಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ.

ಜಾಹೀರಾತುಗಳಲ್ಲಿ ಮೋದಿ ಕಾಣಿಸಿಕೊಂಡಿರುವುದರಿಂದ ವಿಜಯ್ ಶೇಖರ್ ಶರ್ಮಾ ಅವರು ಮೋದಿಯವರಿಗೆ 'ಬೇಕಾದವರು' ಎಂದು ಹಲವು ಬಾರಿ 'ತೋರ್ಪಡಿಸಿಕೊಂಡ' ನಂತರವೂ ರಿಸರ್ವ್ ಬ್ಯಾಂಕ್ ಅಂತಹ ಕ್ರಮವನ್ನು ತೆಗೆದುಕೊಂಡರೆ, ಒಂದೋ- ಮಾಡಿದ ತಪ್ಪುಗಳು ತುಂಬಾ ದೊಡ್ಡದಾಗಿರಬೇಕು, ಅಥವಾ ಈ ಕಂಪನಿಯ ಮೂಲಕ 'ಮನಿ ಲಾಂಡರಿಂಗ್' ಮಾಡುವ ರಹಸ್ಯ ಯೋಜನೆಗಳು ಪೂರ್ಣಗೊಂಡಿರಬಹುದು.

ಪುಟ 14 ಕ್ಕೆ

## ಯುವತಿಯರು ಮತ್ತು ಬದುಕಿನ ತಲ್ಲಣಗಳು...... ಪುಟ 9 ರಿಂದ

ದೊ ಧಾರಿ ಕತ್ತಿಗಳೊಂದಿಗೆ ಸೆಣೆಸಾಡಬೇಕಿದೆ.

**ಗುಜ್ಜರಕಿ ಶಾದಿ, ರಾಜಸ್ಥಾನಿ ಶಾದಿ...**

ಇನ್ನು 'ಗುಜ್ಜರಕಿ ಶಾದಿ' ಗಳಂತಹ ಮದುವೆಗಳು ಹೆಚ್ಚು ನಡೆದಿದೆ. ಗುಜರಾತಿಗಳು ನಮ್ಮಲ್ಲಿನ ಕರ್ನಾಟಕದ ಯುವತಿಯರನ್ನು ಮದುವೆ ಮಾಡಿಕೊಂಡು ಹೋಗುತ್ತಾರೆ. ಅದರಲ್ಲಿ ಕಲ್ಯಾಣ ಕರ್ನಾಟಕ, ಬಾಂಬೆ ಕರ್ನಾಟಕದಲ್ಲಿಯೇ ಹೆಚ್ಚು ಪ್ರಕರಣಗಳು ಕಂಡುಬಂದಿವೆ. ಅದರಂತೆ ಕರಾವಳಿ ಪ್ರದೇಶದಲ್ಲಿ ರಾಜಸ್ಥಾನಿ ಶಾದಿಗಳು ಕೂಡಾ ಹೆಚ್ಚಾಗಿವೆ. ಅನೇಕ ಭಾಗಗಳಲ್ಲಿ ಯುವತಿಯರ ಸಂಖ್ಯೆ ಕಡಿಮೆ ಇರುವುದರಿಂದ ಮದುವೆಗೆ ಯುವತಿಯರೇ ಸಿಗುವುದಿಲ್ಲ.

ಇನ್ನು ಮದುವೆಯಾಗಿದ್ದರೂ ಮನೆ ಕೆಲಸಗಳಿಗೆ ಬೇಕೆಂದು ಮದುವೆ ಮಾಡಿಕೊಂಡು ಹೋಗುವಂತಹ ಗುಜ್ಜರಕಿ ಶಾದಿ, ರಾಜಸ್ಥಾನಿ ಶಾದಿಗಳು ಕೂಡ ಇವೆ. ಹೀಗೆ ಮದುವೆ ಮಾಡಿಕೊಳ್ಳುವ ಸಂದರ್ಭದಲ್ಲಿ ವರದಕ್ಷಿಣೆ ತೆಗೆದುಕೊಳ್ಳದೆ ಪರ್ಯಾಯವಾಗಿ ಹಣವನ್ನು ಕೊಟ್ಟು ಮದುವೆ ಮಾಡಿಕೊಂಡು ಹೋಗುತ್ತಾರೆ. ಬಡತನದಲ್ಲಿ ಬಳಲುತ್ತಿರುವವರಿಗೆ ಸ್ವಲ್ಪ ಹಣ ತೆಗೆದುಕೊಂಡು ಮಗಳಿಗೆ ಒಂದು ಜೀವನ ಆಗುತ್ತದೆ ಎಂದುಕೊಳ್ಳುತ್ತಾರೆ. ಮದುವೆ ಮಾಡಿಕೊಂಡು ಹೋದ ನಂತರ ಯುವತಿಯರ ಸ್ಥಿತಿ ಅಲ್ಲಿ ಏನಿದೆ ಎಂಬುದು "ಕಣ್ಣಿಗೆ ಕಾಣುವ ದೂರದ ಬೆಟ್ಟ ನುಣ್ಣಗೆ" ಎನ್ನುವ ರೀತಿಯಲ್ಲಿ ಯುವತಿಯರ ಜೀವನ. ಅನೇಕ ಯುವತಿಯರು ಕೆಲವೊಂದು ಬಾರಿ ತಮ್ಮ ಊರುಗಳಿಗೆ ಬಂದು ಹೋಗಬಹುದು ಆದರೆ ಇನ್ನೂ ಕೆಲವರು ಇಲ್ಲಿಂದ ಹೋದ ನಂತರ ವಾಪಸ್ ಬರುವುದೇ ಇಲ್ಲ. ಅವರು ಸುಖವಾಗಿದ್ದಾರೋ–ಕಷ್ಟದಲ್ಲಿದ್ದಾರೋ, ಮಾರಾಟವಾಗಿದ್ದಾರೋ? ಜೀವಂತವಾಗಿದ್ದಾರೋ–ಸತ್ತಿದ್ದಾರೋ ಎನ್ನುವ ಯಾವ ಸುಳಿಹು ಸಿಗುವುದಿಲ್ಲ. ಎಷ್ಟೊ ಯುವತಿಯರು ಮಾರಲ್ಪಟ್ಟಿದ್ದಾರೆ ಎಂಬ ಅನುಮಾನಗಳೂ ಇವೆ.

**ವೇಶ್ಯಾವೃತ್ತಿಗೆ ದೂಡಲ್ಪಡುತ್ತಿದ್ದಾರೆ**

ಮನುಷ್ಯರ ಮಾರಾಟ ಮತ್ತು ಸಾಗಾಣಿಕೆಯಲ್ಲಿ 60% ಮಹಿಳೆಯರು ಮತ್ತು ಮಕ್ಕಳಿದ್ದಾರೆ. ಇಲ್ಲಿ ಕಾಣೆಯಾದ ಹೆಣ್ಣು ಮಕ್ಕಳು ದೂರದಲ್ಲೆಲ್ಲೋ ವೇಶ್ಯಾವೃತ್ತಿಗೆ ದೂಡಲ್ಪಡುತ್ತಿದ್ದಾರೆ. ಮನಸ್ಸಿದ್ದೋ–ಮನಸ್ಸಿಲ್ಲದೆಯೋ ತನ್ನ ದೇಹವನ್ನಂತೂ ಬೇರೆಯವರೆದುರು ಬೆತ್ತಲೆಗೊಳಿಸಲೇಬೇಕು. ಚಿಕ್ಕ ಮಕ್ಕಳ ದೇಹ ಯೌವನದ ರೂಪ ಬಹು ಬೇಗ ಪಡೆಯಲು ಅವರಿಗೆ ಅನೇಕ ರೀತಿಯ ಹಾರ್ಮೋನ್ ಗಳನ್ನು ಕೊಡಲಾಗುತ್ತದೆ. ಈ ವೃತ್ತಿಯಲ್ಲಿ ಏಡ್ಸ್ ನಂತಹ ಮಾರಕ ರೋಗಗಳ ಹೆದರಿಕೆ ಬೇರೆ. ಎದುರಿಗಿರುವ ವ್ಯಕ್ತಿಯ ಕ್ರೌರ್ಯವನ್ನು ಅಲ್ಲಿಯೂ ಸಹಿಸುತ್ತಾರೆ. ಹೆಣ್ಣು ಭ್ರೂಣ ಹತ್ಯೆ ಒಂದೆಡೆಯಾದರೆ, ಹೊಸ ಜೀವಕ್ಕೆ ಜೀವಕೊಡುವ ಗರ್ಭಕೋಶವನ್ನು ತೆಗೆಯುವ ವೈದ್ಯಕೀಯ ಸಂಚುಗಳು ಹೆಣ್ಣಿನ ಆರೋಗ್ಯವನ್ನು ಸಂಪೂರ್ಣ ಕುಂಠಿತಗೊಳಿಸುತ್ತಿವೆ.

**ಯುವಜನರ ಮನೋಸ್ಥಿತಿಯೇ ಬದಲಾಗಿವೆ**

ಯುವಜನರ ಸಂಖ್ಯೆ ಹೆಚ್ಚಿರುವ ನಮ್ಮ ಭಾರತದ ಏಳಿಗೆ ನಿರ್ಭರವಾಗಿರುವುದು ನಮ್ಮ ಯುವಜನರ ವಿಚಾರಗಳ ಮೇಲೆ. ಕಾರ್ಪೋರೇಟ್ ಬಂಡವಾಳಶಾಹಿಗಳು ನಮ್ಮ ಯುವಜನರ ಮನೋಸ್ಥಿತಿಯನ್ನೇ ಬದಲಾಯಿಸಿಬಿಟ್ಟಿವೆ. ಅದೇಕೆ ನಮ್ಮ ಯುವಜನರು ಪ್ರಶ್ನೆಗಳನ್ನು ಕೇಳುತ್ತಿಲ್ಲ ಎನ್ನುವುದೇ ವಿಪರ್ಯಾಸ. ಇಂದು ಬೆಲೆಯೇರಿಕೆ, ನಿರುದ್ಯೋಗ, ಹೆಚ್ಚಾಗುತ್ತಿರುವ ಅಪರಾಧ ಇಂತಹ ಎಲ್ಲ ವಿಷಯಗಳ ಬಗ್ಗೆ ಹೋರಾಟವಂತೂ ಇಲ್ಲ, ಕನಿಷ್ಟ ಪಕ್ಷ ಚರ್ಚೆಗಳೂ ಮಾಡುತ್ತಿಲ್ಲ. ನಾವು ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಿಲ್ಲ, ಬದಲಿಗೆ ಅವೇ ನಮ್ಮನ್ನು ಬಳಸುತ್ತಿವೆ. ಪ್ರಜ್ಞಾವಂತರು ಕೇವಲ ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಮ್ ಗಳಲ್ಲಿ ಒಂದು ಸ್ಟೇಟಸ್ ಹಾಕಿದರೆ ಮಾತ್ರ ಸಾಲದು. ಅವುಗಳ ಬಗ್ಗೆ ಧ್ವನಿ ಎತ್ತಿ ಮಾತಾಡಬೇಕಾಗುತ್ತದೆ. ಹೋರಾಟ ಅಣಿಗೊಳಿಸಬೇಕಾಗುತ್ತದೆ.

ಭಾರತದ ಏಳಿಗೆಗಾಗಿ ಶ್ರಮ ಪಡಬೇಕಾದ ಯುವಜನತೆ ರಾಜಕೀಯ ಜಾಲಕ್ಕೆ ಸಿಕ್ಕಿಬಿದ್ದು ದಾರಿ ತಪ್ಪುತ್ತಿದ್ದಾರೆ. ಐಕ್ಯತೆ–ಸೌಹಾರ್ದತೆ ಬಗ್ಗೆ ಮಾತಾಡಬೇಕಾದ ಯುವಜನ ಜಾತಿ–ಧರ್ಮದ ಜಗಳಗಳಲ್ಲಿ ತಲ್ಲೀನರಾಗಿದ್ದಾರೆ. ಕೋಮುವಾದಿ ಸಂಘಟನೆಗಳು ನಿರುದ್ಯೋಗಿ ಯುವಜನರನ್ನು ಬಳಸಿಕೊಂಡು ಸಮಾಜದಲ್ಲಿ ಕೋಮುವಾದ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ.

ನಮ್ಮ ಕಷ್ಟಗಳಿಗೆ ಪರ್ಯಾಯವಲ್ಲ, ಪರಿಹಾರ ಬೇಕು. ಕೇಸರಿ–ಕಪ್ಪು–ಬಿಳಿ–ಹಸಿರು ಬಣ್ಣಗಳ ಹೆಸರಲ್ಲಿ ಯುವಜನರ ಸಾಮರ್ಥ್ಯವನ್ನು ವ್ಯರ್ಥ ಮಾಡುತ್ತಿದ್ದಾರೆ. ನಾವು ಯುವಜನರು ನಮ್ಮ ಶಕ್ತಿಯನ್ನು ಅರಿಯಬೇಕು. ನಮ್ಮ ಮತದಾನವೆಂಬ ಅಸ್ತ್ರವನ್ನು ಸರಿಯಾಗಿ ಬಳಸಿಕೊಳ್ಳಬೇಕು. ಕೇಂದ್ರದ ಗದ್ದುಗೆಯಲ್ಲಿ ಕುಳಿತು ನಿರುದ್ಯೋಗ ಹೆಚ್ಚು ಮಾಡುವವರು ಅವರೇ ಮತ್ತು ಕೋಮು ಭಾವನೆ ಜನಸಾಮಾನ್ಯರಲ್ಲಿ ಬಿತ್ತಲು ನಮ್ಮ ನಿರುದ್ಯೋಗಿ ಯುವಸಮೂಹವನ್ನು ಬಳಸಿಕೊಳ್ಳುವವರೂ ಅವರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕೆಲಸ ಕೇಳುವ ಕೈಗಳಿಗೆ ಕೆಲಸ ಬೇಕೇ ಹೊರತು ತಲವಾರಗಳಲ್ಲ. ಕತ್ತಿಗಳನ್ನು ಹಿಡಿಯುವ ಕೈಗಳು ಪೆನ್ನನ್ನು ಹಿಡಿದು ದೇಶದ ಏಳಿಗೆಯ ಹಾದಿ ತುಳಿಯಬೇಕಿದೆ. ನಾವು ಯುವಜನರೆಲ್ಲ ಸರಿ–ತಪ್ಪುಗಳನ್ನು ಅರ್ಥ ಮಾಡಿಕೊಂಡು ನಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಿ ದನಿ ಎತ್ತಿ ಹೋರಾಡಬೇಕಿದೆ. ●

## ಮಹಿಳೆಯರನ್ನು ವಿಭಜಿಸುವ ಶಕ್ತಿಗಳನ್ನು...... ಪುಟ 8 ರಿಂದ

'ಬೇಟಿ ಬಚಾವೊ ಬೇಟಿ ಪಢಾವೊ' ಯೋಜನೆಯ ಸಾಮೂಹಿಕ ಪ್ರಜ್ಞೆಯಿಂದ ಜಾಸ್ತಿಯಾಗಿದೆ ಎಂದು ಸಮರ್ಥನೆ ಮಾಡಿ ಕೊಳ್ಳುತ್ತಾರೆ.

**ಬೇಟಿ ಬಚಾವೋ ಎಂದರೆ ಇದೇನಾ?**

ಕಳೆದ ವರ್ಷ ಆಗಸ್ಟ್ 15 ರಂದು ಕೆಂಪುಕೋಟೆಯ ಮೇಲೆ ಪ್ರಧಾನಿ ನರೇಂದ್ರ ಮೋದಿಯವರು ರಾಷ್ಟ್ರಧ್ವಜಾರೋಹಣ ಮಾಡಿ ಮಾತನಾಡುವಾಗ 'ಮಹಿಳೆಯರಿಗೆ ಗೌರವ ನೀಡಬೇಕು, ಅವರನ್ನು ನೋಡುವ ದೃಷ್ಟಿಗಳು ಬದಲಾಗಬೇಕು' ಎಂದು ಹೇಳಿದರು. ಆದರೆ, ತನ್ನ ತವರು ರಾಜ್ಯದಲ್ಲಿ ಬಿಲ್ಕಿಸ್ ಬಾನುವಿನ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ 11 ಆರೋಪಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಿಸುತ್ತಾರಲ್ಲಾ ಇವರಿಗೇನು ಹೇಳಬೇಕು? ಇದೇನಾ ಬೇಟಿ ಬಚಾವೊ ಅಂತ ಪ್ರಶ್ನೆಗಳು ಮೂಡುತ್ತವೆ. ಜನಾಂಗೀಯ ಗಲಭೆಯಲ್ಲಿ ಹೆಣ್ಣು ಮಕ್ಕಳನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದಾಗ ಮೌನವಹಿಸಿದ್ದು ಯಾಕೆ ಪ್ರಧಾನಿಗಳೇ? ಇದೇನಾ ಬೇಟಿ ಬಚಾವೋ ಎಂದು ದೇಶದ ಮಹಿಳೆಯರು ಪ್ರಶ್ನೆ ಕೇಳಬೇಕಿದೆ. ಕ್ರೀಡಾ ಪಟುಗಳ ಮೇಲೆ ಲೈಂಗಿಕ ಕಿರುಕುಳ ನೀಡಿದ ಸಂಸದರ ರಕ್ಷಣೆಗೆ ನಿಲ್ಲುವುದೇ 'ಬೇಟಿ ಬಚಾವೊ' ನಾ ಪ್ರಧಾನಿಗಳೇ ಉತ್ತರಿಸಿ.

ಕೇವಲ ಓಟಿಗಾಗಿ ಮಹಿಳೆಯರ ಬಗ್ಗೆ ಮಾತನಾಡುವುದಲ್ಲ, ಇದಕ್ಕೆ ರಾಜಕೀಯ ಇಚ್ಛಾಶಕ್ತಿ ಬೇಕು. ಲಿಂಗ ಸಮಾನತೆಗಳ ಕುರಿತು ಎಲ್ಲ ವಿಭಾಗಗಳಲ್ಲಿಯೂ ಅರಿವು ಮೂಡಿಸಬೇಕು. ಶಾಸನ ಸಭೆಗಳಲ್ಲಿ ಯಾವುದೇ ಕಂಡೀಷನ್ ಇಲ್ಲದೆ ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಬೇಕು. ಆಗ ಮಾತ್ರ ಮಹಿಳೆಯರ ಮೇಲಿನ ದೌರ್ಜನ್ಯ ನಿಯಂತ್ರಣಕ್ಕೆ ಕಡಿವಾಣ ಹಾಕಬಹುದು. ಹಾಗಾಗಿ ನಾವು ಈ ವರ್ಷದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದ್ವೇಷ ರಾಜಕಾರಣವನ್ನು ಸೋಲಿಸಿ, ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸಲು ಒತ್ತಾಯಿಸಿ ಆಚರಿಸೋಣ. ಜಾತಿ, ಭಾಷೆ, ಧರ್ಮಗಳ ಹೆಸರಿನಲ್ಲಿ ಮಹಿಳೆಯರನ್ನು ವಿಭಜಿಸುವ ಶಕ್ತಿಗಳನ್ನು ಸೋಲಿಸೋಣ. ದೌರ್ಜನ್ಯ ಮುಕ್ತ ಬದುಕಿಗಾಗಿ ಹೋರಾಡೋಣ ಬನ್ನಿ. ●

## ಅಪಾಯದ ಅಂಚಿನಲ್ಲಿ ಪ್ರಜಾಪ್ರಭುತ್ವ.... ಪುಟ 12 ರಿಂದ

ವರ್ಷ, ಪ್ರಜಾಪ್ರಭುತ್ವದ ವೈವಿಧ್ಯಗಳು (V-Dem) ತನ್ನ ವರದಿಯ ಯೋಜನೆಯಲ್ಲಿ, ಭಾರತವನ್ನು "ಚುನಾವಣಾ ನಿರಂಕುಶಾಧಿಕಾರ" ಸ್ಥಿತಿ ಎಂದಿದೆ. (ಅದು, ಈ ಹಿಂದೆ ನಿರಂಕುಶಾಧಿಕಾರ ಇಲ್ಲ ಎಂದಿತ್ತು) ಇದೀಗ, ಚುನಾವಣಾ ನಿರಂಕುಶ ಪ್ರಭುತ್ವ, ಚುನಾವಣಾ ಪ್ರಜಾಪ್ರಭುತ್ವಕ್ಕೆ ಸೀಮಿತ ಎಂದಿದೆ. ಈ ಹಿಂದೆ ಅದರ ಉದಾರ ಪ್ರಜಾಪ್ರಭುತ್ವದ ಪ್ರಮಾಣವನ್ನು ಇದೀಗ ತಗ್ಗಿಸಿದೆ. ಎಕನಾಮಿಸ್ಟ್ ಇಂಟೆಲಿಜೆನ್ಸ್ ವಿಭಾಗವು ಭಾರತವನ್ನು ಅದರ ಸಂಪೂರ್ಣ ಪ್ರಜಾಪ್ರಭುತ್ವವನ್ನು, ಈ ರೀತಿ ವರ್ಣಿಸಿದೆ. ಹೈಬ್ರಿಡ್ ಆಡಳಿತ ಎಂದಿದೆ. ಇದರ ಅರ್ಥವೆಂದರೆ "ದೋಷಪೂರಿತ ಪ್ರಜಾಪ್ರಭುತ್ವ" ಎಂದು ಹೇಳಿದೆ. ಪ್ರಜಾಪ್ರಭುತ್ವದ ಮೇಲಿನ ಆಕ್ರಮಣ ಮತ್ತು ನಿಗ್ರಹವು, ಹಿಂದುತ್ವ–ಕಾರ್ಪೊರೇಟ್ ಆಡಳಿತಾತ್ಮಕ ಮೈತ್ರಿಯಿಂದ ಹುಟ್ಟಿಕೊಂಡಿದೆ. ಒತ್ತಾಯ ಪೂರ್ವಕವಾಗಿ, ಹಳಸಿದ ಮತ್ತು ತಿರಸ್ಕೃತಗೊಂಡಿರುವ ನವ–ಉದಾರವಾದಿ ನೀತಿಗಳ ಮೂಲಕ ಸಮಾಜದ ಮೇಲೆ ಹಿಂದುತ್ವದ ಮೌಲ್ಯಗಳನ್ನು ಹೇರುವ, ಈ ಎರಡು ಬಗೆಯ ಇಬ್ಬಗೆಯ ನೀತಿಗಳ ಜಾರಿಗಾಗಿ, ಉನ್ನತ ಮಟ್ಟದಲ್ಲಿ ಸರ್ವಾಧಿಕಾರ ಆಡಳಿತದ ಅಗತ್ಯವಿದೆ. ಮೋದಿ ಸರಕಾರವು ಉದಾಹರಿಸಿರುವ ಹಿಂದುತ್ವದ ಸರ್ವಾಧಿಕಾರಿ ಆಡಳಿತದ ಅಸ್ತಿತ್ವವು ನಿರಂತರವಾಗಿದೆ. ಈ ಸರ್ವಾಧಿಕಾರಿ ಪ್ರವೃತ್ತಿ ಪ್ರಜಾಪ್ರಭುತ್ವ ಮತ್ತು ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಬೆದರಿಕೆಯನ್ನು ಸೂಚಿಸುತ್ತದೆ.

ಹೀಗಾಗಿ, ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ರಕ್ಷಿಸುವ ಹೋರಾಟವು ಕೇಂದ್ರ ವಿಷಯವಾಗಿದೆ.

*ಸಂಗ್ರಹ ಲೇಖನ: ನಾಗರಾಜ ನಂಜುಂಡಯ್ಯ*

## ಪೇಟಿಎಂ ಕುಸಿತ...... ಪುಟ 13 ರಿಂದ

**ಊಹಿಸಲೂ ಅಸಾಧ್ಯವಾದ ಬೆಳವಣಿಗೆ–ಹೇಗೆ ಸಾಧ್ಯ?**

ಈ ರೀತಿ ಅನುಮಾನಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆ ಮೂಡಬಹುದು. ಮೋದಿ ಅಧಿಕಾರಕ್ಕೆ ಬಂದ ನಂತರವೇ ಪೇಟಿಎಂ ಇಷ್ಟೊಂದು ಬೆಳೆದಿದೆ ಎಂಬುದನ್ನು ಗಮನಿಸಬೇಕಿದೆ.

2000 ರಲ್ಲಿ ಪ್ರಾರಂಭವಾದ One97 ಕಮ್ಯುನಿಕೇಷನ್ಸ್ ನಂತರದ 10 ವರ್ಷಗಳ ಕಾಲ ತಾನು ಏನು ಮಾಡಿದೆ ಎಂದು ಕೂಡ ದಾಖಲಿಸದೆ ನಾಮಮಾತ್ರದ ಕಂಪನಿಯಾಗಿ ಉಳಿದಿತ್ತು. ಇದು Paytm ಅನ್ನು 2010 ರಲ್ಲಿ ಪ್ರಾರಂಭಿಸಿದರೂ, ಹೆಚ್ಚಿನ ಬೆಳವಣಿಗೆ ಕಂಡುಬಂದಿಲ್ಲ. ಆದರೆ 2014 ರ ನಂತರದ ಬೆಳವಣಿಗೆಯು ಊಹಿಸಲೂ ಅಸಾಧ್ಯವಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ, ಭಾರತೀಯ ರೈಲ್ವೇಯು 2014 ರಲ್ಲಿ Paytm ವ್ಯಾಲೆಟ್ ಅನ್ನು ಅನುಮೋದಿಸಿತು, 2016 ರಲ್ಲಿ ನೋಟು ಅಮಾನ್ಯೀಕರಣದ ನಂತರ ಡಿಜಿಟಲ್ ವಹಿವಾಟುಗಳನ್ನು ಬೆಂಬಲಿಸುವ Paytm-e ಜಾಹೀರಾತಿನಲ್ಲಿ ಪ್ರಧಾನಿ ಮೋದಿ ಕಾಣಿಸಿಕೊಂಡಿದ್ದರು, Paytm ಪ್ರಮುಖವಾಗಿ ಫಾಸ್ಟ್ ಟ್ಯಾಗ್ ಸೇವೆಗಳಲ್ಲಿ ಕಾಣಿಸಿಕೊಂಡಿತು, Namo ಪ್ರಯಾಣ ಕಾರ್ಡ್‌ಗಳನ್ನು ವಿತರಿಸಲು Paytm ಅನ್ನು ಆಯ್ಕೆ ಮಾಡಿ ಮೋದಿಯವರಿಂದ ಪ್ರಾರಂಭವಾಯಿತು. ಈ ರೀತಿ ಪೌಷ್ಟಿಕಾಂಶವನ್ನು ಒದಗಿಸುವ ಮೂಲಕ ಪೇಟಿಎಂ ಅನ್ನು ಸಾಕುಪ್ರಾಣಿಯಾಗಿ ಬೆಳೆಸಲಾಯಿತು. ನಿಖರವಾಗಿ ಹೇಳಬೇಕೆಂದರೆ, ಇದನ್ನು ಸರ್ಕಾರ ಶಿಫಾರಸು ಮಾಡಿದ ಸಂಸ್ಥೆಯಾಗಿ ಸ್ಥಾಪಿಸಲಾಯಿತು.

**ಭ್ರಷ್ಟಾಚಾರದ ಹೊಸ ರೂಪ**

ಇಷ್ಟೆಲ್ಲಾ ನಡೆದರೂ, ಪದೇ ಪದೇ ನಿಯಮ ಉಲ್ಲಂಘನೆಗಾಗಿ ನಿಷೇಧಿಸಿದರೂ, ಅಪರಾಧ ಎಂದು ದಂಡ ವಿಧಿಸಿದರೂ, ಶೆಡ್ಯೂಲ್ಡ್ ಬ್ಯಾಂಕ್ ಅರ್ಹತೆ ಪಡೆದಿದೆ ಇತ್ಯಾದಿ ಗಮನಿಸಬೇಕಾದ ಅಂಶವಾಗಿದೆ. ಸರ್ಕಾರದ ಇಂತಹ ನೆರವಿನ ಫಲವಾಗಿ ಇಂದು Paytm ನಲ್ಲಿ 2 ಕೋಟಿಗೂ ಹೆಚ್ಚು ಫಾಸ್ಟ್ ಟ್ಯಾಗ್ ಖಾತೆಗಳಿವೆ. ಇವುಗಳಿಗೆ ಪ್ರತಿ ಫಾಸ್ಟ್ ಟೇಕ್ ಗೆ ರೂ. 500 ವರೆಗೆ ಠೇವಣಿ ಪಾವತಿಸಲಾಗಿದೆ. ಅದಕ್ಕೆ ಬಡ್ಡಿ ಕಟ್ಟುವ ಅಗತ್ಯವಿರಲಿಲ್ಲ ಮಾತ್ರವಲ್ಲದೇ ಪ್ರತಿ ಕಾರ್ಡ್ ವಿತರಣೆಗೆ ಪ್ರತ್ಯೇಕ 100 ರೂ. ಪಡೆಯುತ್ತದೆ. ಎಲ್ಲರಿಗೂ ತಕ್ಷಣ ಹೊಸ ಕಾರ್ಡ್ ಖರೀದಿಸುವಂತೆ ಆರ್‌ಬಿಐ ಸಲಹೆ ನೀಡಿದೆ. ಆ 2 ಕೋಟಿ ಜನ ಮತ್ತೆ 100 ರೂಪಾಯಿ ಕೊಡುತ್ತಾರೆ ಎನ್ನುವುದು ಭ್ರಷ್ಟಾಚಾರದ ಹೊಸ ರೂಪದಂತಿದೆ.

**ಈಗ ಅದು ಹೇಗೆ ಹೊರಬಂದಿತು?**

ಈ ಅವ್ಯವಹಾರಗಳ ವಿರುದ್ಧ ಕ್ರಮ ಕೈಗೊಳ್ಳಲು ರಿಸರ್ವ್ ಬ್ಯಾಂಕ್ ಹಲವು ಬಾರಿ ಪ್ರಯತ್ನಿಸಿದ್ದರೂ ಕೇಂದ್ರ ಸರಕಾರ ತಡೆ ಹಿಡಿದಿದೆ, ಅದಕ್ಕಾಗಿಯೇ ಹಲವು ಕ್ರಮಗಳನ್ನು ಕೈಬಿಡಲಾಗಿದೆ ಎನ್ನುತ್ತಾರೆ ಹಣಕಾಸು ವಲಯದ ತಜ್ಞರು. ಅದೇ ಸಮಯದಲ್ಲಿ, ಹಣಕಾಸು ಸಚಿವಾಲಯವು ಮಧ್ಯಪ್ರವೇಶಿಸಲು ಪ್ರಯತ್ನಿಸಿತು ಮತ್ತು ಕ್ರಮಕ್ಕೆ ಮುಂದಾಗಲು ಸಾಧ್ಯವಿಲ್ಲ ಎಂದು ಆರ್‌ಬಿಐ ನಿರಾಕರಿಸಿತು. ತನ್ನ ಅಧಿಕಾರದ ಅವಧಿ ಮುಗಿಯುತ್ತಿರುವುದು ಕೂಡ ಶೌರ್ಯಕ್ಕೆ ಕಾರಣವಾಗಿರಬಹುದು. ಅದೇನೇ ಇರಲಿ, Paytm mi ಅನ್ನು ರಕ್ಷಿಸಲು ಮೋದಿ ಸರ್ಕಾರವು ಕೈಗೊಂಡ ಪ್ರಯತ್ನಗಳು, ಅದು ಮಾಡಿದ ಭ್ರಷ್ಟಾಚಾರಗಳನ್ನು ಮರೆಮಾಚಲು ಮಾತ್ರ. ಹಾಗಾಗಿ, Paytm ಎಂಬುದು ವೈಯಕ್ತಿಕ ಖಾಸಗಿ ಕಂಪನಿಯ ಪತನವಲ್ಲ, ಆದರೆ ಬೃಹತ್ ಹಗರಣದ ಅಂತ್ಯ!

*–ಸಿಟಿ*

## ಚುಟುಕು

ಗುಜರಾತ್ ಗಲಭೆಯಲ್ಲಿ ಬಿಲ್ಕಿಸ್ ಬಾನು ಅವರನ್ನು ಅಮಾನುಷವಾಗಿ ಚಿತ್ರಹಿಂಸೆ ನೀಡಿದ ಆರೋಪಿಗಳಿಗೆ ಆಡಳಿತಗಾರರೇ ಸಹಾಯ ಮಾಡುತ್ತಿರುವ ದೇಶದಲ್ಲಿ ಪ್ರಧಾನಿಯವರ ನಾರಿಶಕ್ತಿ ಘೋಷಣೆ ಹೇಗೆ ಅನುಷ್ಠಾನವಾಗುತ್ತದೆ? ಬಿಲ್ಕಿಸ್ ಬಾನು ಪ್ರಕರಣದಲ್ಲಿ ಆರೋಪಿಗಳು ಖುಲಾಸೆಗೊಂಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ 'ನಾರಿಶಕ್ತಿ' ಮಾದರಿಯಲ್ಲಿ ರಾಷ್ಟ್ರದ ಹೆಮ್ಮೆಯ ಕುಸ್ತಿಪಟುಗಳು ನ್ಯಾಯಕ್ಕಾಗಿ ಬೀದಿಗಿಳಿದು ಅಳುತ್ತಿರುವ ದೃಶ್ಯವೂ ಕಂಡು ಬಂದಿದೆ. ಈ ಎಲ್ಲಾ ವಿಷಯಗಳ ಬಗ್ಗೆ ಮೋದಿ ಮೌನ ವಹಿಸಿದ್ದಾರೆ. ಆದರೆ ಬಿಜೆಪಿಯ ಒಬ್ಬ ಮಹಿಳಾ ನಾಯಕಿ ಈ ಕುರಿತು ಪ್ರತಿಕ್ರಿಯಿಸಲಿಲ್ಲ. ದೇಶದ ಎಲ್ಲೆಡೆ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಗಳ ವಿರುದ್ಧ ಮಹಿಳಾ ಸಂಘ ಪ್ರತಿಭಟನೆ ಮಾಡಿದೆ.

*–ಬೃಂದಾ ಕಾರತ್*



## ಹಲವು ಮುಚ್ಚಿಟ್ಟ ಅಜೆಂಡಾಗಳನ್ನು ಒಳಗೊಂಡಿರುವ... ಪುಟ 11 ರಿಂದ

ಚಲನೆಯ ಅಗತ್ಯವನ್ನು ಕಡಿಮೆ ಮಾಡಲು, ಫಲಾನುಭವಿಗಳಿಗೆ ತಮ್ಮ ಬಳಕೆಯ ಧಾನ್ಯಗಳನ್ನು ಆಯ್ಕೆ ಮಾಡಿಕೊಳ್ಳಲು ಹೆಚ್ಚಿನ ಸ್ವಾಯತ್ತತೆಯನ್ನು ಒದಗಿಸಲು, ಆಹಾರದ ವೈವಿಧ್ಯತೆಯನ್ನು ಹೆಚ್ಚಿಸಲು, ಸೋರಿಕೆಯನ್ನು ಕಡಿಮೆ ಮಾಡಲು, ಉತ್ತಮ ಗುರಿಯನ್ನು ಸುಲಭಗೊಳಿಸಲು ಮತ್ತು ಆರ್ಥಿಕ ಸೇರ್ಪಡೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಎಂದು ಸರ್ಕಾರ ಈ ನೇರ ನಗದು ಯೋಜನೆಯನ್ನು ಸಮರ್ಥಿಸಿಕೊಳ್ಳುತ್ತಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಿಪಿಎಲ್ ಪಡಿತರ ಕುಟುಂಬಗಳಿಗೆ ಹೆಚ್ಚುವರಿಯಾಗಿ ತಲಾ 5 ಕೆ.ಜಿ. ಅಕ್ಕಿ ಕೊಡುವುದಾಗಿ ಹೇಳಿ, ನಂತರ ರಾಜ್ಯ ಸರ್ಕಾರ ಕೆ.ಜಿ. ಅಕ್ಕಿಗೆ 34 ರೂ. ಕೊಡುತ್ತೇವೆ ಎಂದರೂ ಕೇಂದ್ರ ಸರ್ಕಾರ ಹೆಚ್ಚುವರಿ ಅಕ್ಕಿ ಕೊಡಲು ನಿರಾಕರಿಸಿದಾಗ, ಅಕ್ಕಿಯ ಬದಲಾಗಿ 170 ರೂ. ಹಣವನ್ನು ನೇರ ನಗದು ಮೂಲಕ ಫಲಾನುಭವಿಗಳಿಗೆ ಕೊಡುತ್ತಿರುವುದೂ ಇದರ ಒಂದು ಭಾಗವಾಗಿದೆ ಎಂದರೆ ತಪ್ಪಾಗಲಾರದು.

**ಭಾರತದ ಆಹಾರ ನಿಗಮಗಳ ಖಾಸಗೀಕರಣ**

'ಭಾರತ್ ರೈಸ್' ಮಾರಾಟದ ಹಿಂದೆ ಭಾರತ ಆಹಾರ ನಿಗಮಗಳ (FCI) ಗೋದಾಮುಗಳ ಖಾಸಗೀಕರಣದ ಉದ್ದೇಶವೂ ಅಡಗಿದೆ. ಈಗಾಗಲೇ ಫುಡ್ ಕಾರ್ಪೊರೇಶನ್ ಆಫ್ ಇಂಡಿಯಾ (ಎಫ್.ಸಿ.ಐ.) ಗೋದಾಮುಗಳ ಕಾಲಿ ಇರುವ ಭೂಮಿಯನ್ನು ಖಾಸಗಿಯವರಿಗೆ ಕೊಡುವ ಕಾರ್ಯ ನಡೆದಿದೆ. ಕೇಂದ್ರ ಸರ್ಕಾರದ ಉದ್ಯಮವಾದ ಸೆಂಟ್ರಲ್ ವೇರ್ ಹೌಸಿಂಗ್ ಕಾರ್ಪೊರೇಷನ್ ಅನ್ನು ಖಾಸಗೀಕರಣ ಮಾಡಲು ಮೋದಿ ಸರ್ಕಾರ ಮುಂದಾಗಿದೆ. ಕೇಂದ್ರದಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ನಂತರ, ಸಾರ್ವಜನಿಕ ವಲಯದ ಸಂಸ್ಥೆಗಳ (ಪಿ.ಎಸ್.ಯು.) ಆಸ್ತಿ ನಗದೀಕರಣದ ಯೋಜನೆಯನ್ನು ಸರ್ಕಾರ ತಂದಿದೆ. ಸರ್ಕಾರ ಆಸ್ತಿ ನಗದೀಕರಣ ಪೈಪ್ ಲೈನ್ ಯೋಜನೆಗಳನ್ನು ಒಂದೊಂದಾಗಿ ಜಾರಿಗೆ ತರುತ್ತಿದೆ. ಅದರ ಭಾಗವಾಗಿ ಸಿಡಬ್ಲ್ಯೂಸಿ ಗೋದಾಮುಗಳ ಖಾಸಗೀಕರಣ ಮಾಡಲು ಹೊರಟಿದೆ. ದೇಶಾದ್ಯಂತ 54 ಸಿಡಬ್ಲ್ಯೂಸಿ ಗೋದಾಮುಗಳಲ್ಲಿನ 344 ಎಕರೆ ಭೂಮಿಯನ್ನು ಖಾಸಗೀಕರಣಕ್ಕಾಗಿ ರಿಯಲ್ ಎಸ್ಟೇಟ್ ಸಲಹಾ ಸೇವಾ ಸಂಸ್ಥೆ 'ನೈಟ್ ಫ್ರಾಂಕ್' ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಸಿಡಬ್ಲ್ಯೂಸಿ ಹೊಂದಿರುವ ಭೂಮಿಯಲ್ಲಿ ನೈಟ್ ಫ್ರಾಂಕ್ ಸುಮಾರು 2,152 ಕೋಟಿ ವೆಚ್ಚದಲ್ಲಿ ಸುಧಾರಿತ ಸೌಲಭ್ಯಗಳೊಂದಿಗೆ ಗೋದಾಮುಗಳನ್ನು ನಿರ್ಮಿಸುತ್ತದೆ. ಇದು 45 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಅವುಗಳನ್ನು ಸ್ವಾಧೀನಪಡಿಸಿಕೊಂಡು ವ್ಯವಹಾರ ಮಾಡುತ್ತದೆ.

ಖಾಸಗಿಯವರಿಂದ ಆಹಾರ ಧಾನ್ಯಗಳ ದಾಸ್ತಾನು ಹೆಚ್ಚುತ್ತಿದ್ದಂತೆ, ಸರ್ಕಾರದಿಂದ ಬೆಂಬಲ ಬೆಲೆಗೆ ಧಾನ್ಯಗಳ ಖರೀದಿ ಮತ್ತು ಅದನ್ನು ಶೇಖರಣೆ ಮಾಡುವ ಸಾಮಾಜಿಕ ಜವಾಬ್ದಾರಿಯಿಂದ ಸರ್ಕಾರ ಹಿಂದೆ ಸರಿಯುತ್ತದೆ. ಅಂತಿಮವಾಗಿ, ರೈತರಿಂದ ಬೆಂಬಲ ಬೆಲೆ ಕೊಟ್ಟು ಕೃಷಿ ಉತ್ಪನ್ನಗಳನ್ನು ಖರೀದಿಸುವ ಮತ್ತು ಪಡಿತರ ವ್ಯವಸ್ಥೆಯ ಮೂಲಕ ಧಾನ್ಯಗಳನ್ನು ವಿತರಣೆ ಮಾಡುವ ಸಾರ್ವತ್ರಿಕ ಪಡಿತರ ವ್ಯವಸ್ಥೆ ಇಲ್ಲದಂತಾಗುತ್ತದೆ.

**WTO, ಅಮೆರಿಕ ಮತ್ತು ಯೂರೋಪಿಯನ್ ರಾಷ್ಟ್ರಗಳ ಒತ್ತಡ**

ವಿಶ್ವ ವ್ಯಾಪಾರ ಸಂಸ್ಥೆಯ (WTO) 13ನೇ ಸಚಿವರ ಸಮ್ಮೇಳನ (MC13) 2024ರ ಫೆಬ್ರವರಿ 26 ರಿಂದ ಮಾರ್ಚ್ 1 ರವರೆಗೆ ಯುನೈಟೆಡ್ ಅರಬ್ ಎಮಿರೇಟ್ಸ್‌ನ ರಾಜಧಾನಿ ಅಬುಧಾಬಿಯಲ್ಲಿ ನಡೆಯಿತು. ನಮ್ಮ ರೈತರನ್ನು ರಕ್ಷಿಸಲು, ಕೆಲವು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀತಿ ಜಾರಿಯಲ್ಲಿದೆ. ಮತ್ತು ಆಹಾರ ಭದ್ರತೆಗಾಗಿ ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಆಹಾರ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದೇವೆ. ಈ ಎರಡೂ WTO ನಿಬಂಧನೆಗಳಿಗೆ ವಿರುದ್ಧವಾಗಿವೆ ಎನ್ನುತ್ತಾ, ಇವೆರಡನ್ನೂ ತೆಗೆದುಹಾಕಲು ಅಮೆರಿಕಾ ಮತ್ತು ಯೂರೋಪಿಯನ್ ರಾಷ್ಟ್ರಗಳು 2013 ರಿಂದ ಸಾಕಷ್ಟು ಒತ್ತಡ ಮಾಡುತ್ತಿವೆ. ಈ ಸಮ್ಮೇಳನದಲ್ಲಿಯೂ ಭಾರತ ಇದರ ಬಗ್ಗೆ ತನ್ನ ಆಕ್ಷೇಪ ವ್ಯಕ್ತಪಡಿಸಲಿಲ್ಲ.

ವಿಶ್ವ ವ್ಯಾಪಾರ ಸಂಸ್ಥೆಯನ್ನು ಸಮಾಧಾನಪಡಿಸಲು 2020 ರಲ್ಲಿ ನರೇಂದ್ರ ಮೋದಿ ಸರ್ಕಾರ ಮೂರು ಕೃಷಿ ಕಾನೂನುಗಳನ್ನು ತಂದಿತು. ನಂತರ ರೈತರ ಪ್ರತಿರೋಧಕ್ಕೆ ಮಣಿದು ಕ್ಷಮೆಯಾಚಿಸುವ ಮೂಲಕ ಈ ಮಸೂದೆಗಳನ್ನು ಹಿಂಪಡೆದರು. ಮೊದಲನೆಯದು ವಾಸ್ತವ, ಎರಡನೆಯದು ವಂಚನೆ. ಅಂತಿಮ ಫಲಿತಾಂಶವೆಂದರೆ ಶ್ರೀಮಂತ ದೇಶಗಳ ಒತ್ತಡವು ಹೆಚ್ಚಿನ ಕೆಲಸವನ್ನು ಮಾಡುತ್ತಿದೆ.

ರೈತರು ಬೆಳೆಯುವ ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ, ಎಫ್.ಸಿ.ಐ. ಗೋದಾಮುಗಳು ಮತ್ತು ಪಡಿತರ ವ್ಯವಸ್ಥೆ ಉಳಿಯಬೇಕೆಂದರೆ, ಇವೆಲ್ಲದರ ಫಲಾನುಭವಿಗಳಾದ ರೈತರು, ಕಾರ್ಮಿಕರು ಮತ್ತು ಜನಸಾಮಾನ್ಯರು ಒಟ್ಟಾಗಿ ಧ್ವನಿ ಎತ್ತಿ ಹೋರಾಟ ನಡೆಸುವುದೊಂದೇ ಈಗಿರುವ ಮಾರ್ಗ. ●

## ರಾಜಕೀಯದಲ್ಲಿ ಮಹಿಳಾ ಪ್ರಾತಿನಿಧ್ಯ....... ಪುಟ 10 ರಿಂದ

ಮಾನದಂಡಗಳಿಂದಾಗಿ ಓಟಿನ ಹಕ್ಕು ಇರದಂತಹ ಹಿನ್ನಲೆಯಿಂದ ಮಹಿಳೆ ಇಲ್ಲಿಯವರೆಗೂ ನಡೆದು ಬಂದ ಹಾದಿಯಲ್ಲಿ ಓಟು ಹಾಕಲು ಹೋರಾಟ, ಮಹಿಳಾ ಮೀಸಲಾತಿಗಾಗಿ ಹೋರಾಟ, ಸ್ಪರ್ಧೆಗೆ ವಿಧಿಸಿರುವ ಅವೈಜ್ಞಾನಿಕ ಮಾನದಂಡಗಳ ವಿರುದ್ಧ ಹೋರಾಟ, ಗೆದ್ದ ಮಹಿಳೆಯರು ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಬೇಕಿರುವ ಹೋರಾಟವು ಸೇರಿ ಮಹಿಳೆಯರ ರಾಜಕೀಯ ಬದುಕಿನ ದುರ್ಗಮ ಹಾದಿಯನ್ನು ತೆರೆದಿಟ್ಟಿದೆ. ಮಹಿಳಾವಾದಿ ಚಾರ್ಲೆಟ್ ಅವರು ಹೇಳುವಂತೆ ಮಹಿಳೆಯರಲ್ಲದೇ ಬೇರೆ ಯಾವುದೇ ವರ್ಗದ ಜನರನ್ನು ಹೀಗೆ ಹಿಂಸಿಸಿದ್ದರೆ, ರಾಜಕೀಯ ತುರ್ತು ಪರಿಸ್ಥಿತಿ ಎಂದು ಘೋಷಿಸಲಾಗುತ್ತಿತ್ತು ಎಂಬುದು ಮಹಿಳೆಯರ ಸಮಸ್ಯೆಗಳ ಕುರಿತ ಸರ್ಕಾರದ ಧೋರಣೆಯನ್ನು ಹೇಳುತ್ತದೆ. ಪುರುಷ ಜನಪ್ರತಿನಿಧಿಗಳು ಜಾತಿ, ವರ್ಗ, ಧರ್ಮದ ತಾರತಮ್ಯಗಳನ್ನು ಎದುರಿಸಿದರೆ ಮಹಿಳೆ ಇವೆಲ್ಲದರೊಂದಿಗೆ ಲಿಂಗ/ಜೆಂಡರ್ ಆಧಾರದ ತಾರತಮ್ಯವನ್ನು ಎದುರಿಸಬೇಕು. ಒಂದು ಗ್ರಾಮ ಪಂಚಾಯಿತಿಯ ಅಧ್ಯಕ್ಷ/ಅಧ್ಯಕ್ಷೆ ಆ ಗ್ರಾಮದ ಪ್ರಥಮ ಪ್ರಜೆ. ಆಕೆಗೆ ಸಿಗಬೇಕಾದ ಸಾಂವಿಧಾನಿಕ ಗೌರವ ಸಿಗುತ್ತಿದೆಯಾ ಎಂದರೆ ಖಂಡಿತಾ ಇಲ್ಲ ಎಂದೇ ಹೇಳಬಹುದು. ಎಷ್ಟೋ ಕಡೆಗಳಲ್ಲಿ ದಲಿತ ಅಧ್ಯಕ್ಷೆಯನ್ನು ಸಾರ್ವಜನಿಕ ಕಾರ್ಯಕ್ರಮಗಳಿಗೆ ಕರೆಯುವುದೇ ಇಲ್ಲವೆಂಬುದು ಜನವಾದಿಯ ಹಲವು ರಾಜ್ಯಗಳ ಅನುಭವವಾಗಿದೆ.

ಸಾಮಾಜಿಕ ಪ್ರಜಾಪ್ರಭುತ್ವ, ಆರ್ಥಿಕ ಪ್ರಜಾಪ್ರಭುತ್ವ, ರಾಜಕೀಯ ಪ್ರಜಾಪ್ರಭುತ್ವ ಒಂದಕ್ಕೊಂದು ಬೆಸೆದುಕೊಂಡ ಅಂಶಗಳಾಗಿದೆ. ಈ ಹಿನ್ನಲೆಯಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳು ಒಪ್ಪಿತ ಮೌಲ್ಯಗಳಾಗಲು ಬಹುಮುಖಿ ನೆಲೆಯ ಪ್ರಯತ್ನಗಳಾಗಬೇಕು. ಜಗತ್ತಿನ ಪ್ರಥಮ ಸಮಾಜವಾದಿ ಸೋವಿಯತ್ ರಷ್ಯಾ ದೇಶದಲ್ಲಿ 1926ರಲ್ಲಿ ಕುಟುಂಬ ಸಂಹಿತೆಯನ್ನು ಜಾರಿಮಾಡಿದರು. ಈ ಕಾನೂನು ಈಗಲೂ ಜಗತ್ತಿನಲ್ಲಿಯೇ ಲಿಂಗ ಸಮಾನತೆಯ ಅತ್ಯಂತ ಪ್ರಗತಿಪರ ಕಾನೂನಾಗಿದೆ. ವಿವಾಹದೊಂದಿಗೆ ವಿವಾಹ ವಿಚ್ಛೇದನದ ಹಕ್ಕು, ಜೀವನಾಂಶದ ಹಕ್ಕು, ಕಡ್ಡಾಯ ವಿವಾಹ ದಾಖಲಾತಿ, ಸಮಾನ ವೈವಾಹಿಕ ಆಸ್ತಿಯ ಹಕ್ಕು, ವಿವಾಹೇತರ ಸಂಬಂಧಗಳಲ್ಲಿ ಜನಿಸಿದ ಮಕ್ಕಳಿಗರ ತಾಯ್ತಂದೆಯರಾಗಿರುವ ಹಕ್ಕುಗಳನ್ನು ನೀಡಲಾಗಿದೆ. 18 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆಯರಿಗೆ ಸಮಾನ ಮತದ ಹಕ್ಕನ್ನು ನೀಡಿದ ದೇಶ ಸೋವಿಯತ್ ರಷ್ಯಾ. ಭೂಮಿ ಸಂಹಿತೆಯ ಮೂಲಕ ಭೂಮಿಯ ಹಕ್ಕಿನಲ್ಲಿ ಲಿಂಗ ಸಮಾನತೆಯನ್ನು ನೀಡಿತು. ಸಮಾನತೆಯನ್ನು ಒಂದು ಮೌಲ್ಯವಾಗಿ ಒಪ್ಪಿಕೊಂಡಿರುವ ಕ್ಯೂಬಾದಲ್ಲಿ ಅತಿಹೆಚ್ಚು ಮಹಿಳಾ ಪ್ರಾತಿನಿಧ್ಯವಿರುವುದನ್ನು ನೋಡಬಹುದು. ಅದೇ ರೀತಿ ನಮ್ಮ ದೇಶದಲ್ಲಿ ಕೇರಳದಲ್ಲಿ ಮಹಿಳೆಯರಿಗೆ ದೇವಸ್ಥಾನ ಪ್ರವೇಶದಂತಹ ದಿಟ್ಟ ನಿಲುವುಗಳನ್ನು ಕೈಗೊಂಡ ಪಕ್ಷ ಸಿ.ಪಿ.ಎಂ.ಪಕ್ಷ, ವಿದ್ಯಾರ್ಥಿನಿಯರಿಗೆ ಹೆರಿಗೆ ರಜೆ, ಮುಟ್ಟಿನ ರಜೆಯಂಥಹ ರಾಜಕೀಯ ನಿರ್ಧಾರಗಳನ್ನು ಕೈಗೊಂಡಿದ್ದು ಇಡೀ ದೇಶಕ್ಕೆ ಮಾದರಿಯ ಕ್ರಮಗಳಾಗಿವೆ. ಆದರೆ ದೇಶದ ರಾಜಕಾರಣ ಮಹಿಳೆಯರ ಪಾಲಿಗೆ ಕರಾಳವೇ ಆಗಿದೆ. ಮನುವಾದಿ ಸಿದ್ಧಾಂತದ ಆಧಾರದ ಸಂವಿಧಾನವಿರಬೇಕೆಂದು ಹೇಳುವ ಬಿ.ಜೆ.ಪಿ ನೇತೃತ್ವದ ಕೇಂದ್ರ ಸರ್ಕಾರ ಇಡೀ ಸಂವಿಧಾನವನ್ನೇ ಬುಡಮೇಲು ಮಾಡಿ ಅಸಮಾನತೆಯನ್ನೇ ಮೌಲ್ಯವಾಗಿಸಲು ಹೊರಟಿದೆ. ಹೋರಾಟಗಳಿಂದ ಪಡೆದ ಈ ಹಕ್ಕು ಅವಕಾಶಗಳ ಉಳಿವು ಉಳಿವನ್ನು ನಿರ್ಧರಿಸುವ ಈ ಲೋಕಸಭಾ ಚುನಾವಣೆಗಳಲ್ಲಿ ದ್ವೇಷ ರಾಜಕಾರಣದ ಬಿ.ಜೆ.ಪಿಯನ್ನು ಸೋಲಿಸಿ ಮಹಿಳೆಯರ ಪ್ರಜಾಸತ್ತಾತ್ಮಕ ಹಕ್ಕುಗಳ ಉಳಿವಿಗಾಗಿ ಹೋರಾಡಬೇಕಿದೆ.

**ಸಮಾಜದ ಪ್ರಗತಿಯನ್ನು ಮಹಿಳೆಯರ ಸ್ಥಾನಮಾನಗಳಿಂದ ಮಾತ್ರ ಅಳಿಯಲು ಸಾಧ್ಯ–ಕಾರ್ಲ್‌ಮಾರ್ಕ್ಸ್.** ●

**ಅಂತರಾಷ್ಟ್ರೀಯ ಮಹಿಳಾ ದಿನದ ಸಂದರ್ಭದಲ್ಲಿ ಇನ್ನಷ್ಟು ವಿಶೇಷ ಲೇಖನಗಳು ಮುಂದಿನ ವಾರದಲ್ಲಿ.**

NEW No. MAG(3)/NPP/205/2021-2022
JANASHAKTHI KANNADA VARA PATRIKE March 11-17, 2024 Price: Rs. 10/- Date of Publication: 8 March 2024 RNI No. KARKAN /2006/17926 Posted on 12-03-2024
Posted at BG PSO, BG - 560026 **Posted at Periodical Rate -** Rs. 2



# ಗಂಡಾಳ್ವಿಕೆ ಸಮಾಜಕ್ಕೆ ಹಿಡಿದ ಕನ್ನಡಿ ‘ಕಾಕದೋಷ’ ನಾಟಕ

ಪ್ರಸ್ತುತ ಸಮಾಜ ಎದುರಿಸುತ್ತಿರುವ ಆಂತರಿಕ ಮತ್ತು ಬಾಹ್ಯ ಒತ್ತಡ ಹಾಗೂ ಸಮಸ್ಯೆಗಳನ್ನು ಅತ್ಯಂತ ಮನಮುಟ್ಟುವ ರೀತಿಯಲ್ಲಿ ಕಾಕದೋಷ ನಾಟಕದಲ್ಲಿ ಕಟ್ಟಿಕೊಡಲಾಗಿದೆ.

ಇಂದಿನ ಸಮಾಜ ಶತಮಾನಗಳಿಂದ ಅನುಸರಿಸಿಕೊಂಡು ಬಂದಿರುವ ಆಚರಣೆಗಳು, ಸಂಪ್ರದಾಯಗಳನ್ನು ಆದುನಿಕ ಜಗತ್ತು ಮರೆತಿದೆ. ಅದರಿಂದಾಗಿಯೇ ನಮ್ಮೆಲ್ಲಾ ಸಮಸ್ಯೆಗಳು ಮತ್ತಷ್ಟು ಉಲ್ಬಣಗೊಂಡಿವೆ. ನಾವು ಈ ಎಲ್ಲಾ ದೋಷಗಳನ್ನು ನಿವಾರಿಸಿಕೊಳ್ಳಲು ದಹಿಕವಾಗಿ ನಮ್ಮಿಂದ ಇಲ್ಲವಾಗಿರುವ ಹಿರಿಯರಿಗೆ ಕಾರ್ಯ ಮಾಡಿ ಊಟ ಹಾಕಬೇಕು, ಇಲ್ಲದಿದ್ದರೆ ಅವರು ಕಾಗೆಯ ರೂಪದಲ್ಲಿ ಕಾಡುತ್ತಾರೆ. ಎನ್ನುವ ಮನಸ್ಥಿತಿಯನ್ನು ಇಟ್ಟುಕೊಂಡು ತಮ್ಮ ಸುತ್ತ ನಡೆಯುವ ಎಲ್ಲ ಘಟನೆಗಳಿಗೂ ಆ ದೋಷಗಳೇ ಕಾರಣ ಎಂದು ಭಾವಿಸಿ ಬದುಕು ನಡೆಸುತ್ತಿರುವ ಅಜ್ಜಿ.

ಮತ್ತೊಂದೆಡೆ ತನ್ನ ಗಂಡನಿಂದ ಪಡಬಾರದ ಕಷ್ಟಗಳನ್ನು ಪಟ್ಟು, ಆತನ ದೈಹಿಕ ಮತ್ತು ಮಾನಸಿಕವಾದ ಎಲ್ಲಾ ಚಿತ್ರ ಹಿಂಸೆಗಳನ್ನು ತನ್ನ 'ಸಂಸಾರದ ಒಳಿತಿಗಾಗಿ' ಸಹಿಸಿಕೊಳ್ಳುತ್ತಾ, ಈ ವಾತಾವರಣ ತನ್ನ ಮಗನನ್ನು ಹಾಳು ಮಾಡುತ್ತದೆ. ಹಾಗಾಗಿ ಅವನನ್ನು ಪ್ರತ್ಯೇಕವಾಗಿ ಓದಿಸಬೇಕು, ಅವನನ್ನು ಒಳ್ಳೆಯ ಮನುಷ್ಯನನ್ನಾಗಿ ಬೆಳೆಸಬೇಕು ಎಂಬ ಒತ್ತಡಕ್ಕೆ ಸಿಲುಕಿ, ಎಲ್ಲವನ್ನೂ ತ್ಯಾಗ ಮಾಡುತ್ತಾ, ಜೀವನ ಸಾಗಿಸುವ ತಾಯಿ.

ಇನ್ನೊಂದೆಡೆ ಮನೆಯ ವಾತಾವರಣದಿಂದ ದೂರವಿದ್ದು ಅಲ್ಲಿಯ ಪರಿಸರಕ್ಕೆ ಹೊಂದಿಕೊಂಡು ತನ್ನೊಳಗೆ ಒಂದು ಗಂಡಾಳ್ವಿಕೆಯ ವ್ಯಾಘ್ರ ಮನಸ್ಥಿತಿಯನ್ನು ಬೆಳೆಸಿಕೊಂಡು ಹೆಣ್ಣನ್ನು ಒಂದು ಭೋಗದ ವಸ್ತುವಿನಂತೆ ನೋಡುವ ಜವಾಬ್ದಾರಿ ಇಲ್ಲದ ಮಗ.


ಇದರ ಸುತ್ತ ನಡೆಯುವ ಮಾನಸಿಕ ತಲ್ಲಣಗಳು ಮತ್ತು ಸಾಮಾಜಿಕ ಪರಿಣಾಮಗಳುಳ್ಳ ಅತ್ಯುತ್ತಮ ಕಥೆ ಆಧಾರಿತ ನಾಟಕ ಕಾಕದೋಷ.

ಸರಳ ಮತ್ತು ಸುಂದರ ರಂಗಸಜ್ಜೆಕೆಯಲ್ಲಿ ಮೂಡಿ ಬಂದ ಈ ನಾಟಕದಲ್ಲಿನ ಹಿನ್ನಲೆ ಸಂಗೀತ, ಅದಕ್ಕೆ ತಕ್ಕಂತೆ ರಂಗದ ಮೇಲಿನ ಕಲಾವಿದರ ನಟನೆ ಎರಡು ಗಂಟೆಗಳ ಕಾಲ ನಮ್ಮನ್ನು ಮಂತ್ರ ಮುಗ್ದರನ್ನಾಗಿಸಿತು. ಮಾತ್ರವಲ್ಲ ನಮಗೇ ಗೊತ್ತಿಲ್ಲದೆ ನಮ್ಮೊಳಗೆ ಆಕ್ರೋಶ, ಕಣ್ಣಂಚಲ್ಲಿ ನೀರು ಹೀಗೆ ನಮ್ಮೊಳಗೆ ಹಲವು ತಲ್ಲಣಗಳನ್ನು ಉಂಟು ಮಾಡುವ ಮೂಲಕ ನಾಟಕ ಗೆದ್ದಿದೆ.

ನಾಟಕಕ್ಕಿರುವ ಶಕ್ತಿಯೇ ಹಾಗೆ ಒಂದು ವಿಚಾರವನ್ನ ಕಾವ್ಯಾತ್ಮಕವಾಗಿ ಹೇಳುತ್ತಲೇ ಅದನ್ನು ಹಲವು ಮಗ್ಗುಲಲ್ಲಿ ಚಿಂತನೆಗೆ ಹಚ್ಚುತ್ತದೆ.

ಒಟ್ಟಾರೆ ನಾಟಕದ ಸಂದೇಶ ನಮ್ಮ ನಡವಳಿಕೆ, ಆಲೋಚನೆಗಳು, ಕಷ್ಟಗಳು ನಮ್ಮ ಅರಿವಿಗೆ ಬರದ ದೋಷಗಳಿಂದಾಗಿ ಬರುವಂತಹವಲ್ಲ ಮತ್ತು ಅವುಗಳನ್ನು ದೋಷ ನಿವಾರಣೆಯ ಕಾರ್ಯಗಳಿಂದಲೂ ಪರಿಹರಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಒಟ್ಟಾರೆ ಪರಿಸರ ನಮ್ಮನ್ನು ರೂಪಿಸುತ್ತದೆ. ಆ ಪರಿಸರವನ್ನು ಬದಲಾಯಿಸುತ್ತಾ ನಮ್ಮನ್ನು ನಾವು ಬದಲಾಯಿಸಿಕೊಳ್ಳಬೇಕೆ ಹೊರತು ದೋಷ ಪರಿಹಾರದ ಶಾಸ್ತ್ರಗಳಿಂದಲ್ಲ..

ಅತ್ಯಂತ ನುರಿತ ಕಲಾವಿದರಾದ ಗೌರಿ ದತ್ತು, ವಿದ್ಯಾಶ್ರೀ, ನಂದಿನಿ ಪಟವರ್ಧನ್, ಶೃಂಗಾ ಇವರೆಲ್ಲರೂ ನಮ್ಮ ಸುತ್ತಲೇ ಬದುಕುತ್ತಿರುವ ಪಾತ್ರಗಳಂತೆ ನಮ್ಮೊಂದಿಗೆ ಬೆರೆತು ಹೋಗುವಂತೆ ಅಭಿನಹಿಸಿದ್ದಾರೆ. ಅನುಪಮಾ ಚಂದ್ರಶೇಖರ್ ರವರ ಮೂಲ ಇಂಗ್ಲಿಷ್ ಕಥೆಯನ್ನ ಕನ್ನಡಕ್ಕೆ ಅನುವಾದಿಸಿ ವೆಂಕಟೇಶ್ ಪ್ರಸಾದ್ ಅತ್ಯುತ್ತಮವಾಗಿ ನಿರ್ದೇಶಿಸಿದ್ದಾರೆ. ಸುಷ್ಮಾ ನಿರ್ಮಿಸಿದ್ದಾರೆ.



*–ಎಚ್.ಆರ್. ನವೀನ್ ಕುಮಾರ್, ಹಾಸನ*

## ಬಿಟ್ಟುಕೊಡಿ ಹುಟ್ಟ

ನೂರಾರು ಅಲೆಗಳ ಸವರಿದ ಅವಳ ಕೈ
ವರಟು ತಲೆ ಸವರಿದಾಗ
ಕೋಮಲ ಬೆರಳು ಸೀಳಿ ರಕ್ತ ಹನಿಸಿತೆಂದು ಹೆದರಿದ್ದೆ,
ಊಂಹು ಹಾಗಾಲಿಲ್ಲ
ಹೃದಯ ತಂತಿಯಲಿ ಪ್ರೀತಿಯ ಹಾಡು ಮಿಡಿದಿತ್ತು
ನಿಂತ ನೆಲದಲ್ಲಿ ತೆನೆಗಿಲಕಿ ನಕ್ಕು ರೊಟ್ಟಿಯಾಗರಳಿತ್ತು.

ಅವಳು ಮನದಂಗಳದ ಕಳವಳ ಗುಡಿಸಿ
ಬೆಂಕಿ ಇಟ್ಟಾಗ ಬೂದಿಯಾದಳು ಅಂದುಕೊಂಡೆ
ಉಹುಂ ಹಾಗಾಲಿಲ್ಲ,
ಬೇಧವಿಲ್ಲದ ಪ್ರಸವ ನೋವಲಿ
ಗಂಡು ಹೆಣ್ಣಿಗೆ ಸಮಾನತೆಯ ಪ್ರೀತಿ ಎರೆದು
ಸುಟ್ಟ ಬೂದಿಯಿಂದೆದ್ದು ಹಾಲ ಹರಿಸಿದಳು.

ತನ್ನ ಅಕ್ಕರೆಯ ಕಣ್ಣೊಳಗೆ ತಾನೇ ಇಣುಕಿ
ಮಮತೆ ಕರುಳ ಹೆಣೆಯಲು ಹಾತೊರೆದಳು
ಅವಳಿಗೆ ತಿಳಿಯಲೇ ಇಲ್ಲ ತಾನು ಅವಳೆಂದು.
ಅವಳ ಮೊನೆಚ ಮಾತು ಅವನೆಟ್ಟ ಸರಹದ್ದಿನಲಿ ಮೌನ
ಅಕ್ಕರೆಯ ರೆಕ್ಕೆ ಬಿಚ್ಚಿದರೇನು ಹಾರುವ ಹಕ್ಕೆಲ್ಲಿ?
ಅವಮಾನದ ಕೊರೆತಕ್ಕೆ ಹಕ್ಕಿ ವಿಲವಿಲ.
ಎದೆಯ ಬೆಂಕಿಗೆ ಅಡುಗೆ ಮನೆ ಮೂಲಿಯಲಿ
ಬೆರಳ ಕಟ್ಟಿಗೆ ಮುರಿದ ಲಟಲಟ ಸದ್ದು.

ಅವಳು ಅವಳೆ,
ಸ್ವರ್ಗದರಮನೆಯ ಅಹಂಗೋಡೆಗೆ
ಜೋತಾಡುವ ಅಲಂಕಾರ ಚಿತ್ರ,
ಬದುಕೇ ಬದುಕಿನ ಶತ್ರುವಾದಾಗ
ಬುಕ್ಕಿ ನುರುಕಿ ಕ್ಯಾಕರಸಿ ತುಪ್ಪಿದ ತಾಂಬೂಲ,
ಬೃಹತ್ ಮಹಡಿಗೆ, ಊರ ಕಾರುಣ್ಯಕೆ, ಮನೆಯ ದೀಪಕೆ ಶಾಕ ಹರಿದು
ಜಲ ಉಕ್ಕಿಸಿ ಬೆಳಕಾದ ಕಲ್ಲು ಬಂಧಿ,
ಮರಕ್ಕೋ, ಗವಿಗೋ,
ಗರ್ಭಗುಡಿಯ ಕತ್ತಲ ಕೂಪಕ್ಕೊ,
ಮಾರೆಮ್ಮ, ಕಾಡಮ್ಮ, ಸುಡುಗಾಡಮ್ಮ,
ಎಲ್ಲದರ ಅಮ್ಮ ಎಲ್ಲಮ್ಮನಾಗಿ
ನೆಲದ ಮಕ್ಕಳಿಗೆ ರಕ್ತ ಮಾಂಸವ ತುಂಬಿದ ಅಸ್ತಿ.

ಬೆವರ ಸಮುದ್ರವ ಹರಸಿ
ಹುಟ್ಟು ಕದ್ದವರ ಪಯಣಕೆ ದೋಣಿ.
ಸುನಾಮಿ ಬುಸುಗುಡುವ ಮೊದಲೆ
ಬಿಟ್ಟುಕೊಡಿ ಹುಟ್ಟ!

*–ಪಿ.ಆರ್.ವೆಂಕಟೇಶ್*

**JANASHAKTHI KANNADA VARA PATRIKE:** Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**